# ಸಮಾಜ ವಿಜ್ಞಾನ I

## SOCIAL SCIENCE - I

## ತರಗತಿ IX

### ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2024

ST-421-1-SOC. SCI.-I (K)-9-VOL-1

# ರಾಷ್ಟ್ರ ಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

# ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**ಸಮಾಜ ವಿಜ್ಞಾನ I**

**9**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2024
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಸಮಕಾಲೀನ ಸಮಾಜವನ್ನು ತಿಳಿದುಕೊಳ್ಳಲು ಹಾಗೂ ಫಲಪ್ರದವಾಗಿ ಹಸ್ತಕ್ಷೇಪ ಮಾಡುವ ಮೂಲಕ ಜವಾಬ್ದಾರಿಯುತ ಪೌರರಾಗಿ ಜೀವನವನ್ನು ಸಾಗಿಸಲು ನಮಗೆ ಸಾಧ್ಯವಾಗಬೇಕು. ಇದಕ್ಕೆ ಸಮಾಜವಿಜ್ಞಾನ ಕಲಿಕೆಯು ನಮಗೆ ಸಹಾಯಕವಾಗುತ್ತದೆ. ಶಿಲಾಯುಗದಲ್ಲಿ ಮಾನವನ ಜೀವನದ ಪ್ರಾಥಮಿಕ ವಿಶೇಷತೆಗಳು ರೂಪುಗೊಂಡಲ್ಲಿಂದ ಪಾಠಪುಸ್ತಕವು ಆರಂಭವಾಗಿದೆ. ಅನಂತರ ವಿವಿಧ ಸಿದ್ಧಾಂತಗಳು, ಆರಂಭಕಾಲದ ರಾಷ್ಟ್ರಗಳು ಮತ್ತು ಭಾರತ ರಾಷ್ಟ್ರ ರೂಪೀಕರಣದ ಚರಿತ್ರೆಯನ್ನು ಚರ್ಚಿಸಲಾಗುತ್ತದೆ. ಇದರಲ್ಲಿ ಬೌದ್ಧ – ಜೈನ ಸಿದ್ಧಾಂತಗಳು ರೂಪುಗೊಂಡ ಹಿನ್ನಲೆಯ ಕುರಿತೂ ರಾಷ್ಟ್ರ ರೂಪೀಕರಣ ಮತ್ತು ಬೌದ್ಧಿಕ ವಿಕಾಸಗಳೊಳಗಿನ ಸಂಬಂಧದ ಕುರಿತೂ ವಿವರಿಸಲಾಗಿದೆ. ಭೂದಾನ ಮತ್ತು ಭಾರತೀಯ ಸಮಾಜ ಎಂಬ ಅಧ್ಯಾಯದಲ್ಲಿ ಭೂದಾನ ಪ್ರಕ್ರಿಯೆಯ ಮೂಲಕ ಭಾರತೀಯ ಸಮಾಜದಲ್ಲಿ ಫ್ಯೂಡಲ್ ವ್ಯವಸ್ಥೆ ರೂಪುಗೊಂಡ ಚರಿತ್ರೆಯನ್ನು ಅನಾವರಣಗೊಳಿಸಲಾಗಿದೆ. ಈ ಪುಸ್ತಕದಲ್ಲಿ ಭಾರತದ ಸಂವಿಧಾನದಲ್ಲಿರುವ ಅಧಿಕಾರ ವಿಕಾಸದ ಕುರಿತೂ ಭಾರತದ ಜನಸಂಖ್ಯಾ ಒಲವುಗಳ ಕುರಿತೂ ವಿಶದೀಕರಿಸಲಾಗಿದೆ. ಪ್ರಧಾನ ಮಾಹಿತಿ ಮೂಲಗಳನ್ನು ಪರಿಚಯಿಸಿಕೊಂಡು, ವಿಶ್ಲೇಷಿಸಿಕೊಂಡು ಹಾಗೂ ಅವುಗಳನ್ನು ವ್ಯಾಖ್ಯಾನಿಸಿ, ಜ್ಞಾನ ನಿರ್ಮಾಣವಾಗುವ ರೀತಿಯಲ್ಲಿ ಈ ಪಾಠಭಾಗಗಳನ್ನು ಕ್ರಮೀಕರಿಸಲಾಗಿದೆ. ವೈಜ್ಞಾನಿಕ – ತಾಂತ್ರಿಕ ಸೌಕರ್ಯಗಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಉಪಯೋಗ ಪಡಿಸಿಕೊಳ್ಳುವ ಅವಕಾಶಗಳನ್ನೂ ಒದಗಿಸಲಾಗಿದೆ. ಪ್ರಜಾಪ್ರಭುತ್ವ, ಜಾತ್ಯತೀತ ಮೌಲ್ಯಗಳೊಂದಿಗೆ ವೈಜ್ಞಾನಿಕ ಮತ್ತು ವೈವಿಧ್ಯತೆಗಳನ್ನು ಅಳವಡಿಸುವ ಮನೋಭಾವವು ಇದರ ಮೂಲಕ ಮಕ್ಕಳಲ್ಲಿ ರೂಪುಗೊಳ್ಳಬೇಕಾಗಿದೆ.

ಶುಭಹಾರೈಕೆಗಳೊಂದಿಗೆ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

## Advisor

**Dr. K. N. Ganesh**
Chairman, Kerala Council for Historical Research

## Chairman

**Dr. Shivadasan P.**
Professor, Department of History
Calicut University

## Experts

**Dr. K. K. Radha**
Principal (Rtd)
Govt. Womens College
Thiruvananthapuram

**Dr. Baiju K.C.**
Professsor & Vice Chancellor (in-charge)
Dept. of Economics
Central University, Kasaragod

**Dr. Pradeepkumar K.**
Associate Professor & Head
Department of Political Science
Govt. College Attingal, Thiruvananthapuram

## Members

**Bino P. Jose**
Assistant Professor,
St. Domenic College, Kanhirapalli, Kottayam

**Yoosaf Kumar S. M.**
Principal, G.H.S.S. Chithara, Kollam

**Aju S.**
H.S.S.T., History
G.H.S.S. Vechoochira Colony
Pathanamthittam

**Pradeepan T.**
H.S.S.T., History
G.H.S.S. Palayad, Kannur

**Najim A.**
Principal,
G.H.S.S. Kadaikkal, Kollam

**Rajan M.**
H.S.T., Social Science
G.H.S. Nagalasseri, Palakkad

**Shreejith M. Muthedath**
H.S.T., Social Science
C.N.N. G.H.S. Cherpp, Trissur

**Smt. Sandhyarani P. S.**
H.S.T., Social Science
G.H.S.S. Anjal West, Kollam

---

## Kannada Version

### Language Expert

**C.H. Rama Bhat**
Rtd. Professor (Kannada)
Govt. College Kasaragod

### Subject Expert

**Dr. Norbert Mascarenhas**
St. Philomena College, Puttur

### Participants

**Ganesh Kumar S.**
HST (SS), SGKHS, Kudlu

**Praveena V.**
HST (SS), SNHS, Perla

**Raviraj S.**
HST (SS), GVHSS Delampady

**Aruna K.C.**
HST (SS), SVVHS, Miyapadavu

**Ananda S.**
HST (SS), GHSS Pandi

---

## Academic Cordinator

**Suresh Kumar S.**
Research Officer, SCERT, Kerala

**Kerala Council of Educational Research and Training (SCERT) Kerala**
**Vidyabhavan, Poojappura, Thiruvannathapuram - 695 012**

# ಅನುಕ್ರಮಣಿಕೆ


| | | |
|---|---|---|
| 01 | ಶಿಲಾಯುಗದಿಂದ ಮುಂದಕ್ಕೆ | 07-24 |
| 02 | ಸಿದ್ಧಾಂತಗಳು ಮತ್ತು ಆರಂಭ ಕಾಲದ ರಾಷ್ಟ್ರಗಳು | 25-44 |
| 03 | ಭೂದಾನ ಮತ್ತು ಭಾರತೀಯ ಸಮಾಜ | 45-62 |
| 04 | ಭಾರತದ ಸಂವಿಧಾನ ಮತ್ತು ಅಧಿಕಾರ ವಿನ್ಯಾಸ | 63-82 |
| 05 | ಭಾರತದ ಜನಸಂಖ್ಯಾ ಒಲವುಗಳು | 83-100 |


ಈ ಪಾಠಪುಸ್ತಕದಲ್ಲಿ ಕಲಿಕೆಯ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.


ಹೆಚ್ಚಿನ ಓದಿಗಾಗಿ – ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.


ಕಲಿಕಾ ಚಟುವಟಿಕೆ


ಮೌಲ್ಯಮಾಪನ ಪ್ರಶ್ನೆಗಳು


ಮುಂದುವರಿದ ಚಟುವಟಿಕೆಗಳು


ಟಿಪ್ಪಣಿ ತಯಾರಿ


ಕೊಲಾಷ್ ತಯಾರಿ


ಪ್ಲಕಾರ್ಡ್ ತಯಾರಿ


ಚರ್ಚಿಸೋಣ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ** ;

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಕಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 1 ಶಿಲಾಯುಗದಿಂದ ಮುಂದಕ್ಕೆ

ಮಾನವನನ್ನು ಇತರ ಜೀವಜಾಲಗಳಿಂದ ಪ್ರತ್ಯೇಕಿಸುವ ಪ್ರಧಾನ ವಿಶೇಷತೆ ಮಾನವರ ಬುದ್ಧಿಶಕ್ತಿಯಾಗಿದೆಯೆಂದು ಕಳೆದ ಪತ್ರದಲ್ಲಿ ತಿಳಿದಿರಬಹುದಲ್ಲವೇ. ಬುದ್ಧಿಶಕ್ತಿ ಇಲ್ಲದಿರುತ್ತಿದ್ದರೆ ಇತರ ದೊಡ್ಡ ಕಾಡುಪ್ರಾಣಿಗಳು ಮನುಷ್ಯರನ್ನು ನಾಶಗೊಳಿಸುತ್ತಿದ್ದುವು. ಆದಿಕಾಲದ ಮಾನವನಿಗೆ ಶತ್ರುಗಳಿಗೆದುರಾಗಿ ಹೋರಾಡಲು ಪ್ರತ್ಯೇಕ ಆಯುಧಗಳಾವುದೂ ಇರಲಿಲ್ಲ. ಅವುಗಳಿಗೆದುರಾಗಿ ಕಲ್ಲುಗಳನ್ನು ಬಿಸಾಡಲು ಮಾತ್ರವೇ ಅವರಿಗೆ ಸಾಧ್ಯವಾಗುತ್ತಿತ್ತು. ಅನಂತರ ಅವರು ಕಲ್ಲುಗಳಿಂದ ಕೊಡಲಿ, ಈಟಿಗಳಂತಹ ಉಪಕರಣಗಳನ್ನೂ ಕಲ್ಲಿನ ಸೂಜಿಗಳನ್ನೂ ನಿರ್ಮಿಸಲು ಕಲಿತುಕೊಂಡರು. ಇಂತಹ ಅನೇಕ ಶಿಲಾಯುಧಗಳನ್ನು ಸೌತ್ ಕೆನ್ಸಿಂಗ್ಟನ್ (ಲಂಡನ್) ನ ವಸ್ತುಸಂಗ್ರಹಾಲಯದಲ್ಲೂ ಜಿನೀವಾದ ವಸ್ತುಸಂಗ್ರಹಾಲಯದಲ್ಲೂ ನೋಡಿದ್ದೇವಲ್ಲವೇ.

ಜವಹರ್‌ಲಾಲ್ ನೆಹರೂರವರ 'ತಂದೆ ಮಗಳಿಗೆ ಕಳುಹಿಸಿದ ಪತ್ರಗಳು' ಎಂಬ ಕೃತಿಯಿಂದ ಆಯ್ದ ಭಾಗವನ್ನು ಓದಿದಿರಲ್ಲವೇ. ಈ ಪತ್ರವು ಆದಿಮಾನವರ ಜೀವನದ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ.

ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಮಾನವರು ಯಾವ ವಿಧದ ಆಯುಧಗಳನ್ನು ಉಪಯೋಗಿಸುತ್ತಿದ್ದರು ಎಂಬುದನ್ನು ಅವರು ಇಲ್ಲಿ ಹೇಳುತ್ತಾರೆ?

- ಕಲ್ಲಿನ ಕೊಡಲಿ
- 
- 

ಆ ಕಾಲದ ಮಾನವರು ಈ ರೀತಿಯ ಆಯುಧಗಳನ್ನು ಯಾವ ಯಾವ ಅಗತ್ಯಗಳಿಗಾಗಿ ಉಪಯೋಗಿಸಿರಬಹುದು?

- ಮೃಗಗಳಿಂದ ರಕ್ಷಣೆ ಪಡೆಯಲು
- ಬೇಟೆಯಾಡಲು
- 

ಮೇಲೆ ಹೇಳಲಾದ ಅಗತ್ಯಗಳಿಗಾಗಿ ಮಾನವರು ಆರಂಭದಲ್ಲಿ ಶಿಲೆಗಳಿಂದ ತಯಾರಿಸಿದ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಅನಂತರದ ಕಾಲದಲ್ಲಿ ಶಿಲೆಗಳಿಗೆ ಬದಲಾಗಿ ಲೋಹದ ಆಯುಧಗಳನ್ನು ಬಳಸಲು ಆರಂಭಿಸಿದರು.

ಮಾನವರು ಉಪಕರಣಗಳನ್ನು ತಯಾರಿಸಲು ಉಪಯೋಗಿಸಿದ ವಸ್ತುಗಳ ಆಧಾರದಲ್ಲಿ ಪುರಾತತ್ವ ಶಾಸ್ತ್ರಜ್ಞರು ಮಾನವ ಚರಿತ್ರೆಯನ್ನು ವಿವಿಧ ಕಾಲಗಳಾಗಿ ವಿಂಗಡಿಸಿದ್ದಾರೆ.




## ಶಿಲಾಯುಗ (Stone Age)

ಮಾನವ ಚರಿತ್ರೆಯ ಮೊದಲ ಕಾಲವನ್ನು ಶಿಲಾಯುಗ ಎಂದು ಕರೆಯಲು ಕಾರಣವೇನೆಂದು ನೀವು ಚಿಂತಿಸಿರುವಿರಾ? ಆ ಕಾಲದಲ್ಲಿ ಮಾನವರು ಉಪಕರಣಗಳನ್ನು ಮತ್ತು ಆಯುಧಗಳನ್ನು ಪ್ರಧಾನವಾಗಿ ಶಿಲೆಗಳಿಂದ ನಿರ್ಮಿಸುತ್ತಿದ್ದರು. ಆದುದರಿಂದ ಇತಿಹಾಸ ತಜ್ಞರು ಆರಂಭ ಕಾಲವನ್ನು ಶಿಲಾಯುಗ ಎಂದು ಬಣ್ಣಿಸುತ್ತಾರೆ. ಶಿಲೆಗಳಿಂದ ತಯಾರಿಸಿದ ಉಪಕರಣಗಳ ನಿರ್ಮಾಣ ರೀತಿಯನ್ನು ಆಧಾರವಾಗಿರಿಸಿ ಶಿಲಾಯುಗವನ್ನು ಪ್ರಾಚೀನ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವೀನ ಶಿಲಾಯುಗ ಎಂದು ಮೂರಾಗಿ ವರ್ಗೀಕರಿಸಿದ್ದಾರೆ.

ಪ್ರತಿಯೊಂದರ ವಿಶೇಷತೆಗಳ ಕುರಿತು ತಿಳಿದುಕೊಳ್ಳೋಣ.

## ಪ್ರಾಚೀನ ಶಿಲಾಯುಗ (Paleolithic Age)

ಒರಟಾದ ಶಿಲಾಯುಧಗಳು ಪ್ರಾಚೀನ ಶಿಲಾಯುಗ ಕಾಲದ ಉಪಕರಣಗಳ ಪ್ರಮುಖ ವಿಶೇಷತೆಯಾಗಿದೆ. 'ಪಾಲಿಯೋಸ್' (ಪ್ರಾಚೀನ) 'ಲಿಥೋಸ್' (ಶಿಲೆ) ಎಂಬೀ ಎರಡು ಗ್ರೀಕ್ ಪದಗಳಿಂದ 'ಪಾಲಿಯೋಲಿಥಿಕ್' ಎಂಬ ಪದವು ರೂಪುಗೊಂಡಿದೆ.

ಉಪಕರಣಗಳ ನಿರ್ಮಾಣವು ಆದಿ ಮಾನವನ ಉಪಜೀವನ ಮಾರ್ಗದೊಂದಿಗೆ ಹೊಂದಿಕೊಂಡಿತ್ತು. ಉಪಕರಣಗಳ ಉಪಯೋಗದಲ್ಲಿ ಮೂರು ಪ್ರಮುಖ ಹಂತಗಳಿದ್ದುವೆಂದು ಪುರಾತತ್ವಶಾಸ್ತ್ರಜ್ಞರು ಗುರುತಿಸಿದ್ದಾರೆ. ಅವುಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| ಬಳಕೆ (Utilization) | ಲಭ್ಯವಿರುವ ಶಿಲೆಗಳ ಆಕಾರವನ್ನು ಬದಲಾಯಿಸದೆ ಉಪಯೋಗಿಸುವ ವಿಧಾನ. |
| ರೂಪ ಬದಲಾವಣೆ (Fashioning) | ಲಭ್ಯವಿರುವ ಶಿಲೆಗಳನ್ನು ಅಗತ್ಯಾನುಸಾರ ಆಕಾರದಲ್ಲಿ ಬದಲಾವಣೆ ತಂದು ಉಪಯೋಗಿಸುವ ವಿಧಾನ. |
| ಕ್ರಮೀಕರಣ (Standardisation) | ಪ್ರತಿಯೊಂದು ಅಗತ್ಯಗಳಿಗೂ ವಿಭಿನ್ನ ರೀತಿಯ ಉಪಕರಣಗಳ ನಿರ್ಮಾಣ ರೀತಿ. |

ಪ್ರಾಚೀನ ಶಿಲಾಯುಗದ ವಿವಿಧ ಹಂತಗಳಲ್ಲಿ ಆದಿಮಾನವನು ಉಪಯೋಗಿಸಿದ ವಿಭಿನ್ನ ಉಪಕರಣಗಳ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಗಮನಿಸಿ ಈ ಉಪಕರಣಗಳ ವಿಶೇಷತೆಗಳನ್ನು ಪಟ್ಟಿಮಾಡಿರಿ.


ಉರುಟಾದ ಕಲ್ಲಿನ ಆಯುಧಗಳು (Pebble tools)


ದ್ವಿಮುಖ ಮಾತೃಶಿಲಾ ಆಯುಧಗಳು (Biface core tools)


ಸೀಳುಕಲ್ಲಿನ ಆಯುಧಗಳು (Flake tools)

ST-421-2-SOC. SCI.-I (K)-9-VOL-1

## ಮಾತೃಶಿಲೆಗಳು ಮತ್ತು ಸೀಳುಕಲ್ಲುಗಳು
(Core and Flakes)

ಒಂದು ತುಂಡು ಶಿಲೆಯನ್ನು ಎರಡು ಅಥವಾ ಅದಕ್ಕಿಂತ ಹೆಚ್ಚು ತುಣುಕುಗಳಾಗಿ ತುಂಡರಿಸುವಾಗ ಅದರಲ್ಲಿ ಲಭಿಸುವ ಅತಿದೊಡ್ಡ ತುಣುಕನ್ನು ಮಾತೃಶಿಲೆ (Core) ಎಂದೂ ಚಿಕ್ಕ ತುಣುಕುಗಳನ್ನು ಸೀಳುಕಲ್ಲುಗಳು (flakes) ಎಂದೂ ಕರೆಯುತ್ತಾರೆ. ಮಾತೃಶಿಲೆಯಿಂದ ತಯಾರಿಸುವ ಉಪಕರಣಗಳನ್ನು ಮಾತೃಶಿಲಾ ಉಪಕರಣಗಳೆಂದೂ ಕಲ್ಲಿನ ಸೀಳುಗಳಿಂದ ತಯಾರಿಸುವ ಉಪಕರಣಗಳನ್ನು ಸೀಳು ಕಲ್ಲು ಉಪಕರಣಗಳೆಂದೂ ಕರೆಯುವರು.






ತುಂಡರಿಸಲಿರುವ ಶಿಲಾ ಆಯುಧಗಳು (Chopper-Chopping tools)

ಬ್ಲೇಡ್ ತಂತ್ರಜ್ಞಾನದ ವಿಧಾನದಲ್ಲಿ ತಯಾರಿಸಿದ ಶಿಲಾ ಆಯುಧಗಳು

ಪ್ರಾಚೀನ ಶಿಲಾಯುಗದ ಕೊನೆಯ ಕಾಲಘಟ್ಟದಲ್ಲಿ ಮಾನವರು ಶಿಲೆಗಳಿಂದ ತಯಾರಿಸಲಾದ ಆಯುಧಗಳ ಹೊರತಾಗಿ ಎಲುಬುಗಳಿಂದ ತಯಾರಿಸಿದ ಆಯುಧಗಳನ್ನು ಉಪಯೋಗಿಸಲು ಆರಂಭಿಸಿದರು. ಕೆಳಗೆ ಕೊಡಲಾದ ಚಿತ್ರಗಳನ್ನು ನಿರೀಕ್ಷಿಸಿರಿ.



ಚಿತ್ರದಲ್ಲಿ ಕಾಣುವ ಆಯುಧಗಳು, ನಿಮಗೆ ಪರಿಚಿತವಾಗಿರುವ ಯಾವುದಾದರೂ ಆಯುಧಗಳೊಂದಿಗೆ ಸಾಮ್ಯತೆ ಇರುವುದೇ? ಇದ್ದರೆ ಅವು ಯಾವುವೆಂದು ಬರೆಯಿರಿ.

- 
- 
- 

ಪ್ರಾಚೀನ ಶಿಲಾಯುಗದ ಆಯುಧಗಳ ನಿರ್ಮಾಣ ಮತ್ತು ಆ ಕಾಲದ ತಂತ್ರಜ್ಞಾನದ ಬೆಳವಣಿಗೆ ಎಂಬ ವಿಷಯದ ಕುರಿತು ಚರ್ಚಾಗೋಷ್ಠಿಯನ್ನು ಆಯೋಜಿಸಿರಿ.


ಶೋವೆ, ಫ್ರಾನ್ಸ್


ಲಾಸ್ಕೋ, ಫ್ರಾನ್ಸ್


ಆನೆದಂತದಿಂದ ನಿರ್ಮಿಸಿದ ಪ್ರತಿಮೆ ಸರೆಸ್ಕ್, ರಷ್ಯಾ


ಕ್ಯುಸಾಕ್ (ಫ್ರಾನ್ಸ್) ಗುಹೆಯಲ್ಲಿ ಕೊರೆದ ಚಿತ್ರಗಳು


ಸ್ಪೈನಿನ ಲಾ ಗರ್ಮ ಗುಹೆಯಿಂದ ಲಭಿಸಿದ ಎಲುಬುಗಳಲ್ಲಿನ ಕೆತ್ತನೆ

ಪ್ರಾಚೀನ ಮಾನವನ ಕಲಾಸೃಷ್ಟಿಗಳ ಚಿತ್ರಗಳನ್ನು ಮೇಲೆ ನೀಡಲಾಗಿದೆ. ಈ ಚಿತ್ರಗಳಿಂದ ನಿಮಗೆ ಯಾವೆಲ್ಲ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯ. ಪ್ರಾಚೀನ ಶಿಲಾಯುಗದ ಕೊನೆಯ ಕಾಲದಲ್ಲಿ ಸರಳವಾದ ಗೆರೆಗಳು, ಕೊರೆದ ಚಿತ್ರಗಳು, ಶಿಲ್ಪಗಳು ಮುಂತಾದುವುಗಳ ಮೂಲಕ 'ಆಶಯ ವಿನಿಮಯ' ಮಾಡುತ್ತಿದ್ದರು ಎಂದು ಈ ಚಿತ್ರಗಳಿಂದ ತಿಳಿದುಕೊಳ್ಳಬಹುದು. ಕಾಡುಪ್ರಾಣಿಗಳ ಚಿತ್ರ (ಶೋವೆ, ಲಾಸ್ಕೋ ಗುಹೆಗಳು), ಕಾಡುಪ್ರಾಣಿಯ ಹಾಗೂ ಮಹಿಳೆಯ ಕೆತ್ತನೆ (ಕ್ಯುಸಾಕ್ ಗುಹೆ) ವೀನಸ್ ಪ್ರತಿಮೆ (ಸರೆಸ್ಕ್, ರಷ್ಯಾ) ಮುಂತಾದುವುಗಳು ಆಚರಣೆ ಅಥವಾ ನಂಬಿಕೆಗೆ ಸಂಬಂಧಿಸಿ ನಿರ್ಮಿಸಿದ್ದಾಗಿರಬಹುದೆಂದು ಪುರಾತತ್ವ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಸ್ಪೈನಿನ ಲಾ ಗರ್ಮ ಗುಹೆಯಿಂದ ಲಭಿಸಿದ ಎಲುಬುಗಳಲ್ಲಿನ ಕೆತ್ತನೆಯು ಆ ಕಾಲದ ಮಾನವರ ಕಲಾ ನೈಪುಣ್ಯಕ್ಕೆ ಪುರಾವೆಯಾಗಿದೆ.

ಗುಹಾಚಿತ್ರಗಳನ್ನು ರಚಿಸಲು ವಿವಿಧ ರೀತಿಯ ಬಣ್ಣಗಳನ್ನು ಉಪಯೋಗಿಸುತ್ತಿದ್ದರು. ಗಿಡಗಳು, ಮರದ ತೊಗಟೆ, ಕಾಯಿ ಮುಂತಾದುವುಗಳನ್ನು ಅರೆದು ಅದರೊಂದಿಗೆ ಕೆಂಪು ಕಲ್ಲಿನ ಹುಡಿಯನ್ನು ಸೇರಿಸಿ ಬಣ್ಣಗಳನ್ನು ತಯಾರಿಸುತ್ತಿದ್ದರು. ಸೂರ್ಯಪ್ರಕಾಶವು ಲಭಿಸಲು ಅಸಾಧ್ಯವಾದ ಗುಹೆಯ ಒಳಭಾಗದ ಭಿತ್ತಿಗಳಲ್ಲಿ ಚಿತ್ರಗಳನ್ನು ರಚಿಸುತ್ತಿದ್ದರು. ಚೂಪಾದ ಶಿಲೆಗಳು, ಮೊನಚಾದ ಆಯುಧಗಳನ್ನು ಉಪಯೋಗಿಸಿ ಚಿತ್ರಗಳನ್ನು ರಚಿಸುತ್ತಿದ್ದರು. ಗುಹೆಗಳ ಮೇಲ್ಭಾಗದ ಭಿತ್ತಿಗಳಲ್ಲಿಯೂ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ಇಂತಹ ಚಿತ್ರ ಮತ್ತು ಕೆತ್ತನೆಗಳು ಪ್ರಾಚೀನ ಮಾನವನು ಗಳಿಸಿದ ವೈಜ್ಞಾನಿಕ ಪ್ರಗತಿ ಹಾಗೂ ತಂತ್ರಜ್ಞಾನದ ಹಿರಿಮೆಗಳಿಗೆ ಪುರಾವೆಗಳಾಗಿ ಪರಿಗಣಿಸಲಾಗುತ್ತದೆ.

ಪ್ರಾಚೀನ ಶಿಲಾಯುಗ ಕಾಲದ ಉಪಕರಣಗಳು, ಕಲೆ ಮುಂತಾದುವುಗಳಿಂದ ಮಾನವ ಜೀವನದ ಕುರಿತಾದ ಯಾವ ಯಾವ ಮಾಹಿತಿಗಳು ಲಭಿಸುತ್ತವೆ ಎಂದು ನೋಡೋಣ.




**ಬಾಂಡುಗಳು**

ನೂರಕ್ಕಿಂತ ಕಡಿಮೆ ಸದಸ್ಯರನ್ನು ಒಳಗೊಂಡ ಕಿರು ಗುಂಪುಗಳನ್ನು ಬಾಂಡುಗಳು ಎನ್ನುವರು. ರಕ್ತ ಸಂಬಂಧವು ಬಾಂಡಿನ ಸದಸ್ಯರನ್ನು ಪರಸ್ಪರ ಬೆಸೆಯುತ್ತದೆ.

ಭೂಪಟ 1




ಜಾಗತಿಕ ಭೂಪಟದಲ್ಲಿ ಗುರುತಿಸಲಾಗಿರುವ ಪ್ರಾಚೀನ ಶಿಲಾಯುಗ ಕೇಂದ್ರಗಳ ವಿಶೇಷತೆಗಳನ್ನು ಬರೆಯಿರಿ.

## ಮಧ್ಯ ಶಿಲಾಯುಗ (Mesolithic Age)

ಪ್ರಾಚೀನ ಶಿಲಾಯುಗದಿಂದ ನವೀನ ಶಿಲಾಯುಗದ ಕಡೆಗಿರುವ ಬದಲಾವಣೆಯ ಕಾಲವನ್ನು ಮಧ್ಯಶಿಲಾಯುಗ ಎನ್ನುವರು. 'ಮೆಸೋಸ್' (ಮಧ್ಯ), 'ಲಿಥೋಸ್' (ಶಿಲೆ) ಎಂಬ ಎರಡು ಗ್ರೀಕ್ ಪದಗಳಿಂದ 'ಮೆಸೋಲಿಥಿಕ್' ಎಂಬ ಪದವು ರೂಪುಗೊಂಡಿತು.

ಕೊಟ್ಟಿರುವ ಚಿತ್ರಗಳನ್ನು ಗಮನಿಸಿರಿ. ಪ್ರಾಚೀನ ಶಿಲಾಯುಗದ ಆಯುಧಗಳು ಹಾಗೂ ಚಿತ್ರದಲ್ಲಿ ಕಾಣುವ ಮಧ್ಯಶಿಲಾಯುಗದ ಆಯುಧಗಳ ನಡುವಿನ ವ್ಯತ್ಯಾಸವನ್ನು ಪರಿಶೀಲಿಸೋಣ.

- ಇವು ಪ್ರಾಚೀನ ಶಿಲಾಯುಗದಲ್ಲಿ ಉಪಯೋಗಿಸಿದವುಗಳಿಗಿಂತಲೂ ಸಣ್ಣ ಗಾತ್ರದ ಆಯುಧಗಳಾಗಿವೆ.
- ಇದು ಮೈಕ್ರೋಲಿಥ್ ಗಳು (Microliths) ಅಥವಾ ಸೂಕ್ಷ್ಮಶಿಲೆಗಳು ಎಂದು ಕರೆಯಲ್ಪಡುವ ಶಿಲಾಯುಧಗಳನ್ನು ಉಪಯೋಗಿಸಿದ ಕಾಲವಾಗಿದೆ.



ಮಧ್ಯ ಶಿಲಾಯುಗದ ಆಯುಧಗಳು

ಆದಿಮಾನವನ ಆಶಯ ವಿನಿಮಯದ ವಿಕಾಸವು ಪ್ರಾಚೀನ ಶಿಲಾಯುಗದ ಅಂತಿಮ ಹಂತದಲ್ಲಾಗಿತ್ತೆಂದು ಈ ಮೊದಲೇ ಸೂಚಿಸಲಾಗಿದೆಯಲ್ಲವೇ. ಆದರೆ ಭಾರತದಲ್ಲಿ ಈ ಬೆಳವಣಿಗೆಯನ್ನು ಕಾಣಲು ಸಾಧ್ಯವಾಗುವುದು ಮಧ್ಯಶಿಲಾಯುಗದಲ್ಲಾಗಿದೆ. ಮಧ್ಯಪ್ರದೇಶದ

ಭೀಂಬೇಟ್ಕ, ಲಖಜೋವಾರ್, ಕಥೋಟಿಯಾ ಎಂಬ ಗುಹಾಕೇಂದ್ರಗಳಲ್ಲಿನ ಕಲಾಸೃಷ್ಠಿಗಳು ಆದಿಮಾನವನ ಜೀವನ ರೀತಿಗಳನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುತ್ತವೆ.



ಭೀಂಬೇಟ್ಕ



ಲಖಜೋವಾರ್



ಕಥೋಟಿಯಾ



ಲಖಜೋವಾರ್



ಲಖಜೋವಾರ್



ಲಖಜೋವಾರ್

ಚಿತ್ರಗಳನ್ನು ಗಮನಿಸಿ ಅವುಗಳು ಪ್ರಾಚೀನ ಮಾನವನ ಯಾವ ಯಾವ ಜೀವನ ಸಂದರ್ಭಗಳನ್ನು ಸೂಚಿಸುತ್ತವೆ ಎಂಬುದನ್ನು ಪಟ್ಟಿ ಮಾಡಿರಿ.

- ಬೇಟೆಯಾಡುವುದು
-
-
-
-
-

ಈ ಚಿತ್ರಗಳಿಂದ ಮಧ್ಯ ಶಿಲಾಯುಗದ ಮಾನವರ ಜೀವನದ ಕುರಿತು ನಮಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆ ಕಾಲದ ವಿಶೇಷತೆಗಳನ್ನು ಕೆಳಗೆ ಕೊಡಲಾಗಿದೆ.

- ಮೈಕ್ರೋಲಿಥ್ ಗಳು ಅಥವಾ ಸೂಕ್ಷ್ಮಶಿಲಾಯುಧಗಳ ಉಪಯೋಗ.
- ಶೇಖರಣೆಗಳನ್ನಲ್ಲದೆ ಮೀನುಗಾರಿಕೆಯನ್ನು ಕೂಡಾ ಉಪಜೀವನಮಾರ್ಗವಾಗಿ ಸ್ವೀಕರಿಸಿದರು.
- ಪಶು ಸಂಗೋಪನೆ, ಮೃಗಗಳನ್ನು ಪಳಗಿಸಿ ಸಾಕಿದುದರ ಸೂಚನೆಗಳು.
- ಮನೋರಂಜನೆಗಳು.
- ಲಿಂಗದ ಆಧಾರದಲ್ಲಿ ಉದ್ಯೋಗದ ವಿಭಜನೆ.

| ಮಧ್ಯ ಶಿಲಾಯುಗ ಕೇಂದ್ರಗಳು | |
|---|---|
| ಸ್ಟಾರ್‌ಕಾರ್ | ಇಂಗ್ಲಂಡ್ |
| ಫಾಹಿಯಾನ್ ಗುಹೆ | ಶ್ರೀಲಂಕಾ |
| ಸರೈನಾ ಹರ್ ರಾಯ್ | ಭಾರತ (ಉತ್ತರ ಪ್ರದೇಶ) |

## ಸ್ಟಾರ್‌ಕಾರ್ : ಯುರೋಪಿನ ಮಧ್ಯ ಶಿಲಾಯುಗ ಕೇಂದ್ರ

ಇದು ಈಶಾನ್ಯ ಇಂಗ್ಲೆಂಡಿನಲ್ಲಿ ಪತ್ತೆಹಚ್ಚಲಾದ ಮಧ್ಯ ಶಿಲಾಯುಗದ ವಿಶಾಲವಾದ ಜನವಾಸಕೇಂದ್ರವಾಗಿದೆ. ಜೈವಾವಶಿಷ್ಟಗಳ ಸಾನಿಧ್ಯವು ಈ ಕೇಂದ್ರದ ಪ್ರಮುಖ ವಿಶೇಷತೆಯಾಗಿದೆ. ಶಿಲೆ ಹಾಗೂ ಎಲುಬುಗಳಿಂದ ತಯಾರಿಸಿದ ಉಪಕರಣಗಳು ಇಲ್ಲಿಂದ ಲಭಿಸಿವೆ. ಆರಂಭ ಕಾಲದ ಮರ ಕೆಲಸದ ಪುರಾವೆಗಳು ಇಲ್ಲಿಂದ ಲಭಿಸಿವೆ. ಆದಿಮಾನವರು ಈ ಪ್ರದೇಶವನ್ನು ತಾತ್ಕಾಲಿಕ ವಾಸಸ್ಥಳವಾಗಿ ಉಪಯೋಗಿಸಿದ್ದರೆಂದು ನಂಬಲಾಗಿದೆ.



## ಸರೈನಾ ಹರ್‌ರಾಯ್ : ಭಾರತದ ಮಧ್ಯ ಶಿಲಾಯುಗ ಕೇಂದ್ರ

ಸರೈನಾ ಹರ್ ರಾಯ್ ಉತ್ತರ ಪ್ರದೇಶದ ಪ್ರತಾಪ್ ನಗರ ಜಿಲ್ಲೆಯ ಶೃಂಗ ಸರೋವರದ ಸಮೀಪದಲ್ಲಿದೆ. ಮಧ್ಯ ಶಿಲಾಯುಗದ ಪ್ರಮುಖ ವಿಶೇಷತೆಯಾದ ಮೈಕ್ರೋಲಿಥ್‌ಗಳು ಇಲ್ಲಿಂದ ಲಭಿಸಿವೆ. ಇಲ್ಲಿಂದ ಲಭಿಸಿದ ಎತ್ತರವಿರುವ ಮಾನವರ ಅಸ್ಥಿಗಳು ಪ್ರಮುಖ ಪುರಾತತ್ವ ಪುರಾವೆಯಾಗಿವೆ. ಇದರ ಆಧಾರದಲ್ಲಿ ಪುರುಷರ ಎತ್ತರವು 180 ಸೆಂಟಿಮೀಟರ್ ಹಾಗೂ ಮಹಿಳೆಯರ ಎತ್ತರವು 170 ಸೆಂಟಿಮೀಟರ್ ಇತ್ತೆಂದು ತಿಳಿಯಲಾಗಿದೆ. ಬೇಟೆಯಾಡಲು ಬಿಲ್ಲು ಮತ್ತು ಬಾಣಗಳನ್ನು ಉಪಯೋಗಿಸಿದ್ದಾರೆಂದು ಊಹಿಸಲಾಗಿದೆ. ಬೀಜಗಳ ಸಂಗ್ರಹ ಮತ್ತು ಶೇಖರಣೆಗಳಿಗೆ ಪ್ರಾಣಿಗಳ ಚರ್ಮವನ್ನು ವಸ್ತ್ರವಾಗಿ ಉಪಯೋಗಿಸಿದ್ದರೆಂಬುದಕ್ಕೂ ಪುರಾವೆಗಳಿವೆ.

ಪ್ರಾಚೀನ ಶಿಲಾಯುಗ ಹಾಗೂ ಮಧ್ಯ ಶಿಲಾಯುಗದ ಮಾನವ ಜೀವನದ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.

## ನವೀನ ಶಿಲಾಯುಗ (Neolithic Age)

ಇದು ಮಾನವ ಜೀವನದಲ್ಲಿ ಸಮಗ್ರ ಬದಲಾವಣೆಗೆ ನಾಂದಿ ಹಾಡಿದ ಕಾಲವಾಗಿದೆ. 'ನಿಯೋಸ್' (ನವೀನ), 'ಲಿಥೋಸ್' (ಶಿಲೆ) ಎಂಬೀ ಪದಗಳಿಂದ 'ನಿಯೋಲಿಥಿಕ್' ಎಂಬ ಪದವು ರೂಪುಗೊಂಡಿದೆ. ಗೋರ್ಡನ್ ಚೈಲ್ಡ್ ತನ್ನ ಕೃತಿಯಾದ "ಮ್ಯಾನ್ ಮೇಕ್ಸ್ ಹಿಮ್‌ಸೆಲ್ಫ್" (ಮಾನವನು ಸ್ವತಃ ನಿರ್ಮಿಸುತ್ತಾನೆ)ದಲ್ಲಿ ಮಾನವ ಜೀವನದ ಗತಿಯನ್ನು ಬದಲಾಯಿಸಿದ ನವೀನ ಶಿಲಾಯುಗದ ಎರಡು ಪ್ರಮುಖ ಬದಲಾವಣೆಗಳನ್ನು ಈ ರೀತಿಯಲ್ಲಿ ಸೂಚಿಸುತ್ತಾರೆ. ಅವುಗಳನ್ನು ಕೆಳಗೆ ನೀಡಲಾಗಿದೆ.

*"ಮಾನವ ತನ್ನ ಆಹಾರ ಲಭ್ಯತೆಯಲ್ಲಿ ನಿಯಂತ್ರಣವನ್ನು ಸಾಧಿಸಿದ್ದು ಮಾನವನ ಆರ್ಥಿಕ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆಗೆ ಕಾರಣವಾದ ಮೊದಲ ಕ್ರಾಂತಿಯಾಗಿದೆ. ಆಹಾರಯೋಗ್ಯವಾದ ಗಿಡ, ಬೇರು, ಸಸ್ಯಗಳನ್ನು ಆಯ್ಕೆ ಮಾಡಿ ನೆಡಲು, ಕೃಷಿಮಾಡಲು ಮತ್ತು ಉತ್ತಮಪಡಿಸಲು ಆರಂಭಿಸಿದನು. ತನಗೆ ಜಾನುವಾರುಗಳಿಗೆ ಒದಗಿಸಲು ಸಾಧ್ಯವಾಗುವ ಮೇವು, ಅವುಗಳ ಸಂರಕ್ಷಣೆ ಹಾಗೂ ನಿಯಂತ್ರಿಸಲು ಸಾಧ್ಯವಾಗುವ ಕೆಲವೊಂದು ಮೃಗಗಳನ್ನು ಪಳಗಿಸಿ ಸಾಕುವುದರಲ್ಲಿ ಮಾನವನು ಯಶಸ್ವಿಯಾದನು. ಮೇಲೆ ಹೇಳಲಾದ ಎರಡೂ ಕಾರ್ಯಗಳು ಪರಸ್ಪರ ಬೆಸೆದುಕೊಂಡಿವೆ."*

ಮೇಲಿನ ವಿವರಣೆಯಲ್ಲಿ ನವೀನ ಶಿಲಾಯುಗದಲ್ಲಿ ಉಂಟಾದ ಯಾವ ಯಾವ ಬದಲಾವಣೆಗಳನ್ನು ಪ್ರತಿಪಾದಿಸಲಾಗಿದೆ?

- 
- 

ಸುತ್ತುಮುತ್ತಲಿನ ಪರಿಸರದೊಂದಿಗಿನ ಮಾನವನ ಹಸ್ತಕ್ಷೇಪದಿಂದಾಗಿ ಉಂಟಾದ ಬದಲಾವಣೆಗಳು ಇದಕ್ಕೆ ಮೂಲಭೂತ ಕಾರಣ ಎನ್ನಲಾಗಿದೆ. ನವೀನ ಶಿಲಾಯುಗದಲ್ಲಿ ನೂತನ ಜೀವನಮಾರ್ಗಗಳಿಗೆ ಮಾನವನು ನಾಂದಿ ಹಾಡಿದನು.

- ಮೃಗಗಳನ್ನು ಪಳಗಿಸಿ ಸಾಕುವುದು
- ಕೃಷಿಯ ಆರಂಭ




ಭೂಪಟವನ್ನು ಗಮನಿಸಿರಿ. ಅರ್ಧಚಂದ್ರಾಕೃತಿಯಲ್ಲಿ ಗುರುತಿಸಿರುವ ಪ್ರದೇಶವನ್ನು ನೋಡಿದಿರಲ್ಲವೇ. ಲಭ್ಯವಾದ ಪುರಾವೆಗಳ ಆಧಾರದಲ್ಲಿ ಈ ಪ್ರದೇಶದಲ್ಲಿ ಮೊತ್ತಮೊದಲು ಕೃಷಿಯು ಆರಂಭಗೊಂಡಿತೆಂದು ಪುರಾತತ್ವ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. 'ಫಲವತ್ತಾದ ಅರ್ಧಚಂದ್ರ' (ಫರ್ಟೈಲ್ ಕ್ರೆಸಂಟ್) ಎಂದು ಈ ಪ್ರದೇಶವನ್ನು ಬಣ್ಣಿಸಲಾಗುತ್ತದೆ. ಈ ಪ್ರದೇಶವು ಇಂದು ಯಾವ ಯಾವ ರಾಷ್ಟ್ರಗಳ ಭಾಗವಾಗಿದೆಯೆಂದು ಕಂಡುಹಿಡಿಯಬಹುದಲ್ಲವೇ?

ಮೃಗಗಳನ್ನು ಪಳಗಿಸಿ ಸಾಕಲು, ಕೃಷಿ ಆರಂಭಿಸಲು ಮಾನವನನ್ನು ಪ್ರೇರೇಪಿಸಿದ ಘಟಕಗಳು ಯಾವುವಾಗಿರಬಹುದೆಂದು ನೋಡೋಣ.







ಮೇಲೆ ನೀಡಿರುವುದು ನವೀನ ಶಿಲಾಯುಗದ ಉಪಕರಣಗಳ ಚಿತ್ರಗಳಾಗಿವೆ. ಚಿತ್ರಗಳನ್ನು ಗಮನಿಸಿ ಅವುಗಳ ವಿಶೇಷತೆಗಳನ್ನು ಕಂಡುಹಿಡಿಯಿರಿ.

- ನುಣುಪುಗೊಳಿಸಿದ ಉಪಕರಣಗಳು
-
-

ಇಂತಹ ಉಪಕರಣಗಳು ಮಣ್ಣಿನಲ್ಲಿ ಕೃಷಿ ಮಾಡಲು ಮಾನವನಿಗೆ ಸಹಾಯಕವಾಯಿತು. ಮರ ಕಡಿಯಲು, ಮಣ್ಣನ್ನು ಉಳುಮೆ ಮಾಡಲು ಈ ಉಪಕರಣಗಳು ಅವರಿಗೆ ಸಹಾಯಕವಾಯಿತು. ಇದು ಮಾನವನ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳಿಗೆ ನಾಂದಿ ಹಾಡಿತು.

ಕೃಷಿ ಹಾಗೂ ಪಶುಸಂಗೋಪನೆ ಆಹಾರೋತ್ಪನ್ನಗಳ ಸ್ಥಿರವಾದ ಲಭ್ಯತೆಯನ್ನು ಖಾತರಿಪಡಿಸಿದವು. ಇದರ ಫಲವಾಗಿ ಸ್ಥಿರವಾಸ ಹಾಗೂ ಕೃಷಿ ಗ್ರಾಮಗಳು ಬೆಳೆದುಬಂದುವು. ಆವೆ ಮಣ್ಣಿನ ಪಾತ್ರೆ ನಿರ್ಮಾಣ, ಆವೆ ಮಣ್ಣಿನಿಂದ ತಯಾರಿಸಿದ ಇಟ್ಟಿಗೆಗಳ ಉಪಯೋಗವು ಧಾನ್ಯಗಳ ಶೇಖರಣೆಗೆ ಸಹಾಯಕವಾದುವು. ಕೃಷಿರಂಗದಲ್ಲಿ ಉತ್ಪಾದನೆಯ ಮಿಗತೆಯು ಒಂದಿಷ್ಟು ಜನರು ಕೃಷಿ ಕ್ಷೇತ್ರದಿಂದ ದೂರಸರಿಯಲು ಕಾರಣವಾಯಿತು. ಅವರು ಸಮಾಜದಲ್ಲಿ ಆವೆ ಮಣ್ಣಿನ ಪಾತ್ರೆ ನಿರ್ಮಾಣ, ನೇಯ್ಗೆ ಮೊದಲಾದ ಉದ್ಯೋಗಗಳಲ್ಲಿ ತೊಡಗಿಸಿಕೊಂಡರು. ಈ ರೀತಿಯಲ್ಲಿ ಸಮಾಜವು ವಿವಿಧ ಉದ್ಯೋಗ ವಿಭಾಗಗಳಾಗಿ ಬದಲಾಯಿತು. ಇದು ಸಮಾಜದಲ್ಲಿ ಮಹತ್ತರವಾದ ಬದಲಾವಣೆಗೆ ನಾಂದಿ ಹಾಡಿತು. ಇಂದು ನಾವು ಕಾಣುವ ಮಾನವನ ಪ್ರಗತಿಯ ಅಡಿಪಾಯವು ನವೀನ ಶಿಲಾಯುಗದ ಈ ಬದಲಾವಣೆಗಳಾಗಿವೆ. ಈ ರೀತಿಯ ಬದಲಾವಣೆಗಳ ಹಿನ್ನೆಲೆಯಲ್ಲಿ ಪ್ರಸಿದ್ಧ ಪುರಾತತ್ವ ಶಾಸ್ತ್ರಜ್ಞನಾದ ಗೋರ್ಡನ್ ಚೈಲ್ಡ್ ಈ ಕಾಲವನ್ನು 'ನವೀನ ಶಿಲಾಯುಗ ಕ್ರಾಂತಿ' ಎಂದು ಬಣ್ಣಿಸಿದರು.

ಮೇಲೆ ಸೂಚಿಸಲಾದ ಮಾಹಿತಿಗಳ ಆಧಾರದಲ್ಲಿ ನವೀನ ಶಿಲಾಯುಗದ ಬದಲಾವಣೆಗಳ ಕುರಿತಾದ ಒಂದು ಫ್ಲೋಚಾರ್ಟನ್ನು ತಯಾರಿಸಿರಿ.

- ಪ್ರಾಣಿಗಳನ್ನು ಪಳಗಿಸಿ ಸಾಕಿದನು.
- 
- 
- 
- 

ಜಾಗತಿಕ ಭೂಪಟವನ್ನು ಗಮನಿಸಿ ಕೆಳಗೆ ನೀಡಲಾದ ನವೀನ ಶಿಲಾಯುಗದ ಕೇಂದ್ರಗಳು ಯಾವ ಯಾವ ರಾಷ್ಟ್ರಗಳಲ್ಲಿವೆಯೆಂದು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.




| ನವೀನ ಶಿಲಾಯುಗದ ಕೇಂದ್ರಗಳು | ರಾಷ್ಟ್ರ |
|---|---|
| ಜೆರಿಕ್ಕೋ | ------------------------------------------------ |
| ಜಾರ್ಮೋ | ------------------------------------------------ |
| ಅಲಿ ಕೋಷ್ | ------------------------------------------------ |
| ಮೆಹರ್‌ಗಡ್ | ------------------------------------------------ |

## ಇರಾಕಿನ ಖುರ್ದಿಷ್ ಬೆಟ್ಟ ಪ್ರದೇಶದ ಜಾರ್ಮೋ

ರೋಬರ್ಟ್ ಜೆ ಬ್ರೈಡ್ ವುಡಾರವರು ಖುರ್ದಿಷ್ ಬೆಟ್ಟಗಳ (ಆಧುನಿಕ ಇರಾಕ್) ಜಾರ್ಮೋದಲ್ಲಿ ಪುರಾತತ್ವ ಉತ್ಖನನಕ್ಕೆ ನೇತೃತ್ವವನ್ನು ನೀಡಿದರು. ಜಾರ್ಮೋದಲ್ಲಿನ ಜನರು ಬಾರ್ಲಿ ಹಾಗೂ ಎರಡು ವಿಧದ ಗೋಧಿಯನ್ನು ಕೃಷಿ ಮಾಡುತ್ತಿದ್ದರು. ಆಡು ಮತ್ತು ಕೆಲವು ಮೃಗಗಳನ್ನು ಪಳಗಿಸಿ ಸಾಕಿದುದಕ್ಕೆ ಸ್ಪಷ್ಟವಾದ ಆಧಾರಗಳು ಇವೆ. ಇಲ್ಲಿನ ಮನೆಗಳು ಚಿಕ್ಕ ಗುಡಿಸಲುಗಳಾಗಿದ್ದುವು. ಅವರು ಆವೆಮಣ್ಣನ್ನು ಉಪಯೋಗಿಸಿಕೊಂಡು ಪ್ರಾಣಿಗಳ ಹಾಗೂ ಮಾನವರ ಆಕೃತಿಗಳನ್ನು ರಚಿಸಿದ್ದರು. ಗರ್ಭಿಣಿ ಮಹಿಳೆಯು ಅವರು ನಿರ್ಮಿಸಿದ ಮಾನವ ಆಕೃತಿಗಳಲ್ಲಿ ಅತ್ಯಂತ ಪ್ರಧಾನವಾದುದಾಗಿದೆ.



### ಮೆಹರ್ ಗಡ್ : ಭಾರತ ಉಪಭೂಖಂಡದ ನವೀನ ಶಿಲಾಯುಗ ಕೇಂದ್ರ

ನವೀನ ಶಿಲಾಯುಗದ ಪ್ರಮುಖ ವಿಶೇಷತೆಗಳಾದ ಪ್ರಾಣಿಗಳ ಪಳಗಿಸುವಿಕೆ, ಕೃಷಿ ಎಂಬಿವುಗಳನ್ನು ಆರಂಭಿಸಿದ ಪ್ರಾಚೀನ ಭಾರತದ ಮೊದಲ ಪ್ರದೇಶವು ಮೆಹರ್ ಗಡ್ ಆಗಿದೆ (ಇಂದಿನ ಪಾಕಿಸ್ತಾನ) ಎಂದು ಪುರಾತತ್ವ ಶಾಸ್ತ್ರಜ್ಞರು ಅಂದಾಜಿಸುತ್ತಾರೆ. ಈ ಪ್ರದೇಶವನ್ನು ಬ್ರೆಡ್ ಬಾಸ್ಕೆಟ್ ಆಫ್ ಬಲೂಚಿಸ್ತಾನ್ (bread basket of Baluchistan) ಎಂದು ಕರೆಯುತ್ತಾರೆ.

ಕೆಳಗೆ ಕೊಡಲಾದ ಸೂಚಕಗಳ ಆಧಾರದಲ್ಲಿ ಶಿಲಾಯುಗದ ವಿಭಿನ್ನ ಕಾಲಗಳ ಕುರಿತು ವಿಶ್ಲೇಷಿಸಿ ಒಂದು ಡಿಜಿಟಲ್ ಸಂಚಿಕೆಯನ್ನು ತಯಾರಿಸಿ ಸಮಾಜ ವಿಜ್ಞಾನ ಕ್ಲಬ್ ನಲ್ಲಿ ಪ್ರದರ್ಶಿಸಿರಿ.

- ಉಪಕರಣಗಳು
- ಉಪಜೀವನ ಮಾರ್ಗಗಳು
- ಆಶಯ ವಿನಿಮಯ

## ಲೋಹಯುಗ (Metal Age)

ಶಿಲೆಗಳ ಬದಲಾಗಿ ಮಾನವರು ಲೋಹವನ್ನು ಉಪಯೋಗಿಸಲು ಆರಂಭಿಸುವುದರೊಂದಿಗೆ ಲೋಹಯುಗದತ್ತ ಸಾಗಿದರು. ಮಾನವನ ತಾಂತ್ರಿಕ ವಿದ್ಯೆಯ ಪ್ರಗತಿಗೆ ಲೋಹಯುಗವು ಒಂದು ಉತ್ತಮ ಪುರಾವೆಯಾಗಿದೆ. ತಾಮ್ರವು ಮಾನವನು ಉಪಯೋಗಿಸಿದ ಮೊತ್ತಮೊದಲ ಲೋಹವಾಗಿದೆ.

ಪ್ರಕೃತಿದತ್ತವಾದ ತಾಮ್ರವನ್ನು ಆಯುಧ ಮತ್ತು ಉಪಕರಣಗಳಾಗಿ ಬದಲಾಯಿಸುವ ತಂತ್ರಜ್ಞಾನವನ್ನು ಈ ಕಾಲದ ಮಾನವರು ತಿಳಿದುಕೊಂಡರು. ಆರಂಭಕಾಲದ ಕೃಷಿ ಗ್ರಾಮಗಳಾದ ಚಾತಲ್ ಹೋಯಿಕ್ (ತುರ್ಕಿ), ಚಯೋನು (ಉತ್ತರ ಸಿರಿಯ), ಅಲಿ ಕೋಷ್ (ಇರಾನ್) ಮುಂತಾದ ಕಡೆಗಳಿಂದ ತಾಮ್ರದ ಲಭ್ಯತೆಯನ್ನು ಪತ್ತೆಹಚ್ಚಲಾಗಿದೆ. ಈ ಕಾಲವು ಬಿ.ಸಿ.ಇ. 7000 ಎಂದು ಅಂದಾಜಿಸಲಾಗಿದೆ.

ಶಿಲಾ ಉಪಕರಣಗಳಿಗಿಂತ ತಾಮ್ರದ ಉಪಕರಣಗಳಿಗಿರುವ ಹಿರಿಮೆಗಳು ಯಾವುವು?

- ಯೋಗ್ಯವಾದ ಆಕೃತಿ ಹಾಗೂ ರೂಪ ಬದಲಾವಣೆ ಸಾಧ್ಯ.
- ದೀರ್ಘಕಾಲ ಬಾಳ್ವಿಕೆ
- 
- 

## ತಾಮ್ರ ಶಿಲಾಯುಗ (Chalcolithic Age)

ಶಿಲಾಯುಗದ ಕುರಿತು ನಾವು ಈ ಮೊದಲೇ ಚರ್ಚಿಸಿದ್ದೇವಲ್ಲವೇ. ತಾಮ್ರದ ಉಪಕರಣಗಳನ್ನು ಉಪಯೋಗಿಸಿದ ಕಾಲದಲ್ಲಿಯೂ ಮಾನವನು ಶಿಲಾಯುಧಗಳನ್ನು ತ್ಯಜಿಸಿರಲಿಲ್ಲ. ಶಿಲಾ ಉಪಕರಣಗಳೊಂದಿಗೆ ತಾಮ್ರದ ಉಪಕರಣಗಳನ್ನು ಉಪಯೋಗಿಸಿದ ಈ ಕಾಲವನ್ನು ತಾಮ್ರ ಶಿಲಾಯುಗ ಎಂದು ಕರೆಯುತ್ತಾರೆ. ಭಾರತದ ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ ಮೊದಲಾದ ಪ್ರದೇಶಗಳಿಂದ ತಾಮ್ರ ಶಿಲಾಯುಗದ ಅನೇಕ ಅವಶೇಷಗಳನ್ನು ಪತ್ತೆಹಚ್ಚಲಾಗಿದೆ.



ದೈಮಾಬಾದಿನಿಂದ (ಮಹಾರಾಷ್ಟ್ರ) ಲಭಿಸಿದ ಶವಸಂಸ್ಕಾರಕ್ಕಾಗಿ ಉಪಯೋಗಿಸಿದ್ದ ಪಾತ್ರೆಗಳು



ನೆವಾಸಾ (ಮಹಾರಾಷ್ಟ್ರ) ದಿಂದ ಲಭಿಸಿದ ಆವೆಮಣ್ಣು ಹಾಗೂ ಶಿಲೆಯಿಂದ ನಿರ್ಮಿಸಿದ ಕಲಾಕೃತಿಗಳು

## ಕಂಚಿನ ಯುಗ (Bronze Age)

ಬಿ.ಸಿ.ಇ. 6000 ಹಾಗೂ ಬಿ.ಸಿ.ಇ. 3000 ದ ಮಧ್ಯದಲ್ಲಿ ಮಾನವನು ಎತ್ತು ಹಾಗೂ ಗಾಳಿಯ ಶಕ್ತಿಯನ್ನು ಉಪಯೋಗಿಸಲು ಕಲಿತನು. ನೇಗಿಲು, ಚಕ್ರಗಾಡಿ, ದೋಣಿಗಳನ್ನು ಉಪಯೋಗಿಸಲು ಆರಂಭಿಸಿದನು. ಲೋಹ ಸಂಸ್ಕರಣೆಯ ವಿದ್ಯೆಯು ಇನ್ನಷ್ಟು ಅಭಿವೃದ್ಧಿ ಹೊಂದಿತು. ಅದರ ಪರಿಣಾಮವಾಗಿ ಕೃಷಿಯು ವಿಸ್ತಾರಗೊಳ್ಳುವುದರೊಂದಿಗೆ ಉತ್ಪಾದನಾ ಮಿಗತೆ ಉಂಟಾಯಿತು. ಕೃಷಿಯೇತರ ಉತ್ಪಾದನೆಗಳೂ ಅಧಿಕವಾಗುವುದರೊಂದಿಗೆ ಮಾನವನು ನಗರಜೀವನಕ್ಕೆ ಸ್ವಯಂ ಸಜ್ಜುಗೊಂಡನು.

ಗೋರ್ಡನ್ ಚೈಲ್ಡ್

ಮ್ಯಾನ್ ಮೇಕ್ ಹಿಮ್‌ಸೆಲ್ಫ್ (ಮಾನವ ಸ್ವತಃ ನಿರ್ಮಿಸುತ್ತಾನೆ)

ಮೇಲಿನ ಸಾಲುಗಳು ನಗರ ಜೀವನದ ಕಡೆಗೆ ಮಾನವನ ಆಗಮನದ ಕುರಿತು ಪ್ರತಿಪಾದಿಸುತ್ತವೆ. ಒಂದು ಪ್ರದೇಶದಲ್ಲಿ ಗುಂಪಾಗಿ ವಾಸಿಸುವ ಜನರಲ್ಲಿ ಅರ್ಧಕ್ಕಿಂತಲೂ ಅಧಿಕ ಮಂದಿ ಕೃಷಿಯೇತರ ಚಟುವಟಿಕೆಗಳಾದ ವಿವಿಧ ರೀತಿಯ ಕೈಕಸುಬು, ಕರಕುಶಲ ಚಟುವಟಿಕೆ, ವ್ಯಾಪಾರ ಮೊದಲಾದವುಗಳಲ್ಲಿ ತೊಡಗಿಸಿಕೊಂಡು ಉಪಜೀವನವನ್ನು ನಡೆಸುವ ಸ್ಥಿತಿವಿಶೇಷತೆಯನ್ನು 'ನಾಗರಿಕತೆ' ಎಂದು ಬಣ್ಣಿಸಲಾಗುತ್ತದೆ. ವಿಶಾಲವಾದ ಬೀದಿಗಳು, ಸಾರ್ವಜನಿಕ ಕಟ್ಟಡಗಳು, ಉತ್ತಮ ಸೌಕರ್ಯಗಳು, ಬಿಡುವಿಲ್ಲದ ಜೀವನ, ಮನೋರಂಜನೆ ಇತ್ಯಾದಿಗಳು ನಗರ ಜೀವನದ ವಿಶೇಷತೆಗಳಾಗಿವೆ. 'ನಾಗರಿಕ' ಜೀವನವು ಆರಂಭವಾದುದು ಕಂಚಿನ ಯುಗದಲ್ಲಾಗಿದೆಯೆಂದು ನೀವು ಕಲಿತಿರುವಿರಲ್ಲವೇ?

**ಕಂಚು (Bronze)**

ಕಂಚು ಎಂಬ ಮಿಶ್ರಲೋಹವನ್ನು ತಾಮ್ರ (Copper) ಹಾಗೂ ಬಿಳಿಸೀಸವನ್ನು (Tin) ನಿರ್ದಿಷ್ಟ ಅನುಪಾತದಲ್ಲಿ ಒಟ್ಟು ಸೇರಿಸಿ ಸಂಸ್ಕರಿಸಿ ತಯಾರಿಸಲಾಗುತ್ತದೆ. ಕಂಚು ತಾಮ್ರಕ್ಕಿಂತಲೂ ಹೆಚ್ಚು ಗಟ್ಟಿಯಾದ ಲೋಹವಾಗಿದೆ.

ಕಂಚಿನ ಯುಗ ನಾಗರಿಕತೆಗಳು ಯಾವುವು ಎಂದು ಪಟ್ಟಿ ಮಾಡಿರಿ.

- 
- 
- 
- 

ಹರಪ್ಪ ನಾಗರಿಕತೆಯು ಭಾರತದಲ್ಲಿ ಕಂಚಿನ ಯುಗದಲ್ಲಿ ವಿಕಾಸಹೊಂದಿದ ನಾಗರಿಕತೆಯಾಗಿದೆ. ಹರಪ್ಪಾ, ಮೊಹೆಂಜೋದಾರೋ, ಲೋಥಾಲ್ ಮೊದಲಾದ ನಗರಗಳು ಯೋಜನಾಬದ್ಧವಾಗಿ ನಿರ್ಮಿಸಿದ ಸಾರ್ವಜನಿಕ ಕಟ್ಟಡಗಳು, ಮಹಾಸ್ನಾನ ಘಟ್ಟ (Great Bath), ಮನೆಗಳು, ಸಾರ್ವಜನಿಕ ದಾರಿಗಳು, ಚರಂಡಿಗಳು, ಧಾನ್ಯದ ಉಗ್ರಾಣ ಇತ್ಯಾದಿಗಳಲ್ಲದೆ ವಿವಿಧ ರೀತಿಯ ಕೈಕಸುಬುಗಳು ಹಾಗೂ ವ್ಯಾಪಾರದ ಅಸ್ತಿತ್ವ ಎಂಬಿವುಗಳು ಅಲ್ಲಿನ ನಗರೀಕರಣದ ಕುರಿತು ನಮಗೆ ಮಾಹಿತಿ ನೀಡುತ್ತವೆ. ಆದುದರಿಂದ ಹರಪ್ಪಾ ನಾಗರಿಕತೆಯನ್ನು ಭಾರತದ ಚರಿತ್ರೆಯಲ್ಲಿ 'ಪ್ರಥಮ ನಗರೀಕರಣ' ಎಂದು ಬಣ್ಣಿಸುತ್ತಾರೆ.

**ಸಪ್ತಸಿಂಧೂ ಪ್ರದೇಶ**

ಸಿಂಧೂನದಿ ಮತ್ತು ಅದರ ಉಪನದಿಗಳನ್ನು ಒಳಗೊಂಡ ಪ್ರದೇಶವನ್ನು ಸಪ್ತಸಿಂಧೂ ಪ್ರದೇಶ ಎನ್ನುತ್ತಾರೆ.

**ಇಂಡೋ-ಯುರೋಪಿಯನ್ ಭಾಷೆಗಳು**

ಸಂಸ್ಕೃತ, ಲ್ಯಾಟಿನ್, ಗ್ರೀಕ್, ಜರ್ಮನ್, ಇಂಗ್ಲೀಷ್, ಸ್ವೀಡಿಷ್, ರಷ್ಯನ್, ಪೋಲಿಷ್, ಇಟಾಲಿಯನ್, ಸ್ಪಾನಿಷ್, ಫ್ರೆಂಚ್, ರುಮಾನಿಯನ್ ಎಂಬೀ ಭಾಷೆಗಳು ಇದರಲ್ಲಿ ಒಳಪಡುತ್ತವೆ.

## ವೇದಕಾಲ (Vedic Age)

ಹರಪ್ಪ ನಾಗರಿಕತೆಯ ಪತನದ ನಂತರ ಆರ್ಯರು ಸಪ್ತಸಿಂಧೂ (ಭಾರತದ ವಾಯುವ್ಯ ಭಾಗ) ಪ್ರದೇಶಕ್ಕೆ ಆಗಮಿಸಿದರು. ಆರ್ಯರು ಇಂಡೋ ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳನ್ನು ಮಾತನಾಡುವವರಾಗಿದ್ದರು. ಭಾಷಾಪರವಾದ ಪುರಾವೆಗಳ ಆಧಾರದಲ್ಲಿ ಮಧ್ಯ ಏಷ್ಯಾವು ಆರ್ಯರ ತಾಯ್ನಾಡು ಎಂದು ಊಹಿಸಲಾಗಿದೆ.

ವೇದಗಳಿಂದ ಈ ಕಾಲದ ಕುರಿತಾದ ಮಾಹಿತಿಗಳು ನಮಗೆ ಲಭಿಸುತ್ತವೆ. ಇದರ ಆಧಾರದಲ್ಲಿ ಬಿ.ಸಿ.ಇ. 1500 ಹಾಗೂ ಬಿ.ಸಿ.ಇ. 600ರ ವರೆಗಿನ ಕಾಲವನ್ನು ವೇದಕಾಲ ಎಂದು ಕರೆಯುತ್ತಾರೆ.

ವೇದಕಾಲವನ್ನು ಎರಡು ಭಾಗಗಳಾಗಿ ವರ್ಗೀಕರಿಸಲಾಗಿದೆ.

- ವೇದ ಕಾಲ
  - ಆರಂಭದ ವೇದಕಾಲ (ಋಗ್ವೇದ ಕಾಲ)
  - ಅನಂತರದ ವೇದಕಾಲ (ಯುಜುರ್, ಸಾಮ, ಅಥರ್ವ ವೇದಗಳು ರಚಿಸಲ್ಪಟ್ಟ ಕಾಲ)

ಆರಂಭದ ವೇದಕಾಲ ಹಾಗೂ ಅನಂತರದ ವೇದಕಾಲದ ಜನಜೀವನವನ್ನು ಪರಸ್ಪರ ಹೋಲಿಸೋಣ.

| ಆರಂಭದ ವೇದಕಾಲ | ಅನಂತರದ ವೇದಕಾಲ |
|---|---|
| • ಸಪ್ತಸಿಂಧೂ ಪ್ರದೇಶ | • ಗಂಗಾ ಸಮತಲದವರೆಗೆ ವ್ಯಾಪಿಸಿತ್ತು |
| • ಪಶುಸಂಗೋಪನೆ ಕೇಂದ್ರಿತ ಆರ್ಥಿಕ ವ್ಯವಸ್ಥೆ | • ಕೃಷಿಗೆ ಪ್ರಾಮುಖ್ಯತೆಯನ್ನು ನೀಡಿದರು |
| • ಅರೆ ಅಲೆಮಾರಿಗಳು | • ಸ್ಥಿರವಾಸವನ್ನು ಆರಂಭಿಸಿದರು |
| • ಮಹಿಳೆಯರಿಗೆ ಉನ್ನತ ಸ್ಥಾನಮಾನ | • ಮಹಿಳೆಯರಿಗೆ ಉನ್ನತ ಸಾಮಾಜಿಕ ಸ್ಥಾನಮಾನ ಕಡಿಮೆಯಾಯಿತು |
| • ಕಾಡು ಕಡಿದು ಉರಿಸಿ ಕೃಷಿ ಮಾಡಿದರು | • ಕಬ್ಬಿಣದ ಉಪಯೋಗ |
| • ಸಮಾಜವು ಹಲವು ಗೋತ್ರಗಳನ್ನು ಒಳಗೊಂಡಿತ್ತು | • ವರ್ಣವ್ಯವಸ್ಥೆ ಪ್ರಬಲವಾಯಿತು |
| • ಯಾಗಗಳು ಸರಳವಾಗಿತ್ತು. ಪ್ರತಿಯೊಂದು ಕುಟುಂಬದ ಯಜಮಾನನಿಗೆ ಯಾಗ ನಡೆಸಲು ಸಾಧ್ಯವಾಗುವಂತಿತ್ತು. | • ಯಾಗಗಳು ಸಂಕೀರ್ಣ ಹಾಗೂ ವೆಚ್ಚದಾಯಕವಾದುವು. ಯಾಗಗಳನ್ನು ನಡೆಸುವುದು ಪ್ರತ್ಯೇಕ ವಿಭಾಗದವರ ಅಧಿಕಾರವಾಗಿ ಬದಲಾಯಿತು |
| • ಪ್ರಕೃತಿ ಶಕ್ತಿಗಳನ್ನು ಆರಾಧಿಸಿದರು | • ಪ್ರತ್ಯೇಕ ಆರಾಧನಾ ಮೂರ್ತಿಗಳು ರೂಪುಗೊಂಡವು |
| | • ವಿವಿಧ ಕರಕುಶಲ ವಿದ್ಯೆಗಳ ಆರಂಭ |

## ವೇದಸಾಹಿತ್ಯ

'ವೇದ' ಎಂದರೆ ಜ್ಞಾನ (ವಿದ್) ಎಂದರ್ಥ. ವೇದಗಳು ನಾಲ್ಕು, ಅವುಗಳು ಋಗ್ವೇದ, ಯುಜುರ್ವೇದ, ಸಾಮವೇದ, ಅಥರ್ವವೇದ ಎಂಬಿವುಗಳಾಗಿವೆ. ಅವುಗಳಲ್ಲಿ ಋಗ್ವೇದವು ಮೊದಲನೆಯದಾಗಿದೆ. ನಾಲ್ಕು ವೇದಗಳಲ್ಲದೆ ಅನುಬಂಧಗಳಾದ ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂಬಿವುಗಳು ವೇದ ಸಾಹಿತ್ಯದ ಭಾಗಗಳಾಗಿವೆ. ವೇದಸಾಹಿತ್ಯವು ವೇದಕಾಲದ ಕುರಿತಾದ ಕಲಿಕೆಗಾಗಿರುವ ಅತ್ಯಂತ ಪ್ರಮುಖ ಪುರಾವೆಯಾಗಿದೆ.

## ವರ್ಣ ವ್ಯವಸ್ಥೆ

ನಾಲ್ಕು ವಿಧದ ವರ್ಣಾಶ್ರಮಗಳಿದ್ದುವು. ಪೌರೋಹಿತ್ಯದಲ್ಲಿ ಏರ್ಪಡುವವರು ಬ್ರಾಹ್ಮಣರು, ರಾಜ್ಯಾಡಳಿತ ಹಾಗೂ ಸಂರಕ್ಷಣೆಯನ್ನು ಒದಗಿಸುವವರು ಕ್ಷತ್ರಿಯರು, ಕೃಷಿಯಲ್ಲೂ ವ್ಯಾಪಾರದಲ್ಲೂ ತೊಡಗಿಸಿಕೊಂಡವರು ವೈಶ್ಯರು ಎಂದು ಕರೆಯಲ್ಪಟ್ಟರೆ ಈ ಮೂರೂ ವಿಭಾಗದವರಿಗೆ ದಾಸ್ಯ ವೃತ್ತಿಯನ್ನು ಮಾಡುವವರು ಶೂದ್ರರಾಗಿದ್ದರು.

ಶಿಲಾಯುಗದಿಂದ ಲೋಹಯುಗಕ್ಕಿರುವ ಬದಲಾವಣೆಗಳಿಗೆ ಸಂಬಂಧಿಸಿ ಒಂದು ವಿಚಾರಗೋಷ್ಠಿ ಏರ್ಪಡಿಸಿರಿ.

ಮಾನವನ ಚರಿತ್ರೆಯ ಆರಂಭ ಹಾಗೂ ಕಾಲಕ್ರಮೇಣ ಅದರಲ್ಲುಂಟಾದ ವಿಕಾಸವನ್ನು ನಾವು ಈ ಪಾಠಭಾಗದಲ್ಲಿ ತಿಳಿದೆವು. ಕಾಡಿನಲ್ಲೂ, ಗುಹೆಗಳಲ್ಲೂ, ಮರಗಳ ಪೊಟರೆಗಳಲ್ಲೂ ಜೀವಿಸಿ, ಪ್ರಕೃತಿಯೊಂದಿಗೂ ಪ್ರಾಣಿಗಳೊಂದಿಗೂ ಹೋರಾಡಿ, ವಿವೇಕ, ಬುದ್ಧಿಶಕ್ತಿಯಿಂದ ಮುಂದಿನ ಪಯಣವನ್ನು ಆರಂಭಿಸಿದ ಮಾನವ ತನ್ನ ಅವಶ್ಯಕತೆಗಳನ್ನು ಮನಗಂಡು ಅದಕ್ಕನುಸಾರವಾಗಿ ಸಂಶೋಧನೆಗಳನ್ನೂ ಆವಿಷ್ಕಾರಗಳನ್ನೂ ನಡೆಸಿದನು.

ಅಭಿವೃದ್ಧಿಯ ಹಾದಿಯನ್ನೇರಿ ಒಬ್ಬ ನಾಗರಿಕನಾಗಿ ಬದಲಾದ ಮಾನವ ತನ್ನದೇ ಆದ ಸಾಮಾಜಿಕ – ರಾಜಕೀಯ – ಆರ್ಥಿಕ ವ್ಯವಸ್ಥೆಗಳನ್ನು ರೂಪಿಸಿದನು. 21 ನೇ ಶತಮಾನಕ್ಕೆ ತಲುಪಿದ ಈ ಸಂದರ್ಭದಲ್ಲಿ ಮಾನವ ಚರಿತ್ರೆಯ ವಿಕಾಸದ ವಿವಿಧ ಹಂತಗಳನ್ನು ಅವಲೋಕನ ಮಾಡುವಾಗ ಮಾನವನು ಈ ಹಂತಕ್ಕೆ ಎಷ್ಟು ದೂರ ಕ್ರಮಿಸಿ ಬಂದಿದ್ದಾನೆ ಎಂಬುದನ್ನು ನಮಗೆ ತಿಳಿಯಲು ಸಾಧ್ಯವಾಗುತ್ತದೆ.

## ಮುಂದುವರಿದ ಚಟುವಟಿಕೆಗಳು

- ಆರಂಭಕಾಲದ ಮಾನವರು ಉಪಯೋಗಿಸಿದ ಆಯುಧಗಳ ಹಾಗೂ ಉಪಕರಣಗಳ ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಂ ತಯಾರಿಸಿರಿ.
- ಶಿಲಾಯುಗದ ವಿವಿಧ ಹಂತಗಳಲ್ಲಿ ಮಾನವರು ಉಪಯೋಗಿಸಿದ ಆಯುಧಗಳು, ಉಪಕರಣಗಳು ಎಂಬಿವುಗಳ ಮಾದರಿಗಳನ್ನು ತಯಾರಿಸಿ ಸಮಾಜ ವಿಜ್ಞಾನ ತರಗತಿಯಲ್ಲಿ ಪ್ರದರ್ಶಿಸಿರಿ.
- ಮಾನವನ ಇತಿಹಾಸದ ಪ್ರಗತಿಯ ಪ್ರಮುಖ ಬದಲಾವಣೆಗಳನ್ನು ಅಳವಡಿಸಿ ಒಂದು ಡಿಜಿಟಲ್ ಪ್ರಸೆಂಟೇಶನ್ ಮಂಡಿಸಿರಿ.
- ಆರಂಭಕಾಲದ ಮಾನವನ ಜೀವನಕ್ಕೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಿ ಅಟ್ಲಾಸ್ ತಯಾರಿಸಿರಿ.

# 2 ಸಿದ್ಧಾಂತಗಳು ಮತ್ತು ಆರಂಭ ಕಾಲದ ರಾಷ್ಟ್ರಗಳು

*‘ಸಿದ್ಧಾರ್ಥನು ರಾಜಬೀದಿಯಲ್ಲಿ ರಥದಲ್ಲಿ ಸಂಚರಿಸುವಾಗ ತೀರಾ ನಿಶ್ಶಕ್ತನಾದ ಒಬ್ಬ ವೃದ್ಧನನ್ನು ಕಂಡನು; ಸ್ವಲ್ಪ ಸಮಯದ ನಂತರ ತೀವ್ರ ರೋಗ ಬಾಧಿಸಿ ನಡುಗುವ ಮತ್ತೋರ್ವನನ್ನೂ ಕಂಡನು. ತದನಂತರ ಒಂದು ಶವಶರೀರವನ್ನು ಬಿಳಿ ಬಟ್ಟೆ ಹೊದಿಸಿ ಜನರು ದುಃಖಿಸುತ್ತಾ ಹೆಗಲಿಗೇರಿಸಿಕೊಂಡು ಸ್ಮಶಾನಕ್ಕೆ ಹೋಗುವುದನ್ನು ಕಂಡನು. ಅತೀವ ನೋವನ್ನುಂಟುಮಾಡುವ ಈ ದೃಶ್ಯಗಳನ್ನು ಕಂಡ ನಂತರ ಅವನು ಬೀದಿಯಲ್ಲಿ ಭಿಕ್ಷೆ ಬೇಡುವ ಓರ್ವ ಸಂತನನ್ನು ಕಂಡನು. ಭೌತಿಕ ದುಃಖಗಳಾವುದೂ ಇಲ್ಲದೆ ಶಾಂತ ಚಿತ್ತನಾಗಿಯೂ ಸಂತಸದಿಂದಲೂ ಇರುವ ಈ ಸಂತನಿಂದ ಸಿದ್ಧಾರ್ಥನು ಆಕರ್ಷಿತನಾದನು. ಶಾಂತಿ ಹಾಗೂ ಸಮಾಧಾನವನ್ನು ಗಳಿಸಲಿರುವ ಮಾರ್ಗ ಸನ್ಯಾಸವೆಂಬುದನ್ನು ತೀರ್ಮಾನಿಸಲು ಇದು ಕಾರಣವಾಯಿತು.’*

*ಎ.ಎಲ್. ಭಾಷಾಂ ದಿ ವಂಡರ್ ದಾಟ್ ವಾಸ್ ಇಂಡ್ಯಾ (ರೂಪ & ಕಂಪೆನಿ 1981)*

ಇದು ಬಿ.ಸಿ.ಇ. 6 ನೇ ಶತಮಾನದಲ್ಲಿ ಭಾರತದಲ್ಲಿ ಜೀವಿಸಿದ್ದ ತತ್ವ ಚಿಂತಕನಾದ ಗೌತಮ ಬುದ್ಧನ ಜೀವನಕ್ಕೆ ಸಂಬಂಧಿಸಿದ ಒಂದು ಘಟನೆಯಾಗಿದೆ. ರಾಜಕುಮಾರನಾಗಿ ಶ್ರೀಮಂತಿಕೆಯಿಂದ ಮತ್ತು ಸುಖಲೋಲುಪತೆಯಿಂದ ಜೀವಿಸುತ್ತಿದ್ದರೂ ಸಂತೋಷ ಲಭಿಸದ ಸಿದ್ಧಾರ್ಥನ ಜೀವನದ ದಿಶೆಯನ್ನು ಬದಲಾಯಿಸಿದ ಘಟನೆಯನ್ನು ಇಲ್ಲಿ ವಿವರಿಸಲಾಗಿದೆ. ತನ್ನ ಸುತ್ತಮುತ್ತಲಿರುವ ಮಾನವರ ದುಃಖದ ಕಾರಣಗಳನ್ನು ಹುಡುಕುತ್ತಾ ಸನ್ಯಾಸವನ್ನು ಸ್ವೀಕರಿಸಿದ ಸಿದ್ಧಾರ್ಥನು ಜ್ಞಾನೋದಯದ ಬಳಿಕ ಗೌತಮ ಬುದ್ಧನೆಂದು ಪ್ರಸಿದ್ಧನಾದನು.

ST-421-4-SOC. SCI.-I (K)-9-VOL-1

ಬಿ.ಸಿ.ಇ. 6ನೇ ಶತಮಾನವು ಜಾಗತಿಕ ಚರಿತ್ರೆಯಲ್ಲಿ ಗಮನಾರ್ಹವಾದ ಕಾಲವಾಗಿತ್ತು. ಭಾರತದಲ್ಲಿ ವರ್ಧಮಾನ ಮಹಾವೀರ, ಗೌತಮ ಬುದ್ಧ, ಇರಾನಿನಲ್ಲಿ ಜರತುಷ್ಟ್ರ, ಚೀನಾದಲ್ಲಿ ಕನ್‌ಫ್ಯೂಷಿಯಸ್, ಗ್ರೀಸಿನಲ್ಲಿ ಹೆರಾಕ್ಲಿಟಸ್ ಮೊದಲಾದವರು ಈ ಕಾಲದಲ್ಲಿ ನೂತನ ಆಶಯಗಳನ್ನು ಪ್ರಚಾರ ಮಾಡಿದರು. ಜಗತ್ತಿನಾದ್ಯಂತ ಆರ್ಥಿಕ – ರಾಜಕೀಯ ಕ್ಷೇತ್ರಗಳಲ್ಲಿ ಬದಲಾವಣೆಗಳು ಕಂಡುಬಂದ ಈ ಕಾಲದಲ್ಲಿ ನೂತನ ರಾಷ್ಟ್ರ ವ್ಯವಸ್ಥೆಗಳೂ ಅಸ್ತಿತ್ವಕ್ಕೆ ಬಂದವು. ಇಂತಹ ಬದಲಾವಣೆಗಳ ಕುರಿತು ಈ ಅಧ್ಯಾಯದಲ್ಲಿ ನಾವು ಚರ್ಚಿಸಲಿದ್ದೇವೆ.

## ಗಂಗಾತೀರದ ಆಶಯ ಕ್ರಾಂತಿ

ಬಿ.ಸಿ.ಇ. 6ನೇ ಶತಮಾನದಲ್ಲಿ ನೂತನ ಆಶಯಗಳು ಭಾರತದಲ್ಲಿ ರೂಪುಗೊಂಡದ್ದು ಪ್ರಮುಖವಾಗಿ ಗಂಗಾ ತೀರದಲ್ಲಾಗಿತ್ತು. ಗಂಗಾ ತೀರದ ಭೌತಿಕ ಸನ್ನಿವೇಶಗಳು ನೂತನ ಆಶಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದವು. ಈ ಭೌತಿಕ ಸನ್ನಿವೇಶಗಳನ್ನು ರೂಪಿಸಿದುದು ಕೆಳಗೆ ನೀಡಿರುವ ಘಟಕಗಳಾಗಿವೆ.



ಪ್ರಾಚೀನ ಕಾಲದ ಕಬ್ಬಿಣದ ಉಪಕರಣಗಳು

- ಕಬ್ಬಿಣದ ಉಪಕರಣಗಳ ಹೇರಳ ಬಳಕೆ
- ಕೃಷಿ ಉತ್ಪಾದನೆಯಲ್ಲಾದ ಹೆಚ್ಚಳ
- ವ್ಯಾಪಾರ, ನಗರಗಳು ಎಂಬಿವುಗಳ ಬೆಳವಣಿಗೆ

ಬಿ.ಸಿ.ಇ. 6ನೇ ಶತಮಾನದಲ್ಲಿ ಕೃಷಿ ಹಾಗೂ ಜಾನುವಾರುಗಳನ್ನು ಆಶ್ರಯಿಸಿರುವ ಸಾಮಾಜಿಕ – ಆರ್ಥಿಕ ವ್ಯವಸ್ಥೆಯು ಗಂಗಾ ತೀರದಲ್ಲಿ ಬೆಳೆದುಬಂತು. ಇದು ಯಾಗ ಹಾಗೂ ಪ್ರಾಣಿಬಲಿಗೆ ಪ್ರಾಧಾನ್ಯವಿತ್ತ ವೇದಕಾಲದ ಆಚಾರಕ್ಕೆ ಹೊಂದಾಣಿಕೆಯಾಗುತ್ತಿರಲಿಲ್ಲ. ಯಾಗಗಳ ಭಾಗವಾಗಿ ಜಾನುವಾರುಗಳನ್ನು ಹೇರಳವಾಗಿ ಬಲಿ ಕೊಡುವುದು, ಅವುಗಳನ್ನು ಆಶ್ರಯಿಸಿಕೊಂಡಿದ್ದ ಕೃಷಿಗೆ ಪ್ರತಿಕೂಲವಾಗಿ ಬಾಧಿಸಿತು. ಇದು ವೇದಕಾಲದ ಆಚಾರಗಳಿಗೆದುರಾಗಿ ಚಿಂತಿಸಲು ಪ್ರೇರಣೆಯನ್ನು ನೀಡಿತು.

ವ್ಯಾಪಾರದ ಪ್ರಗತಿಯಿಂದಾಗಿ ಉತ್ತಮ ಜೀವನ ಮಟ್ಟವನ್ನು ಸಾಧಿಸಿದ ವೈಶ್ಯರು ಅದಕ್ಕೆ ಸಮಾನವಾದ ರೀತಿಯ ಉನ್ನತ ಸಾಮಾಜಿಕ ಸ್ಥಾನವನ್ನು ಬಯಸಿದ್ದರು.

ಈ ಕಾಲದಲ್ಲಿ ವರ್ಣ ವ್ಯವಸ್ಥೆಗೆ ಹೊರತಾಗಿ ಹಲವು ವಿಭಾಗಗಳು ಬೆಳೆದುಬಂದುವು. ಶ್ರೀಮಂತರಾದ ಗಹಪತಿಗಳು ಇವರಲ್ಲಿ ಪ್ರಮುಖರಾಗಿದ್ದರು. ವ್ಯಾಪಾರವನ್ನು ವೃತ್ತಿಯನ್ನಾಗಿಸಿದ ಇವರು ವಿಸ್ತಾರವಾದ ಭೂಮಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದರು. ಹೀಗೆ ಆರ್ಥಿಕವಾಗಿ ಉನ್ನತ ಶ್ರೇಣಿಯಲ್ಲಿದ್ದ ಇವರು ಶ್ರೇಷ್ಠವಾದ ಸಾಮಾಜಿಕ ಸ್ಥಾನವನ್ನು ಗಳಿಸಿದರು. ಈ ಸಾಮಾಜಿಕ ಹಿನ್ನೆಲೆಯಲ್ಲಿ ನೂತನ ಆಶಯಗಳು ಮೂಡಿಬಂದವು. ಜೈನ – ಬೌದ್ಧ ಮತಗಳು ಇಂತಹ ಆಶಯಗಳಲ್ಲಿ ಪ್ರಮುಖವಾದವುಗಳಾಗಿವೆ. ವೈಶ್ಯರು, ಗಹಪತಿಗಳು ಮೊದಲಾದವರ ಬೆಂಬಲವು ಈ ಆಶಯಗಳಿಗೆ ಲಭಿಸಿತ್ತು.



ಬಿ.ಸಿ.ಇ. 6 ನೇ ಶತಮಾನದಲ್ಲಿ ಕೃಷಿ ಆರ್ಥಿಕ ವ್ಯವಸ್ಥೆಯು ಬಲಗೊಂಡದ್ದು ನೂತನ ಆಶಯಗಳ ಉಗಮಕ್ಕೆ ಹೇಗೆ ಸಂದರ್ಭವನ್ನು ಒದಗಿಸಿತು? ಚರ್ಚಿಸಿರಿ.

## ಜೈನ ಮತ

ವರ್ಧಮಾನ ಮಹಾವೀರನು ಬಿಹಾರದ ವೈಶಾಲಿಗೆ ಸಮೀಪದ ಕುಂದಲ ಗ್ರಾಮದಲ್ಲಿ ಜನಿಸಿದನು. ಜೈನಮತದ ನಂಬಿಕೆಯ ಪ್ರಕಾರ ವರ್ಧಮಾನ ಮಹಾವೀರನು 24 ನೇ ತೀರ್ಥಂಕರನಾಗಿದ್ದಾನೆ.

### ತೀರ್ಥಂಕರರು

'ಸನ್ಯಾಸದ ಮೂಲಕ ಜ್ಞಾನವನ್ನು ಗಳಿಸಿದವನು' ಎಂಬುದು 'ತೀರ್ಥಂಕರ' ಎಂಬ ಪದದ ಅರ್ಥ. ಜೈನ ಮತದ ನಂಬಿಕೆ ಪ್ರಕಾರ 24 ತೀರ್ಥಂಕರರಿದ್ದಾರೆ. ಅವರಲ್ಲಿ ಋಷಭದೇವನು ಮೊದಲನೇ ತೀರ್ಥಂಕರನಾಗಿದ್ದಾನೆ. ಪಾರ್ಶ್ವನಾಥನು 23 ನೇ ತೀರ್ಥಂಕರನಾಗಿದ್ದಾನೆ. ವರ್ಧಮಾನ ಮಹಾವೀರನು 24 ನೇ (ಕೊನೆಯ) ತೀರ್ಥಂಕರನಾಗಿದ್ದಾನೆ. ಪಾರ್ಶ್ವನಾಥನ ಆಶಯದೊಂದಿಗೆ ತನ್ನ ತತ್ವಗಳನ್ನು ಸೇರಿಸಿ ಮಹಾವೀರನು ಜೈನಮತದ ಆಶಯಗಳನ್ನು ಪ್ರಚಾರ ಮಾಡಿದನು.



ಮಥುರಾದಿಂದ ಲಭಿಸಿದ ತೀರ್ಥಂಕರನ ಪ್ರತಿಮೆ



## ಜೈನ ಮತದ ಆಶಯಗಳು

- ಜಗತ್ತಿನಲ್ಲಿ ಎಲ್ಲ ವಸ್ತುಗಳಿಗೂ ಜೀವವಿದೆ.
- ಜೀವವಿರುವ ಯಾವುದನ್ನೂ ನೋಯಿಸಬಾರದು.
- ಕರ್ಮದ ಆಧಾರದಲ್ಲಿ ಜನ್ಮ ಹಾಗೂ ಪುನರ್ಜನ್ಮಗಳು ನಿಶ್ಚಯಿಸಲ್ಪಡುತ್ತವೆ.

ವೇದಗಳ ಔಚಿತ್ಯವನ್ನು ನಿರಾಕರಿಸಿದ ಮಹಾವೀರನು ಮೋಕ್ಷ ಪ್ರಾಪ್ತಿಗಾಗಿ ಮೂರು ತತ್ವಗಳನ್ನು ಮುಂದಿರಿಸಿದನು. ಅವು ಸರಿಯಾದ ನಂಬಿಕೆ, ಸರಿಯಾದ ಜ್ಞಾನ, ಸರಿಯಾದ ನಡತೆ ಎಂಬಿವುಗಳಾಗಿದ್ದವು. ಇವುಗಳನ್ನು 'ತ್ರಿರತ್ನ'ಗಳೆಂದು ಕರೆಯುತ್ತಾರೆ. ಮಹಾವೀರನು ತನ್ನ ಆಶಯಗಳನ್ನು ಪ್ರಾಕೃತ ಭಾಷೆಯಲ್ಲಿ ಜನರೊಂದಿಗೆ ಹಂಚಿಕೊಂಡನು. ಜೈನಮತದ ಪ್ರಕಾರ ಸನ್ಯಾಸಿ-ಸನ್ಯಾಸಿನಿಯರು ಐದು ವ್ರತಗಳನ್ನು ಪಾಲಿಸಬೇಕಿತ್ತು. ಅವು ಯಾವುದನ್ನೂ ಕೊಲ್ಲಬಾರದು, ಕಳ್ಳತನ ಮಾಡಬಾರದು, ಸುಳ್ಳು ಹೇಳಬಾರದು, ಬ್ರಹ್ಮಚರ್ಯೆಯನ್ನು ಪಾಲಿಸಬೇಕು, ಆಸ್ತಿ ಸಂಪಾದನೆ ಮಾಡಬಾರದು ಎಂಬಿವುಗಳಾಗಿವೆ.

ಅನಂತರದ ಕಾಲದಲ್ಲಿ ಜೈನಮತವು ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಗಡಗಳಾದುವು. ಜೈನಮತವು ಒತ್ತು ನೀಡಿದ ಅಹಿಂಸಾ ತತ್ವವು ಭಾರತದ ತತ್ವಚಿಂತನೆಯ ಮೇಲೆ ಪ್ರಭಾವ ಬೀರಿದೆ.

### ಕೇರಳ ಮತ್ತು ಜೈನಮತ

ಭಾರತದ ವಿವಿಧ ಭಾಗಗಳಲ್ಲಿ ವ್ಯಾಪಿಸಿದ ಜೈನಮತವು ಕೇರಳದಲ್ಲೂ ಪ್ರಚಾರದಲ್ಲಿತ್ತು. ವಯನಾಡು ಕೇರಳದ ಪ್ರಮುಖ ಜೈನಮತದ ಕೇಂದ್ರವಾಗಿತ್ತು. ಇದಕ್ಕೆ ಪುರಾವೆಗಳಾಗಿ ಕೆಲವೊಂದು ಜೈನ ಕ್ಷೇತ್ರಗಳು ಇಂದೂ ಇಲ್ಲಿವೆ.



ವಯನಾಡಿನ ಜೈನಮತ ಕ್ಷೇತ್ರ

## ದುಃಖಗಳಿಗೆ ಕಾರಣವನ್ನು ಹುಡುಕಿದ ಗೌತಮಬುದ್ಧ

ದಿಘನಿಕಾಯದ ಶ್ರೀಬುದ್ಧನ ದೀರ್ಘವಾದ ಬೋಧನೆಗಳ ಪೈಕಿ ಮೂವತ್ತೊಂದನೇ ಸೂಕ್ತಿಯಲ್ಲಿ ಬೌದ್ಧ ಮತಕ್ಕೆ ನೂತನವಾಗಿ ಸೇರಿದ ಯುವಕನಲ್ಲಿ ಶ್ರೀಬುದ್ಧನು ಹೀಗೆ ಹೇಳಿದನು...

"ಕುಟುಂಬ ಜೀವನದಲ್ಲಿ ಪುರುಷ ಹಾಗೂ ಸ್ತ್ರೀ ಸಮಾನರಾಗಿ ಮತ್ತು ಗೌರವದಿಂದ ಜೀವಿಸಬೇಕು. ಇಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಬೇಕು. ಮಾತ್ರವಲ್ಲ ಉದ್ಯೋಗದಾತರು ತಮ್ಮ ಸೇವಕರಲ್ಲಿ ಹಾಗೂ ಕೆಲಸಗಾರರೊಂದಿಗೆ ಗೌರವದಿಂದ ವರ್ತಿಸಬೇಕು. ಅವರ ಶಾರೀರಿಕ ಸಾಮರ್ಥ್ಯಕ್ಕಿಂತ ಹೆಚ್ಚು ಭಾರವಿರುವ ಕೆಲಸಗಳನ್ನು ಅವರಿಂದ ಮಾಡಿಸಬಾರದು. ಅವರಿಗೆ ಅಗತ್ಯವಾದ ಆಹಾರ ಮತ್ತು ನ್ಯಾಯಯುತವಾದ ವೇತನವನ್ನು ನೀಡಬೇಕು. ಶಾರೀರಿಕ, ಮಾನಸಿಕ ಅನಾರೋಗ್ಯವುಳ್ಳವರಾಗಿದ್ದಾರೆ. ಅವರಿಗೆ ಶುಶ್ರೂಷೆಯನ್ನು ಒದಗಿಸಬೇಕು. ಕೆಲಸಗಾರರು ಅವರ ನ್ಯಾಯಯುತವಾದ ವೇತನದಲ್ಲಿ ತೃಪ್ತರಾಗಿ ಚೆನ್ನಾಗಿ ಕೆಲಸಮಾಡಬೇಕು. ತಮ್ಮ ಯಜಮಾನನ ಗೌರವವನ್ನು ಕಾಪಾಡಬೇಕು".

ಬುದ್ಧನ ಉಪದೇಶಗಳು ಹಾಗೂ ತತ್ವಗಳು ಬಹಳ ಸರಳವೂ ಪ್ರಾಯೋಗಿಕವೂ ಆಗಿದ್ದವು. ವೇದಗಳನ್ನು, ಯಾಗಗಳನ್ನು ಮತ್ತು ಜಾತಿ ವ್ಯವಸ್ಥೆಯನ್ನು ಅವನು ನಿರಾಕರಿಸಿದನು. ಅವನು ಪ್ರತಿಪಾದಿಸಿದ 'ಅಹಿಂಸೆ' ಎಂಬ ಆಶಯವು ಗಂಗಾ ನದೀ ತೀರದ ನೂತನ ಸನ್ನಿವೇಶಗಳಿಗೆ ಹೊಂದಿಕೊಳ್ಳುವವುಗಳಾಗಿದ್ದವು. ಕೃಷಿ ವೃತ್ತಿಯಲ್ಲಿ ಕೃಷಿಗಾಗಿ ನೆಲವನ್ನು ಹದಗೊಳಿಸಲು ಹಾಗೂ ವ್ಯಾಪಾರದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು ಜಾನುವಾರುಗಳು ಬೇಕಾಗಿದ್ದವು. ಆದರೆ ಯಾಗಗಳಲ್ಲಿ ಜಾನುವಾರುಗಳನ್ನು ಹೇರಳವಾಗಿ ಬಲಿ ನೀಡುತ್ತಿದ್ದದ್ದು ಕೃಷಿ ಮತ್ತು ಸರಕುಗಳ ಸಾಗಣೆಯನ್ನು ಪ್ರತಿಕೂಲವಾಗಿ ಬಾಧಿಸಿತು. ಯಾಗಗಳಿಗೆದುರಾಗಿದ್ದ ಬುದ್ಧನ ದೃಷ್ಟಿಕೋನವು ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದವರನ್ನು ಆಕರ್ಷಿಸಿತು. ಜನಸಾಮಾನ್ಯರ ಭಾಷೆಯಾಗಿದ್ದ ಪಾಲಿಯಲ್ಲಿ ಬುದ್ಧನು ತನ್ನ ಆಶಯಗಳನ್ನು ಪ್ರಚಾರ ಮಾಡಿದನು.

ಬುದ್ಧನ ಜೀವನದ ಕೆಲವು ಪ್ರಧಾನ ಘಟನೆಗಳನ್ನು ಕೆಳಗೆ ನೀಡಲಾಗಿದೆ. ಇದರ ಆಧಾರದಲ್ಲಿ ಜೀವನ ಚರಿತ್ರೆಯೊಂದನ್ನು ತಯಾರಿಸಿರಿ. ಶಾಲಾ ಗ್ರಂಥಾಲಯದಿಂದ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿರಿ.



ಮಥುರಾದಿಂದ ಲಭಿಸಿದ ಬುದ್ಧ ಪ್ರತಿಮೆ (ಸಿ.ಇ. ಒಂದನೇ ಶತಮಾನ)




## ಅಷ್ಟಾಂಗ ಮಾರ್ಗ

- ಸರಿಯಾದ ದೃಷ್ಟಿ
- ಸರಿಯಾದ ಉದ್ದೇಶ
- ಸರಿಯಾದ ಮಾತು
- ಸರಿಯಾದ ಕಾರ್ಯ
- ಸರಿಯಾದ ಬಾಳ್ವೆ
- ಸರಿಯಾದ ಪ್ರಯತ್ನ
- ಸರಿಯಾದ ಚಿಂತನೆ
- ಸರಿಯಾದ ಧ್ಯಾನ

ಅಷ್ಟಾಂಗ ಮಾರ್ಗವನ್ನು ಮಧ್ಯಮಾರ್ಗವೆಂದೂ ಕರೆಯುತ್ತಾರೆ.

## ಮಧ್ಯ ಮಾರ್ಗ

ಒಬ್ಬ ವ್ಯಕ್ತಿಯು ಕಠಿಣವಾದ ಸನ್ಯಾಸವನ್ನು ಸ್ವೀಕರಿಸುವುದನ್ನು ಬುದ್ಧನು ನಿಷೇಧಿಸಿದ್ದನು. ಅದೇ ರೀತಿ ಆಡಂಬರದ ಜೀವನವನ್ನೂ ಬುದ್ಧನು ನಿರಾಕರಿಸಿದ್ದನು. ಎರಡಕ್ಕೂ ಮಧ್ಯದಲ್ಲಿರುವ ಮಧ್ಯಮಾರ್ಗವನ್ನು ಬುದ್ಧನು ನಿರ್ದೇಶಿಸಿದ್ದನು.

## ಬುದ್ಧನ ತತ್ವಗಳು

- ಜೀವನವು ದುಃಖಕರವಾಗಿದೆ.
- ಆಸೆಯೇ ದುಃಖಕ್ಕೆ ಕಾರಣ.
- ಆಸೆಯನ್ನು ನಾಶಮಾಡಿದರೆ ದುಃಖ ನಾಶವಾಗುತ್ತದೆ.
- ಇದಕ್ಕೆ ಅಷ್ಟಾಂಗ ಮಾರ್ಗವನ್ನು ಪಾಲಿಸಬೇಕು.

## ಸ್ತೂಪಗಳು

ಸ್ತೂಪಗಳೆಂದರೆ ಬುದ್ಧನ ಭೌತಿಕ ಅವಶೇಷಗಳು ಅಥವಾ ಬುದ್ಧ ಬಳಸಿದ ವಸ್ತುಗಳನ್ನು ದಫನ ಮಾಡಿದ ಸ್ಥಳಗಳಲ್ಲಿ ನಿರ್ಮಿಸಿದ ಕಟ್ಟಡಗಳಾಗಿವೆ. ಇವುಗಳನ್ನು ಅರ್ಧ ವೃತ್ತಾಕಾರದಲ್ಲಿ ನಿರ್ಮಿಸಲಾಗಿದೆ. ಸ್ತೂಪಗಳು ಕೆತ್ತನೆಗಳಿಂದ ಸಂಪನ್ನಗೊಂಡಿವೆ. ಸಾಂಚಿ, ಸಾರನಾಥ ಎಂಬೆಡೆಗಳಲ್ಲಿರುವ ಸ್ತೂಪಗಳು ಪ್ರಸಿದ್ಧವಾದವುಗಳಾಗಿವೆ.

ಬೌದ್ಧಮತದ ಪ್ರಚಾರಕ್ಕಾಗಿ ಸನ್ಯಾಸಿಗಳ 'ಸಂಘ'ಗಳನ್ನು ರೂಪಿಸಿದ್ದರು. ಜಾತಿ – ಲಿಂಗ ಎಂಬಿವುಗಳನ್ನು ಪರಿಗಣಿಸದೆ ಎಲ್ಲರನ್ನೂ ಸಂಘದಲ್ಲಿ ಒಳಪಡಿಸಿದ್ದರು. ಸಂಘದಲ್ಲಿರುವ ಸ್ತ್ರೀಯರನ್ನು 'ಭಿಕ್ಷುಣಿಗಳು' ಎಂದೂ ಪುರುಷರನ್ನು ಭಿಕ್ಷುಗಳು ಎಂದೂ ಕರೆಯುತ್ತಾರೆ.

ಚರ್ಚೆ ಹಾಗೂ ಬಹುಮತದ ಮೂಲಕ ಸಂಘಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು.

“ನದಿಗಳು ಹರಿದು ಸಮುದ್ರವನ್ನು ಸೇರಿದಾಗ ಒಂದಾಗುವುದಲ್ಲದೆ ಅವು ತಮ್ಮ ಹೆಸರನ್ನು ಕಳೆದುಕೊಳ್ಳುವಂತೆಯೇ ಓರ್ವ ಬೌದ್ಧ ಸನ್ಯಾಸಿ ಸಂಘದ ಸದಸ್ಯನಾಗುವಾಗ ಅವನ ಜಾತಿ, ಪದವಿ ಹಾಗೂ ಕುಟುಂಬವನ್ನು ಮರೆಯುತ್ತಾನೆ” ಎಂಬುದಾಗಿ ಬುದ್ಧನು ಸನ್ಯಾಸಿ ಸಂಘದ ಬಗ್ಗೆ ಹೇಳಿದ್ದಾನೆ.


ಮಧ್ಯ ಪ್ರದೇಶದ ಸಾಂಚಿ ಸ್ತೂಪ

ಅನಂತರದ ಕಾಲದಲ್ಲಿ ಬೌದ್ಧಮತವು ಮಹಾಯಾನ ಮತ್ತು ಹೀನಯಾನ ಎಂದು ಎರಡಾಗಿ ವಿಭಜನೆಗೊಂಡಿತು. ಮಹಾಯಾನದವರು ಬುದ್ಧನನ್ನು ದೇವರೆಂದು ಆರಾಧಿಸಿದರು. ಬೌದ್ಧಮತವು ಭಾರತದ ಸಂಸ್ಕೃತಿಗೆ ಅನೇಕ ಕೊಡುಗೆಗಳನ್ನು ನೀಡಿದೆ. ಬೌದ್ಧ ಮತದ ಪ್ರಚಾರಕ್ಕಾಗಿ ರೂಪಿಸಿದ ‘ಸಂಘ’ದ ಕಾರ್ಯವಿಧಾನವು ಸಮಾಜದಲ್ಲಿ ಪ್ರಜಾಪ್ರಭುತ್ವ ಪ್ರಜ್ಞೆ ಹಾಗೂ ಮೌಲ್ಯ ಪ್ರಜ್ಞೆಯನ್ನು ಬೆಳೆಸಲು ಸಹಾಯಕವಾದವು.

### ಜಗತ್ತು ಭಾರತವನ್ನು ತಿಳಿಯುತ್ತಿದೆ

ಬೌದ್ಧಮತದ ಮೂಲಕ ಪ್ರಾಚೀನ ಜಗತ್ತು ಭಾರತವನ್ನು ಗುರುತಿಸುತ್ತದೆ. ಚೀನಾ, ಜಪಾನ್, ಬರ್ಮಾ, ಟಿಬೇಟ್, ಅಫಘಾನಿಸ್ತಾನ, ಆಗ್ನೇಯ ಏಷ್ಯಾ, ಶ್ರೀಲಂಕ ಮೊದಲಾದ ದೇಶಗಳಲ್ಲಿ ಬೌದ್ಧಮತವು ಪ್ರಚಾರವಾಯಿತು.

ಬೌದ್ಧಮತದ ಸನ್ಯಾಸಿ ಸಂಘಗಳ ಚಟುವಟಿಕೆಗಳು ಪ್ರಜಾಪ್ರಭುತ್ವ ವಿಧಾನದಲ್ಲಿತ್ತೇ? ಅವಲೋಕಿಸಿರಿ.


ಉತ್ತರ ಪ್ರದೇಶದ ಸಾರನಾಥ ಸ್ತೂಪ

### ಕೇರಳ ಮತ್ತು ಬೌದ್ಧಮತ

ಬೌದ್ಧ ಮತದ ನಂಬಿಕೆಗಳು ಕೇರಳದಲ್ಲೂ ಪ್ರಚಾರದಲ್ಲಿತ್ತು. ಪ್ರಾಚೀನ ತಮಿಳು ಕೃತಿಯಾದ ‘ಮಣಿಮೇಖಲ’ದ ನಾಯಕಿಯಾದ ಮಣಿಮೇಖಲೆಯು ಬೌದ್ಧಮತವನ್ನು ಸ್ವೀಕರಿಸಿರುವುದಾಗಿ ಹೇಳಲಾಗಿದೆ. ಕೇರಳದ ವಿವಿಧ ಸ್ಥಳಗಳಿಂದ ಬೌದ್ಧ ಪ್ರತಿಮೆಗಳು ಹಾಗೂ ಇತರ ಕೆಲವು ಅವಶೇಷಗಳು ಲಭಿಸಿವೆ. ಮಲಯಾಳದ ಕೆಲವು ಶಬ್ದಗಳು ಮತ್ತು ಸ್ಥಳನಾಮಗಳು ಬೌದ್ಧ ಮತದ ಪ್ರಭಾವವನ್ನು ಸೂಚಿಸುತ್ತವೆ.

ಬಿ.ಸಿ.ಇ. 6ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಆರ್ಥಿಕ ಸನ್ನಿವೇಶಗಳಿಗೆ ಬುದ್ಧನು ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದನು? ಚರ್ಚಿಸಿರಿ.

**ಸೂಚಕಗಳು**

- ವೇದ ಕಾಲದ ಆಚಾರಗಳು
- ವರ್ಣ ವ್ಯವಸ್ಥೆ
- ಸ್ತ್ರೀಯರ ಸ್ಥಾನಮಾನ

ಬುದ್ಧ ಮತ್ತು ಮಹಾವೀರ ಪ್ರತಿಪಾದಿಸಿದ ಸಾಮಾನ್ಯ ಆಶಯಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

## ಭೌತಿಕವಾದ

ಪುರಾತನ ಕಾಲದಿಂದಲೇ ವ್ಯತ್ಯಸ್ತವಾದ ಸಿದ್ಧಾಂತಗಳು ಮೂಡಿ ಬಂದಿರುವುದು ಭಾರತದ ಸಂಸ್ಕೃತಿಯ ಪ್ರಮುಖ ವಿಶೇಷತೆಯಾಗಿದೆ. ಭೌತಿಕ ವಾದವು ಅವುಗಳಲ್ಲೊಂದಾಗಿದೆ. ಅಜಿತಕೇಶಕಂಬಳಿ ಈ ಆಶಯದ ಪ್ರಚಾರಕರು. ಅವರು ಬುದ್ಧನ ಸಮಕಾಲೀನರಾಗಿದ್ದರು. ಎಲ್ಲ ಮತಾನುಷ್ಠಾನಗಳೂ ಅರ್ಥಶೂನ್ಯವಾದುದೆಂದೂ ಇಹಲೋಕ, ಪರಲೋಕಗಳೆಂಬುದಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಭೌತಿಕವಾದಿಗಳು ಹೀಗೆ ಹೇಳಿದರು, 'ಮಾನವನು ನಾಲ್ಕು ಘಟಕಗಳಿಂದ ನಿರ್ಮಿತನಾಗಿದ್ದಾನೆ. ಅವನು ಮರಣಹೊಂದಿದಾಗ ಅವರಲ್ಲಿರುವ ಘನಾಂಶವು ಭೂಮಿಯಲ್ಲಿ ವಿಲೀನಗೊಳ್ಳುತ್ತದೆ. ದ್ರವವು ನೀರಿನಲ್ಲೂ, ಬಿಸಿಯು ಅಗ್ನಿಯಲ್ಲೂ ಶ್ವಾಸವು ವಾಯುವಿನಲ್ಲೂ ಇಂದ್ರಿಯಗಳು ಶೂನ್ಯಾಂತರಿಕ್ಷದಲ್ಲೂ ವಿಲೀನವಾಗುತ್ತವೆ.'

➢ ಇವರನ್ನು ಭೌತಿಕವಾದಿಗಳೆಂದು ಕರೆಯಲು ಕಾರಣವೇನು?

ನೂತನ ಆಶಯಗಳ ಹಾಗೂ ಮತಗಳ ರೂಪುಗೊಳ್ಳುವಿಕೆಗೆ ಸಂಬಂಧಪಟ್ಟ ಸ್ಥಳಗಳನ್ನು ಒಳಪಡಿಸಿ ಒಂದು ವರ್ಚುವಲ್ ಪ್ರವಾಸ ವರದಿಯನ್ನು ತಯಾರಿಸಿರಿ.

## ಮಹಾಜನಪದಗಳು ಅಥವಾ ಆರಂಭಕಾಲದ ರಾಷ್ಟ್ರಗಳು

"..... ಹೀಗೆ ಒಟ್ಟುಗೂಡಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುವವರೆಗೆ, ಒಟ್ಟುಗೂಡಿ ಕಾರ್ಯನಿರ್ವಹಿಸುವವರೆಗೆ; ಹಿರಿಯರನ್ನು ಗೌರವಿಸುವುದು, ಬೆಂಬಲಿಸುವುದು ಹಾಗೂ ಶ್ರದ್ಧೆಯಿಟ್ಟು ಕೇಳುವವರೆಗೆ; ವಜ್ಜಿಯಲ್ಲಿನ ಸ್ತ್ರೀಯರು ಸ್ವತಂತ್ರವಾಗಿ ಜೀವಿಸುವವರೆಗೆ; ಗ್ರಾಮಗಳಲ್ಲಿ ಹಾಗೂ ನಗರಗಳಲ್ಲಿ ಆರಾಧನಾಲಯಗಳು ನೆಲೆನಿಲ್ಲುವವರೆಗೆ, ವಿವಿಧ ವಿಶ್ವಾಸಿಗಳು ಅಲ್ಲಿ ಸ್ವತಂತ್ರರಾಗಿ ಸಂಚರಿಸಲು ಸಾಧ್ಯವಾಗುವವರೆಗೆ, ಅವರು ಗೌರವಿಸಲ್ಪಡುವವರೆಗೆ; ವಜ್ಜಿ ಅಸ್ತಿತ್ವದಲ್ಲಿರುವುದು....."

ಇದು ಸುಮಾರು 2300 ವರ್ಷಗಳ ಹಿಂದೆ ರಚಿತವಾದ ಬೌದ್ಧ ಕೃತಿಯಾದ 'ದಿಘನಿಕಾಯ'ದಲ್ಲಿ ವಜ್ಜಿ ಎಂಬ ರಾಷ್ಟ್ರದ ಕುರಿತು (ಮಹಾಜನಪದ) ಬುದ್ಧ ಹೇಳಿದ ಮಾತುಗಳಾಗಿವೆ. ವಜ್ಜಿಯ ಆ ಕಾಲದ ಆಡಳಿತ ವ್ಯವಸ್ಥೆಗಳ ಕುರಿತು ಯಾವ ಯಾವ ವಿಚಾರಗಳನ್ನು ಇದರಿಂದ ನಮಗೆ ತಿಳಿಯಲು ಸಾಧ್ಯವಿದೆ?

| |
|---|
| • ಒಟ್ಟುಗೂಡಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು. |
| • |
| • |
| • |
| • |
| • |

**ಜನಪದಗಳು**

'ಜನಪದ'ವೆಂದರೆ ಜನರು ವಾಸಿಸಿದ ಸ್ಥಳ ಎಂದರ್ಥ. ಬೆಂಕಿಯನ್ನು ಉಪಯೋಗಿಸಿ ಅರಣ್ಯಗಳನ್ನು ಉರಿಸಿ ಕೃಷಿಭೂಮಿ ಹಾಗೂ ವಾಸಸ್ಥಳಗಳನ್ನು ರೂಪಿಸಿದರು. ಅಲ್ಲಿ ಜನರು ಸ್ಥಿರವಾಗಿ ವಾಸ ಮಾಡಿದರು. ಹೀಗೆ ಜನಪದಗಳು ಅಸ್ತಿತ್ವಕ್ಕೆ ಬಂದವು. ಅನಂತರದ ವೇದ ಕಾಲದಲ್ಲಿ ವಿವಿಧ ಜನಪದಗಳ ಬಗ್ಗೆ ಪರಾಮರ್ಶಿಸಲಾಗಿದೆ.

ಬಿ.ಸಿ.ಇ. 6ನೇ ಶತಮಾನದಲ್ಲಿ ಭಾರತದಲ್ಲಿದ್ದ ಅನೇಕ ರಾಷ್ಟ್ರಗಳಲ್ಲಿ ವಜ್ಜಿ ಒಂದಾಗಿತ್ತು. ಈ ರಾಷ್ಟ್ರಗಳು ಹೇಗೆ ರೂಪುಗೊಂಡವು ಎಂಬುದನ್ನು ಪರಿಶೀಲಿಸೋಣ.

ವೇದಕಾಲದಲ್ಲಿ ಗೋತ್ರ ಸಮುದಾಯ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ಅದನ್ನು 'ಜನ' ಎಂದು ಕರೆಯುತ್ತಿದ್ದರು. ಕೃಷಿಯು ಹೆಚ್ಚಿನ ಪ್ರದೇಶಕ್ಕೆ ವ್ಯಾಪಿಸಿದಾಗ ಈ ಗೋತ್ರ ಸಮುದಾಯಗಳು ಒಂದೆಡೆ ಸ್ಥಿರವಾಸ ಮಾಡಲು ಆರಂಭಿಸಿದವು. ಇವುಗಳನ್ನು 'ಜನಪದಗಳು' ಎಂದು ಕರೆದರು.

ಜನಪದಗಳಲ್ಲಿನ ಕೃಷಿ ಉತ್ಪನ್ನಗಳ ಅಧಿಕ ಉತ್ಪಾದನೆಯು ನಗರಗಳ ಹಾಗೂ ವ್ಯಾಪಾರದ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ವ್ಯಾಪಾರದೊಂದಿಗೆ ವಿವಿಧ ಕರಕುಶಲ ವಸ್ತುಗಳ ನಿರ್ಮಾಣ ಕೇಂದ್ರಗಳಾಗಿ ನಗರಗಳು ಬದಲಾದವು. ಇಂತಹ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಏಕೀಕರಿಸಲು ಹಾಗೂ ಕ್ರಮೀಕರಿಸಲು ಕೆಲವು ನಿಯಂತ್ರಣಗಳು ಬೇಕಾದವು. ಇಂತಹ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯಿಂದಾಗಿ ಗೋತ್ರಗಳ ಆಧಾರದಲ್ಲಿದ್ದ ಆಡಳಿತ ವ್ಯವಸ್ಥೆಯು ಕಣ್ಮರೆಯಾಯಿತು.

ST-421-5-SOC. SCI.-I (K)-9-VOL-1

## ನಗರಗಳು

ದೀರ್ಘವಾದ ಪ್ರಯಾಣದ ನಂತರ ಬುದ್ಧ ಹಾಗೂ ಶಿಷ್ಯನಾದ ಆನಂದ ಕುಶಿ ನಗರವನ್ನು ತಲಪಿದರು. ಹಲವಾರು ವಿಷಯಗಳನ್ನು ಮಾತನಾಡುತ್ತಿರುವಾಗ ಬುದ್ಧನ ನಿರ್ವಾಣವೂ ಪ್ರಸ್ತಾಪಿತವಾಯಿತು. ಕಾಡಿನೊಳಗಿರುವ ಮಣ್ಣಿನ ಗುಡಿಸಲುಗಳು ಮಾತ್ರವಿರುವ ಕುಶಿನಗರದಲ್ಲಿ ಮರಣವನ್ನಪ್ಪಬಾರದೆಂದೂ ಚಂಪ, ರಾಜಗೃಹ, ಶ್ರಾವಸ್ತಿ, ಸಾಕೇತ, ಕೌಸಾಂಬಿ, ವಾರಣಾಸಿ ಮೊದಲಾದ ದೊಡ್ಡ ನಗರಗಳನ್ನು ಕೊನೆಗಾಲಕ್ಕೆ ಆಯ್ಕೆ ಮಾಡಬೇಕೆಂದು ಆನಂದನು ಹೇಳಿದನು. ಬೌದ್ಧ ಕೃತಿಯಾದ 'ದಿಘನಿಕಾಯ'ದ ಈ ವಿವರಣೆಯಿಂದ ಯಾವ ಯಾವ ವಿಚಾರಗಳನ್ನು ತಿಳಿದುಕೊಳ್ಳಬಹುದು?

ಕೃಷಿ ಹಾಗೂ ಮಣ್ಣಿನೊಂದಿಗಿರುವ ಅವಿನಾಭಾವ ಸಂಬಂಧವು ಈ ಕಾಲದಲ್ಲಿ ಬೆಳೆದುಬಂತು. ಇದು ಅವರವರ ಪ್ರದೇಶವೆಂಬ ದೃಷ್ಟಿಕೋನವನ್ನು ರೂಪಿಸಿತು. ಹೀಗೆ ರಾಷ್ಟ್ರ ರೂಪೀಕರಣ ಎಂಬ ಆಶಯ ವಾಸ್ತವವಾಯಿತು. ಬೌದ್ಧ ಕೃತಿಯಾದ 'ಅಂಗುತ್ತರನಿಕಾಯ'ದಲ್ಲಿ ಹೀಗೆ ರೂಪುಗೊಂಡ 16 ರಾಜ್ಯಗಳ ಕುರಿತು ಹೇಳಲಾಗಿದೆ. ಇವುಗಳನ್ನು 'ಮಹಾಜನಪದಗಳು' ಎನ್ನುತ್ತಾರೆ. ಮೇಲೆ ವಿವರಿಸಿದ ಬದಲಾವಣೆಗಳನ್ನು ಚರಿತ್ರೆಕಾರರು 'ಎರಡನೇ ನಗರೀಕರಣ' ಎಂದು ಬಣ್ಣಿಸುತ್ತಾರೆ.

ಕೆಳಗೆ ನೀಡಿರುವ ಭೂಪಟದಿಂದ 16 ಮಹಾಜನಪದಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.




ಭೂಪಟ 1
**16 ಮಹಾಜನಪದಗಳು**

| | | |
|---|---|---|
| • | • | • |
| • | • | • |
| • | • | • |
| • | • | • |
| • | • | |
| • | • | |

## ಮಹಾಜನಪದಗಳ ಆಡಳಿತ ವ್ಯವಸ್ಥೆ

ಸಮಕಾಲೀನ ಕೃತಿಗಳು ಮಹಾಜನಪದಗಳಲ್ಲಿನ ಆಡಳಿತ ವ್ಯವಸ್ಥೆಯ ಬಗ್ಗೆ ಕೆಲವು ಮಾಹಿತಿಗಳನ್ನು ನೀಡುತ್ತವೆ. ಆ ಕಾಲದಲ್ಲಿ ಕಾರ್ಯದಕ್ಷತೆಯಿಂದೊಡಗೂಡಿದ ತೆರಿಗೆ ಸಂಗ್ರಹ ವ್ಯವಸ್ಥೆ ಮತ್ತು ಸ್ಥಿರವಾದ ಸೈನ್ಯ ವ್ಯವಸ್ಥೆ ಜಾರಿಗೆ ಬಂತು. ಪಾಲಿ ಭಾಷೆಯಲ್ಲಿ ರಚಿತವಾಗಿರುವ ಗ್ರಂಥಗಳಲ್ಲಿ ಉಲ್ಲೇಖಿಸಿರುವ 'ಬಲಿ' ಎಂಬ ಪದವನ್ನು 'ತೆರಿಗೆ' ಎಂದು ತಿಳಿಯಲಾಗಿದೆ. 'ಭಾಗ' ಎಂಬುದು ಮತ್ತೊಂದು ವಿಧದ ತೆರಿಗೆಯಾಗಿತ್ತು. ಧಾನ್ಯಗಳು, ಜಾನುವಾರುಗಳು ಇತ್ಯಾದಿಗಳನ್ನು ಪ್ರಮುಖವಾಗಿ ತೆರಿಗೆಯಾಗಿ ನೀಡುತ್ತಿದ್ದರು. ಅರಣ್ಯವಾಸಿಗಳು ಅರಣ್ಯ ಸಂಪನ್ಮೂಲಗಳನ್ನು ತೆರಿಗೆಯಾಗಿ ನೀಡಿದಾಗ, ಕರಕುಶಲ ಕೆಲಸಗಾರರು ನಿಶ್ಚಿತ ದಿವಸ ರಾಜನಿಗಾಗಿ ಕೆಲಸ ಮಾಡುತ್ತಿದ್ದರು.

ಆಡಳಿತ ನಿರ್ವಹಣೆಗಾಗಿ ಅನೇಕ ಅಧಿಕಾರಿಗಳಿದ್ದರು. 'ಶತಪಥ ಬ್ರಾಹ್ಮಣ' ಎಂಬ ಕೃತಿಯಲ್ಲಿ ರಾಜನಿಗೆ ಸಹಾಯ ಮಾಡಿದ ಸೇನಾನಿ, ಪುರೋಹಿತ, ಗ್ರಾಮಣಿ ಎಂಬಿವರ ಕುರಿತು ಉಲ್ಲೇಖಿಸಲಾಗಿದೆ. ಮಹಾಜನಪದಗಳಿಗೆ ಕೋಟೆಗಳು ಹಾಗೂ ರಾಜಧಾನಿ ನಗರಗಳಿದ್ದುವು.



ಕೌಸಂಬಿಯ ಗೋಡೆ
(ವತ್ಸ ಮಹಾಜನಪದ ರಾಜಧಾನಿ)

ಗೋತ್ರ ರಾಜಕೀಯ ವ್ಯವಸ್ಥೆಯಿಂದ ಮಹಾಜನಪದಗಳೆಡೆಗಿರುವ ಬೆಳವಣಿಗೆಯ ವಿವಿಧ ಹಂತಗಳು ಹಾಗೂ ಅವುಗಳ ವಿಶೇಷತೆಗಳು ಎಂಬಿವುಗಳನ್ನು ಕಂಡುಹಿಡಿದು ಚರ್ಚಿಸಿರಿ.

## ಮಗಧದ ಬೆಳವಣಿಗೆ

ಹದಿನಾರು ಜನಪದಗಳು ಅಧಿಕಾರಕ್ಕಾಗಿ ತಮ್ಮೊಳಗೆ ನಿರಂತರ ಯುದ್ಧಗಳಲ್ಲಿ ತೊಡಗಿಸಿಕೊಂಡಿದ್ದವು. ಇದರಲ್ಲಿ ಮಗಧವು ಅಂತಿಮವಾಗಿ ಜಯಗಳಿಸಿತು. ಭೂಪಟ 1 ರಿಂದ ಮಗಧದ ಸ್ಥಾನವನ್ನು ಕಂಡುಹಿಡಿಯಿರಿ. ಮಗಧವು ಇಂದಿನ ಯಾವ ರಾಜ್ಯದಲ್ಲಿ ಒಳಪಡುವ ಪ್ರದೇಶವೆಂಬುದನ್ನು ಕಂಡುಹಿಡಿಯಲು ಸಾಧ್ಯವೇ?

ಮಗಧವು ಉತ್ತಮ ಮಳೆ ಲಭಿಸುವ ಉತ್ಪಾದನಾ ದಕ್ಷತೆಯಿರುವ ಪ್ರದೇಶವಾಗಿತ್ತು. ಮಾತ್ರವಲ್ಲದೆ ಕಬ್ಬಿಣದ ಅದಿರಿನ ಹೇರಳವಾದ ನಿಕ್ಷೇಪವೂ ಅಲ್ಲಿತ್ತು. ಆದುದರಿಂದ ಉಪಕರಣಗಳಿಗೆ ಹಾಗೂ ಆಯುಧಗಳಿಗೆ ಅಗತ್ಯವಾದ ಕಬ್ಬಿಣವು ಅಲ್ಲಿಂದಲೇ ಲಭಿಸಿತು. ಆನೆಗಳು ಆ ಕಾಲದ ಯುದ್ಧಗಳಲ್ಲಿ ಪ್ರಮುಖ ಪಾತ್ರವಹಿಸಿದ್ದುವು. ಮಗಧದ ಅರಣ್ಯಗಳಲ್ಲಿ ಆನೆಗಳು ಯಥೇಷ್ಟವಾಗಿದ್ದವು. ಇದು ಮಗಧದ ಜಯವನ್ನು ಖಾತರಿಪಡಿಸಿತು. ಗಂಗಾ ಹಾಗೂ ಅದರ ಪೋಷಕ ನದಿಗಳು ಸರಕು ಸಾಗಾಟಕ್ಕೆ ಅನುಕೂಲಕರವಾಗಿದ್ದುವು. ಬಿಂಬಿಸಾರ, ಅಜಾತ ಶತ್ರು ಮೊದಲಾದ ಸಮರ್ಥ ಆಡಳಿತಾಧಿಕಾರಿಗಳೂ ಮಗಧದಲ್ಲಿದ್ದರು.

### ಮಗಧ ರಾಜವಂಶಗಳು ಮತ್ತು ಪ್ರಮುಖ ರಾಜರು

- ಹರ್ಯಂಕ ರಾಜವಂಶ – ಬಿಂಬಿಸಾರ, ಅಜಾತಶತ್ರು
- ಶಿಶುನಾಗ ರಾಜವಂಶ – ಶಿಶುನಾಗ
- ನಂದರಾಜ ವಂಶ – ಮಹಾಪದ್ಮನಂದ

ಭೌಗೋಳಿಕ ವಿಶೇಷತೆಗಳು ಮಗಧದ ಬೆಳವಣಿಗೆಗೆ ಪ್ರಮುಖ ಕಾರಣವಾಗಿತ್ತೆಂಬುದಾಗಿ ನೀವು ಭಾವಿಸುತ್ತೀರಾ? ಯಾಕೆ?

## ಮಗಧದಿಂದ ಮೌರ್ಯ ರಾಜ್ಯದೆಡೆಗೆ

ಮಗಧದಲ್ಲಿ ವಿವಿಧ ರಾಜವಂಶಗಳು ಆಡಳಿತ ನಡೆಸಿದ್ದವು. ಅವುಗಳಲ್ಲಿ ನಂದವಂಶದ ಕೊನೆಯ ಆಡಳಿತಾಧಿಕಾರಿಯಾಗಿದ್ದ ಧನನಂದನನ್ನು ಪರಾಜಯಗೊಳಿಸಿ ಬಿ.ಸಿ.ಇ. 321 ರಲ್ಲಿ ಚಂದ್ರಗುಪ್ತ ಮೌರ್ಯನು ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು.

*ಇದು ಸುಂದರವಾದ ದೊಡ್ಡ ನಗರವಾಗಿದೆ. ಈ ನಗರದ ಸುತ್ತಲೂ ದೊಡ್ಡದಾದ ಒಂದು ಆವರಣ ಗೋಡೆಯಿದೆ. ಇದಕ್ಕೆ 64 ಪ್ರವೇಶ ದ್ವಾರಗಳೂ ಅನೇಕ ಗೋಪುರಗಳೂ ಇವೆ. ಮರ ಹಾಗೂ ಮಣ್ಣಿನ ಮುದ್ದೆಗಳನ್ನುಪಯೋಗಿಸಿ ಎರಡು, ಮೂರು ಅಂತಸ್ತಿನ ಮನೆಗಳನ್ನು ನಿರ್ಮಿಸಿದ್ದರು. ರಾಜನ ಅರಮನೆಯನ್ನೂ ಮರದಿಂದ ನಿರ್ಮಿಸಿದ್ದರು.*

ಇದು ಮೌರ್ಯ ರಾಜವಂಶದ ರಾಜಧಾನಿಯಾದ ಪಾಟಲೀಪುತ್ರ (ಇಂದಿನ ಪಾಟ್ನಾ) ನಗರದ ಕುರಿತು ಮೆಗಸ್ತನೀಸ್ ಎಂಬ ಗ್ರೀಕ್ ರಾಜ ಪ್ರತಿನಿಧಿಯ ಉಲ್ಲೇಖವಾಗಿದೆ. ಕೌಟಿಲ್ಯ ಬರೆದ 'ಅರ್ಥಶಾಸ್ತ್ರ', ಅಶೋಕ ಚಕ್ರವರ್ತಿಯ ಬರವಣಿಗೆಗಳು, ಆ ಕಾಲದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳು ಮೊದಲಾದವುಗಳು ಮೌರ್ಯ ರಾಜ್ಯದ ಚರಿತ್ರೆಯ ಅಧ್ಯಯನಕ್ಕೆ ಸಹಾಯಮಾಡುತ್ತವೆ.

## ಅರ್ಥಶಾಸ್ತ್ರ ಹಾಗೂ ಸಪ್ತಾಂಗ ಸಿದ್ಧಾಂತ



ಕೌಟಿಲ್ಯನು ರಚಿಸಿದ ಅರ್ಥಶಾಸ್ತ್ರವು ಮೌರ್ಯ ಸಾಮ್ರಾಜ್ಯದ ಕುರಿತಾದ ಮಾಹಿತಿಗಳನ್ನು ನೀಡುವ ಪ್ರಧಾನ ಚಾರಿತ್ರಿಕ ದಾಖಲೆಯೂ ಆಗಿದೆ. ಮೈಸೂರಿನ ಪ್ರಾಚ್ಯವಸ್ತು ಗ್ರಂಥಾಲಯದ ಮುಖ್ಯಸ್ಥನಾಗಿದ್ದ ಆರ್ ಶ್ಯಾಮ ಶಾಸ್ತ್ರಿಗೆ ತಂಜಾವೂರಿನ ಒಬ್ಬರು ಪಂಡಿತರಿಂದ ಅರ್ಥಶಾಸ್ತ್ರದ ಕೈಬರಹದ ಪ್ರತಿಯು ಲಭಿಸಿತು. 1907 ರಲ್ಲಿ ಶ್ಯಾಮ ಶಾಸ್ತ್ರಿಯು ಇದನ್ನು ಪ್ರಕಟಿಸಿದರು. ಈ ಕೃತಿಯಲ್ಲಿ ಹದಿನೈದು ಅಧ್ಯಾಯಗಳಿವೆ. ರಾಜ್ಯವು ಏಳು ಘಟಕಗಳ ಅಥವಾ ಸಪ್ತಾಂಗಗಳ ಆಧಾರದಲ್ಲಿ ಕಾರ್ಯಾಚರಿಸುತ್ತವೆ ಎಂದು ಅರ್ಥಶಾಸ್ತ್ರವು ವಿವರಿಸುತ್ತದೆ.

- ಸ್ವಾಮಿ - ರಾಜ
- ಅಮಾತ್ಯ - ಮಂತ್ರಿಗಳು
- ಜನಪದ - ಭೂಮಿ ಹಾಗೂ ಜನರು
- ದುರ್ಗ - ಕೋಟೆ ಕಟ್ಟಿ ಸಂರಕ್ಷಿಸಿದ ಸ್ಥಳ
- ಕೋಶ - ಖಜಾನೆ
- ದಂಡ - ನ್ಯಾಯ ಪರಿಪಾಲನೆ
- ಮಿತ್ರ - ಮಿತ್ರ ದೇಶಗಳು

ಅಶೋಕ ಚಕ್ರವರ್ತಿಯು ಮೌರ್ಯ ಸಾಮ್ರಾಜ್ಯದ ಪ್ರಧಾನ ಆಡಳಿತಾಧಿಕಾರಿಯಾಗಿದ್ದನು. ಅವನು ಕಳಿಂಗವನ್ನು (ಇಂದಿನ ಒಡಿಶಾ) (ಭೂಪಟ – 2 ನ್ನು ಗಮನಿಸಿರಿ) ಆಕ್ರಮಿಸಿ ವಶಪಡಿಸುವುದರೊಂದಿಗೆ ಮೌರ್ಯ ಸಾಮ್ರಾಜ್ಯ ವಿಸ್ತಾರವಾಯಿತು. ಕಳಿಂಗ ಯುದ್ಧದ ನಂತರ ಅಶೋಕ ಚಕ್ರವರ್ತಿಯು ಯುದ್ಧಗಳನ್ನು ತ್ಯಜಿಸಿದುದಾಗಿ ಶಾಸನಗಳಲ್ಲಿ ದಾಖಲಿಸಲಾಗಿದೆ.



ರುಮಿನ್ ದೇಯಿ (ಲುಂಬಿಣಿ) ಶಾಸನ

'ಬೌದ್ಧ ಶಾಕ್ಯಮುನಿ ಜನಿಸಿದ ಈ ಸ್ಥಳದಲ್ಲಿ ದೇವನಾಂಪಿಯ ಪಿಯದಸಿಯು ಕಿರೀಟಧಾರಣೆಯಾಗಿ ಇಪ್ಪತ್ತು ವರ್ಷದ ನಂತರ ಸ್ವತಃ ಅಲ್ಲಿಗೆ ಬಂದು ಪ್ರಾರ್ಥನೆ ಸಲ್ಲಿಸಿದನು. ಇದು ಆ ಪುಣ್ಯಾತ್ಮರು ಜನಿಸಿದ ಸ್ಥಳ ಎಂಬುದನ್ನು ತಿಳಿಸುವುದಕ್ಕಾಗಿ ಅಲ್ಲಿ ಕಗ್ಗಲ್ಲಿನ ಶಿಲೆಯ ಆವರಣ ಗೋಡೆಯಿಂದೊಡಗೂಡಿದ ಸ್ತೂಪವನ್ನು ಸ್ಥಾಪಿಸಿದನು. ಲುಂಬಿಣಿಯಲ್ಲಿರುವವರನ್ನು 'ಬಲಿ'ಯಿಂದ ಹೊರತುಪಡಿಸಿದುದಲ್ಲದೆ ಅವರು ಬೆಳೆಸಿದ ಬೆಳೆಯ ಎಂಟನೇ ಒಂದಂಶವನ್ನು ($\frac{1}{8}$) ಮಾತ್ರ 'ಭಾಗ'ವಾಗಿ ನೀಡಿದರೆ ಸಾಕೆಂದು ತೀರ್ಮಾನವನ್ನು ಮಾಡಿದನು.'

ಮೇಲಿನವು ನೇಪಾಳದ ರುಮಿನ್ ದೇಯಿಯ (ಲುಂಬಿಣಿ) ಶಾಸನ ಹಾಗೂ ಅದರ ಕನ್ನಡಾನುವಾದವಾಗಿದೆ.



ಈ ಶಾಸನದಿಂದ ಮೌರ್ಯ ಸಾಮ್ರಾಜ್ಯದ ಬಗ್ಗೆ ಯಾವ ಯಾವ ವಿಷಯಗಳನ್ನು ತಿಳಿದುಕೊಳ್ಳಲು ನಿಮಗೆ ಸಾಧ್ಯವಾಯಿತು?

- ..........................................................................................
- ..........................................................................................
- ..........................................................................................
- ..........................................................................................

## ಅಶೋಕನ ಶಾಸನಗಳು

ಅಶೋಕ ಚಕ್ರವರ್ತಿಯ ಅನೇಕ ಶಿಲಾ ಶಾಸನಗಳು ಭಾರತ ಪರ್ಯಾಯ ದ್ವೀಪದ ವಿವಿಧ ಭಾಗಗಳಿಂದ ಲಭಿಸಿವೆ. ಬ್ರಾಹ್ಮಿ, ಖರೋಷ್ಠಿ, ಅರಾಮಿಕ್ ಲಿಪಿಗಳಲ್ಲಿ ಇವುಗಳನ್ನು ರಚಿಸಲಾಗಿದೆ. ಇಂಗ್ಲೇಂಡಿನವನಾದ ಜೇಮ್ಸ್ ಪ್ರಿನ್ಸೆಪ್ ಎಂಬವನು 1838 ರಲ್ಲಿ ಮೊತ್ತಮೊದಲ ಬಾರಿಗೆ ಅಶೋಕನ ಶಾಸನಗಳನ್ನು ಓದಿದನು. ಹೆಚ್ಚಿನ ಶಾಸನಗಳಲ್ಲಿಯೂ ರಾಜನನ್ನು 'ದೇವನಾಂಪಿಯ' (ದೇವರಿಗೆ ಪ್ರಿಯನಾದವನು) ಎಂದು ಉಲ್ಲೇಖಿಸಲಾಗಿದೆ. ಆದರೆ ಕರ್ನಾಟಕದ ಮಸ್ಕಿ, ಉದೇಗೋಳ, ನಿಟ್ಟೂರು ಎಂಬೆಡೆಗಳಲ್ಲಿನ ಶಾಸನಗಳಲ್ಲಿ 'ಅಶೋಕ' ಎಂಬ ಹೆಸರೂ ಕಂಡುಬರುತ್ತದೆ. ಆಧುನಿಕ ಭಾರತದಲ್ಲಿ ಉಪಯೋಗಿಸುವ ಹೆಚ್ಚಿನ ಲಿಪಿಗಳೂ ಬ್ರಾಹ್ಮಿ ಲಿಪಿಯಿಂದ ರೂಪುಗೊಂಡದ್ದಾಗಿದೆ.


ಬ್ರಾಹ್ಮಿ


ಹಿಂದಿ


ಬಂಗಾಳಿ


ಮಲಯಾಳ


ತಮಿಳು

## ಮೌರ್ಯರ ಆಡಳಿತ

ಮೌರ್ಯ ರಾಜ್ಯವು ವಿಶಾಲವಾಗಿತ್ತೆಂದು ತಿಳಿದಿರಲ್ಲವೇ. ಇನ್ನು ಅವರ ಆಡಳಿತ ವ್ಯವಸ್ಥೆ ಹೇಗಿತ್ತೆಂಬುದನ್ನು ನಾವು ನೋಡೋಣ.

ಆಡಳಿತ ಸೌಕರ್ಯಕ್ಕಾಗಿ ನಮ್ಮ ದೇಶವನ್ನು ವಿವಿಧ ರಾಜ್ಯಗಳಾಗಿ ವಿಭಜಿಸಿದ್ದಾರಲ್ಲವೇ. ಮಾತ್ರವಲ್ಲದೆ ಎಲ್ಲ ರಾಜ್ಯಗಳಿಗೂ ರಾಜಧಾನಿಯಿದೆಯಲ್ಲವೇ. ಮೌರ್ಯ ಸಾಮ್ರಾಜ್ಯವನ್ನು ಹೀಗೆಯೇ ವಿವಿಧ ಪ್ರಾಂತ್ಯಗಳಾಗಿ ವಿಭಜಿಸಿದ್ದರು. ಈ ಪ್ರಾಂತ್ಯಗಳು ರಾಜ್ಯಪಾಲರ ನಿಯಂತ್ರಣದಲ್ಲಿದ್ದವು. ರಾಜಧಾನಿಯಾದ ಪಾಟಲೀಪುತ್ರವು ಚಕ್ರವರ್ತಿಯ ನೇರವಾದ ನಿಯಂತ್ರಣದಲ್ಲಿತ್ತು.

ಭೂಪಟ – 2 ರಿಂದ ಪ್ರಾಂತ್ಯಗಳ ರಾಜಧಾನಿಯನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

ಭೂಪಟ 2




▲ ಪ್ರಾಂತ್ಯದ ರಾಜಧಾನಿ

◈ ಸಾಮ್ರಾಜ್ಯದ ರಾಜಧಾನಿ

| | |
|---|---|
| ದಕ್ಷಿಣ ಪ್ರಾಂತ್ಯ | |
| ಪಶ್ಚಿಮ ಪ್ರಾಂತ್ಯ | |
| ಉತ್ತರ ಪ್ರಾಂತ್ಯ | |
| ಪೂರ್ವ ಪ್ರಾಂತ್ಯ | |

ಮೌರ್ಯರ ಸೈನ್ಯದಲ್ಲಿ ಐದು ವಿಭಾಗಗಳಿದ್ದವು. ಅವು ಕಾಲಾಳುಪಡೆ, ಅಶ್ವಪಡೆ, ರಥ, ಗಜಸೇನೆ, ನಾವಿಕ ಸೇನೆ ಎಂಬಿವುಗಳಾಗಿದ್ದವು. ಸೇನೆಯ ಆಡಳಿತದ ಜವಾಬ್ದಾರಿಯನ್ನು 30 ಸದಸ್ಯರಿರುವ ಸಮಿತಿಯು ನಿರ್ವಹಿಸುತ್ತಿತ್ತು.

ತನ್ನ ಪ್ರಜೆಗಳ ನಡುವಿನ ಪರಸ್ಪರ ಸಹಕಾರ ಹಾಗೂ ಶಾಂತಿಯನ್ನು ಕಾಪಾಡುವುದಕ್ಕಾಗಿ ಅಶೋಕ ಚಕ್ರವರ್ತಿಯು ಪ್ರಚಾರ ಮಾಡಿದ ಆಶಯಗಳನ್ನು 'ಅಶೋಕಧಮ್ಮ' (ಧರ್ಮ) ಎಂದು ಕರೆಯುತ್ತಾರೆ. ಅಶೋಕನ ಶಾಸನಗಳಿಂದ ಇದರ ಕುರಿತು ನಾವು ತಿಳಿದುಕೊಂಡೆವು.

ಅಶೋಕಧಮ್ಮದ ಪ್ರಮುಖ ಆಶಯಗಳನ್ನು ಕೆಳಗೆ ನೀಡಲಾಗಿದೆ.




ವಿಶಾಲವಾದ ಸಾಮ್ರಾಜ್ಯದ ಕಾರ್ಯದಕ್ಷತೆಯಿಂದೊಡಗೂಡಿದ ಆಡಳಿತಕ್ಕೆ ಹಾಗೂ ವಿವಿಧ ಸಾಮಾಜಿಕ ವಿಭಾಗಗಳೊಳಗಿನ ಸಾಮರಸ್ಯಕ್ಕೆ ಇರುವ ನೀತಿಯೇ ಧಮ್ಮವಾಗಿದೆಯೆಂದು ಪ್ರಸಿದ್ಧ ಚರಿತ್ರೆಕಾರನಾದ ರೋಮಿಲಾ ಥಾಪರ್‌ನ ಅಭಿಪ್ರಾಯವಾಗಿದೆ.


ರೋಮಿಲಾ ಥಾಪರ್

ಭಾರತದ ಇಂದಿನ ಆಡಳಿತ ವ್ಯವಸ್ಥೆಯ ಯಾವೆಲ್ಲ ವಿಶೇಷತೆಗಳನ್ನು ಮೌರ್ಯರ ಆಡಳಿತ ವ್ಯವಸ್ಥೆಯಲ್ಲಿ ಕಾಣಬಹುದೆಂಬುದನ್ನು ಚರ್ಚಿಸಿ ಹೋಲಿಸಿರಿ.



## ವ್ಯಾಪಾರದ ಅಭಿವೃದ್ಧಿ

ಭಾರತದಲ್ಲಿ ಪ್ರಚಾರದಲ್ಲಿದ್ದ ಆರಂಭಕಾಲದ ನಾಣ್ಯಗಳನ್ನು ಮೇಲಿನ ಚಿತ್ರದಲ್ಲಿ ಗಮನಿಸಿರಿ. ಇವುಗಳನ್ನು ಮುದ್ರಾಂಕಿತ ನಾಣ್ಯಗಳು (Punch Marked Coins) ಎನ್ನುತ್ತಾರೆ. ಇವುಗಳನ್ನು ಬೆಳ್ಳಿ ಮತ್ತು ತಾಮ್ರದಲ್ಲಿ ನಿರ್ಮಿಸಿದ್ದಾರೆ. ವ್ಯಾಪಾರಕ್ಕಾಗಿ ನಾಣ್ಯಗಳನ್ನು ಬಳಸುತ್ತಿದ್ದರೆಂಬುದಕ್ಕೆ ಇವುಗಳು ಪುರಾವೆಗಳಾಗಿವೆ.




ನೆಲಮಾರ್ಗ, ಸಾಗರಮಾರ್ಗ, ನದಿಮಾರ್ಗಗಳ ಮೂಲಕ ವಸ್ತುಗಳನ್ನು ಕೊಂಡು ಹೋಗುತ್ತಿದ್ದರು. ಧಾನ್ಯಗಳು ಬಟ್ಟೆಬರೆಗಳು, ಲೋಹ ಮೊದಲಾದವು ಪ್ರಮುಖ ವ್ಯಾಪಾರ ಸಾಮಗ್ರಿಗಳಾಗಿದ್ದವು. ಆ ಕಾಲದ ಪುಸ್ತಕಗಳಲ್ಲಿ ಉಲ್ಲೇಖಿತವಾಗಿರುವ 'ಸೇಟ್', 'ಸಾತವಾಹಕರು'ಎಂಬೀ ಪದಗಳು ವ್ಯಾಪಾರಿಗಳನ್ನು ಸೂಚಿಸುತ್ತವೆ.



ಭೂಪಟವನ್ನು ನಿರೀಕ್ಷಿಸಿ ಯಾವ ಯಾವ ಪ್ರದೇಶಗಳ ಮೂಲಕ ಹಾಗೂ ವಲಯಗಳ ಮೂಲಕ ವ್ಯಾಪಾರ ನಡೆಯಿತೆಂಬುದನ್ನು ಕಂಡುಹಿಡಿದು ಬರೆಯಿರಿ.

ಭಾರತದ ಪರ್ಯಾಯ ದ್ವೀಪದಲ್ಲಿ ಮಹಾಜನಪದಗಳು ರೂಪುಗೊಂಡ ಹಿನ್ನೆಲೆ ಹಾಗೂ ಅದು ಅನಂತರ ಮೌರ್ಯ ರಾಜ್ಯವಾಗಿ ವಿಕಾಸಹೊಂದಿದ ವಿಚಾರಗಳನ್ನು ಇಲ್ಲಿಯವರೆಗೆ ಚರ್ಚಿಸಿದೆವು. ಆಗ್ನೇಯ ಯುರೋಪಿನ ಗ್ರೀಸ್ ಅದೇ ಕಾಲದಲ್ಲಿ ಸಮಾನವಾದ ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾದ ಮತ್ತೊಂದು ಪ್ರದೇಶವಾಗಿದೆ.

## ಗ್ರೀಸಿನಲ್ಲಿ ರಾಷ್ಟ್ರ ರೂಪೀಕರಣ

ಕೆಳಗೆ ನೀಡಿರುವ ಭೂಪಟದಲ್ಲಿ ಗ್ರೀಸಿನ ಸ್ಥಾನವನ್ನು ಕಂಡುಹಿಡಿಯಿರಿ.

ಭೂಪಟ 4




ಸಾರ್ವಜನಿಕರ ಸಂರಕ್ಷಣೆ ಹಾಗೂ ಆಡಳಿತಕ್ಕಾಗಿ ಗ್ರೀಸಿನ ಗ್ರಾಮಗಳು ಒಂದುಗೂಡಿದವು. ಅವುಗಳನ್ನು ನಗರ ರಾಷ್ಟ್ರಗಳೆಂದು ಕರೆದರು. ನಗರ ರಾಷ್ಟ್ರಗಳು ಒಂದು ನಗರ ಹಾಗೂ ಅದರ ಸುತ್ತಲಿನ ಕೃಷಿ ಗ್ರಾಮಗಳನ್ನು ಒಳಗೊಂಡಿತ್ತು. ಗುಡ್ಡಗಳು ಹಾಗೂ ಪರ್ವತಗಳು ಈ ನಗರ ರಾಷ್ಟ್ರಗಳಿಗೆ ಪ್ರಾಕೃತಿಕವಾದ ಮೇರೆಯನ್ನು ನೀಡಿದವು. ಕೆಲವು ನಗರ ರಾಷ್ಟ್ರಗಳು ದ್ವೀಪಗಳಾಗಿದ್ದವು. ನಗರ ರಾಷ್ಟ್ರಗಳ ರಾಜಧಾನಿಯು ಉನ್ನತವಾದ ಗುಡ್ಡಗಳ ಮೇಲೆ ಇತ್ತು. ಏಥೆನ್ಸ್, ಸ್ಪಾರ್ಟಾ, ಕೋರಿಂತ್, ತೀಬ್ಸ್ ಎಂಬಿವುಗಳು ಗ್ರೀಸಿನ ಪ್ರಮುಖ ನಗರ ರಾಷ್ಟ್ರಗಳಾಗಿದ್ದವು.

## ಪ್ರಜಾಪ್ರಭುತ್ವದ ಹಾದಿಯಲ್ಲಿ ಏಥೆನ್ಸ್

2500 ವರ್ಷಗಳ ಮೊದಲು ಗ್ರೀಸ್‌ನ ಏಥೆನ್ಸ್‌ನಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ವ್ಯವಸ್ಥೆಯು ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಾಮ್ಯವಿರುವುದಾಗಿತ್ತು. ಇದು ಇತರ ನಗರ ರಾಷ್ಟ್ರಗಳ ಆಡಳಿತ ವಿಧಾನಕ್ಕಿಂತ ವ್ಯತ್ಯಸ್ತವಾಗಿತ್ತು. ಗುಲಾಮರನ್ನು ಹೊರತುಪಡಿಸಿ 30 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಪುರುಷರನ್ನೂ ಪೌರರಾಗಿ ಪರಿಗಣಿಸಿದ್ದರು. ಈ ಪೌರರು ಒಳಗೊಂಡಿರುವ

ಒಂದು ಸಮಿತಿಯು ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳುತ್ತಿತ್ತು. ಇದಕ್ಕಾಗಿ ವರ್ಷದಲ್ಲಿ ನಾಲ್ಕು ಸಲ ಇವರು ಸಭೆ ಸೇರುತ್ತಿದ್ದರು. ಸ್ತ್ರೀಯರು, ಕರಕುಶಲ ಕೆಲಸಗಾರರು, ವ್ಯಾಪಾರಿಗಳಾಗಿ ಕಾರ್ಯವೆಸಗುತ್ತಿರುವ ವಿದೇಶೀಯರು ಮೊದಲಾದವರನ್ನು ಪೌರರೆಂದು ಪರಿಗಣಿಸುತ್ತಿರಲಿಲ್ಲ.

ಭೂಮಧ್ಯ ಸಮುದ್ರ (Mediterranean sea) ಪ್ರದೇಶದ ವ್ಯಾಪಾರದ ಪ್ರಮುಖ ಕೇಂದ್ರವೆಂಬ ದೃಷ್ಟಿಯಲ್ಲಿ ಏಥೆನ್ಸ್ ಶ್ರೀಮಂತ ನಗರ ರಾಷ್ಟ್ರವಾಗಿತ್ತು. ಹಡಗು ನಿರ್ಮಾಣ ಹಾಗೂ ಸಮುದ್ರ ಯಾನದಲ್ಲಿ ಪ್ರಾವಿಣ್ಯವನ್ನು ಹೊಂದಿದ ಅನೇಕರು ಏಥೆನ್ಸ್ ನಲ್ಲಿ ಇದ್ದರು. ಸಮೀಪದ ಪ್ರದೇಶಗಳಲ್ಲಿ ನಿರಂತರವಾಗಿ ಸಂಚರಿಸುತ್ತಿದ್ದ ಇವರು ನೂತನ ಆಶಯಗಳು ಹಾಗೂ ನೈಪುಣ್ಯಗಳನ್ನು ಗಳಿಸಿದರು. ಇತರ ಪ್ರದೇಶಗಳಿಂದ ಅನೇಕ ಚಿಂತಕರು ಏಥೆನ್ಸ್‌ನೆಡೆಗೆ ಆಕರ್ಷಿತರಾದರು. ಇವರನ್ನು ಸೋಫಿಸ್ಟುಗಳು ಎಂದು ಕರೆದರು. ಚರಿತ್ರೆಯ ಪಿತಾಮಹನೆಂದು ಪ್ರಸಿದ್ಧನಾದ ಹೆರೋಡೋಟಸ್ ಹೀಗೆ ಏಥೆನ್ಸ್‌ಗೆ ಬಂದು ಸೇರಿದ ಚಿಂತಕರಲ್ಲೊಬ್ಬನಾಗಿದ್ದಾನೆ.

ಏಥೆನ್ಸ್‌ನ ಆಡಳಿತ ವ್ಯವಸ್ಥೆಯು ಆಧುನಿಕ ಪ್ರಜಾಪ್ರಭುತ್ವಕ್ಕಿಂತ ಯಾವ ಯಾವ ವಿಚಾರಗಳಲ್ಲಿ ಭಿನ್ನವಾಗಿತ್ತು?

ಮಹಾಜನಪದಗಳು ಹಾಗೂ ಗ್ರೀಸಿನ ನಗರ ರಾಷ್ಟ್ರಗಳನ್ನು ಪರಸ್ಪರ ತುಲನೆ ಮಾಡಿರಿ.

ಬಿ.ಸಿ.ಇ. 6 ನೇ ಶತಮಾನವು ಚರಿತ್ರೆಯಲ್ಲಿ ಅತಿ ಪ್ರಮುಖವಾದ ಬದಲಾವಣೆಗಳಿಗೆ ಸಾಕ್ಷಿಯಾದ ಕಾಲವಾಗಿತ್ತು. ಆ ಕಾಲದಲ್ಲಿ ಜನಜೀವನದ ವಿವಿಧ ಕ್ಷೇತ್ರಗಳಲ್ಲಿ ಬದಲಾವಣೆಗಳುಂಟಾದವು. ಭೌತಿಕ ಜೀವನದಲ್ಲುಂಟಾದ ಬದಲಾವಣೆಗಳು ರಾಜಕೀಯದಲ್ಲೂ ಚಿಂತನೆಯಲ್ಲೂ ಪ್ರತಿಫಲಿಸಿತು. ಇದರ ಪರಿಣಾಮವಾಗಿ ನೂತನ ಆಶಯಗಳು ರೂಪುಗೊಂಡವು. ಇವುಗಳು ಅನಂತರದ ಮಾನವ ಚರಿತ್ರೆಯ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರಿದುವು.



ಬಿ.ಸಿ.ಇ. 6 ನೇ ಶತಮಾನ
ಭೌತಿಕ ರಂಗದ ಬದಲಾವಣೆಗಳು
ಆಶಯ ರೂಪೀಕರಣದ ಬದಲಾವಣೆಗಳು
ಬೌದ್ಧಮತ
ಜೈನಮತ
ಭೌತಿಕವಾದ
ಕಬ್ಬಿಣದ ಉಪಕರಣಗಳ ಬಳಕೆ
ರಾಷ್ಟ್ರ ರೂಪೀಕರಣ
ಕೃಷಿಯ ಪ್ರಗತಿ
ಉತ್ಪಾದನೆಯಲ್ಲಿ ಹೆಚ್ಚಳ
ವ್ಯಾಪಾರ
ನಗರಗಳು
ಜನಪದಗಳು
ಮಹಾಜನಪದಗಳು
ಮಗಧ
ಮೌರ್ಯ ಸಾಮ್ರಾಜ್ಯ
ಗ್ರೀಸಿನ ನಗರ ರಾಷ್ಟ್ರಗಳು
ಅಲೆಕ್ಸಾಂಡರಿನ ಸಾಮ್ರಾಜ್ಯ

## ಮುಂದುವರಿದ ಚಟುವಟಿಕೆಗಳು

- ಬಿ.ಸಿ.ಇ. 6ನೇ ಶತಮಾನದಲ್ಲಿ ನೂತನ ಆಶಯಗಳನ್ನು ಪ್ರಚಾರ ಮಾಡಿದ ಚಿಂತಕರ ಜೀವನದ ಆಧಾರದಲ್ಲಿ ಜೀವನ ಚರಿತ್ರೆಯ ಕಿರುಪುಸ್ತಕವನ್ನು ತಯಾರಿಸಿರಿ. ಚಿತ್ರಗಳನ್ನು ಸೇರಿಸಿ ಅದನ್ನು ಆಕರ್ಷಕಗೊಳಿಸಿರಿ.
- 'ಜನಪದಗಳಿಂದ ಮೌರ್ಯ ಸಾಮ್ರಾಜ್ಯದವರೆಗೆ' ಎಂಬ ವಿಷಯದಲ್ಲಿ ಭೂಪಟಗಳನ್ನು ಒಳಗೊಂಡ ಪವರ್ ಪೋಯಿಂಟ್ ಪ್ರಸಂಟೇಶನೊಂದನ್ನು ತಯಾರಿಸಿರಿ.
- 'ಆಶಯಗಳು ಮತ್ತು ರಾಷ್ಟ್ರರೂಪೀಕರಣ' ಎಂಬ ವಿಷಯದಲ್ಲಿ ರಸಪ್ರಶ್ನೆಯನ್ನು ಏರ್ಪಡಿಸಿರಿ.

# 3 ಭೂದಾನ ಮತ್ತು ಭಾರತೀಯ ಸಮಾಜ

ವಾಕಾಟಕ ಮಹಾರಾಜ ಶ್ರೀ ಎರಡನೇ ವಿಂಧ್ಯಶಕ್ತಿಯ ಆಜ್ಞೆಯ ಪ್ರಕಾರ...

ಜಯವನ್ನು, ದೀರ್ಘಾಯುಷ್ಯವನ್ನು ಹಾಗೂ ಇಹ-ಪರಲೋಕಗಳಲ್ಲಿ ಸಮಾಧಾನಗಳನ್ನು ಗಳಿಸುವುದಕ್ಕಾಗಿ ಈ ಗ್ರಾಮದ ಅರ್ಧವನ್ನು ನಾನು ಬ್ರಾಹ್ಮಣರಿಗೆ ದಾನವಾಗಿ ನೀಡುತ್ತೇನೆ. ಚತುರ್ವೇದಗಳಿಂದಲೂ ಹಿಂದಿನ ರಾಜರಿಂದಲೂ ಅಂಗೀಕರಿಸಲ್ಪಟ್ಟ ಆಚಾರ ಪ್ರಕಾರವಿರುವ ರಿಯಾಯಿತಿಗಳು ಈ ಭೂದಾನಕ್ಕೂ ಬಾಧಕವಾಗಿದೆ. ಇಲ್ಲಿನ ಆಡಳಿತವು ಇತರ ಪ್ರದೇಶಗಳಂತೆ ಅಲ್ಲ. ಉಪ್ಪು ಹಾಗೂ ಮದ್ಯವನ್ನು ಭಟ್ಟಿ ಇಳಿಸಬಾರದು. ರಾಜ್ಯದ ಖಜಾನೆಗೆ ಹಣವನ್ನೋ ಆಹಾರ ಧಾನ್ಯಗಳನ್ನೋ ನೀಡಬೇಕಿಲ್ಲ. ರಾಜನಿಗಾಗಿ ಹೂವುಗಳನ್ನೋ ಹಾಲನ್ನೋ ನೀಡಬೇಕಾಗಿಲ್ಲ. ಉದ್ಯೋಗಸ್ಥರಿಗೆ ಹಸುವನ್ನೋ ಹೋರಿಯನ್ನೋ ನೀಡಬೇಕಿಲ್ಲ. ರಾಷ್ಟ್ರಕ್ಕಾಗಿ ಸೇವೆಯನ್ನು ಮಾಡಬೇಕಾಗಿಲ್ಲ. ಕುದುರೆಯ ಅಲಂಕಾರಗಳನ್ನೋ ಆನೆಯನ್ನೋ ನೀಡುವ ಅಗತ್ಯವಿಲ್ಲ. ನಿಯಮ ಪಾಲಕರು ಇಲ್ಲಿ ಪ್ರವೇಶಿಸಬಾರದು. ಪ್ರಯಾಣದಲ್ಲಿರುವ ಅಧಿಕಾರಿಗಳಿಗೆ ಮಂಚ, ಒಲೆ, ಇತರ ವಸ್ತುಗಳನ್ನು ನೀಡಬೇಕಾಗಿಲ್ಲ. ರಾಜನಿಗೆ ತೆರಿಗೆ ನೀಡಬೇಕಾಗಿಲ್ಲ. ವಸ್ತುಗಳನ್ನು ಸಾಗಿಸಲು ಹಣ ಖರ್ಚು ಮಾಡಬೇಕಾಗಿಲ್ಲ. ಭೂಗರ್ಭ ನಿಧಿ ನಿಕ್ಷೇಪಗಳಲ್ಲಿ ಹಕ್ಕು ಇದೆ. ಭೂಮಿಗೆ ಬೇಲಿ ಹಾಕಿ ವಿಭಜಿಸಲು, ಮಣ್ಣು ತುಂಬಿಸಲು ಹಾಗೂ ದೊಡ್ಡ ಉಪಕರಣಗಳನ್ನು ಉಪಯೋಗಿಸಲು ಹಕ್ಕು ಇದೆ. ಇದಕ್ಕೆ ಅಡ್ಡಿ ಪಡಿಸಿದರೆ ಅಥವಾ ಅಡ್ಡಿಗೆ ಕಾರಣಗಾರರಾಗಿದ್ದರೆ ಅಂಥವರನ್ನು ನಾನು ದೂರಿನ ಪ್ರಕಾರ ಶಿಕ್ಷಿಸುತ್ತೇನೆ.

**Cdr Alok Mohan, Ancient Indian Inscriptions, Vol 3, 1967, pp-122-124*

ಇದು ವಾಕಾಟಕ ರಾಜನಾಗಿದ್ದ ಎರಡನೇ ವಿಂಧ್ಯಶಕ್ತಿಯು (355-400 ಸಿ.ಇ.) ಹೊರಡಿಸಿದ ಆಜ್ಞೆಯಾಗಿದೆ. ರಾಜನ ಕೈವಶವಿದ್ದ ಭೂಮಿಯಲ್ಲಿ ಸ್ವಲ್ಪ ಭೂಮಿಯನ್ನು ವಿಶೇಷಾಧಿಕಾರಗಳೊಂದಿಗೆ ಬ್ರಾಹ್ಮಣರಿಗೆ ಹಸ್ತಾಂತರಿಸುವುದಕ್ಕೆ ಸಂಬಂಧಪಟ್ಟ ವಿಚಾರಗಳು ಈ ಆಜ್ಞೆಯಲ್ಲಿದೆ. ಇದನ್ನು 'ಭೂದಾನ' ಎಂದು ಕರೆಯುತ್ತಾರೆ.

- ರಾಜನು ಭೂಮಿಯನ್ನು ದಾನವಾಗಿ ನೀಡುವುದರ ಉದ್ದೇಶವೇನು?
- ಭೂದಾನಗಳನ್ನು ಆರಂಭಿಸಿದುದು ಯಾವಾಗ? ಯಾಕೆ?
- ಇಂತಹ ದಾನಗಳು ಸರ್ವಸಾಮಾನ್ಯವಾಗಿತ್ತೇ?

ಬೌದ್ಧ ಕೃತಿಗಳಲ್ಲಿ ಭೂದಾನದ ಕುರಿತಾದ ಸೂಚನೆಗಳು ಕಂಡುಬರುತ್ತವೆ. ಆದರೆ ಅದು ವ್ಯಾಪಕವಾದದ್ದು ಹಾಗೂ ದೂರವ್ಯಾಪಕವಾದ ಪರಿಣಾಮಗಳನ್ನುಂಟು ಮಾಡಿದುದು ಮೌರ್ಯರ ನಂತರವಾಗಿದೆ.

ಮೌರ್ಯ ಸಾಮ್ರಾಜ್ಯದ ಅವನತಿಯ ನಂತರ ಭಾರತದ ವಿವಿಧ ಭಾಗಗಳಲ್ಲಿ ಅನೇಕ ರಾಜವಂಶಗಳು ಅಧಿಕಾರಕ್ಕೆ ಬಂದವು.

ನೀಡಿರುವ ಭೂಪಟದಿಂದ ಅವು ಯಾವುವೆಂಬುದನ್ನು ಕಂಡುಹಿಡಿದು ಬರೆಯಿರಿ.




- ............................................................
- ............................................................
- ............................................................
- ............................................................
- ............................................................
- ............................................................
- ............................................................
- ............................................................

## ಭೂದಾನ (Land Grants)

ದಕ್ಷಿಣವನ್ನು ಕೇಂದ್ರೀಕರಿಸಿ ಆಡಳಿತವನ್ನು ನಡೆಸಿದ ಶಾತವಾಹನ ರಾಜರು ಅಂದಿನ ಸಾಮಾಜಿಕ ರಚನೆಯಲ್ಲಿ ಮುಂದಿದ್ದ ಬ್ರಾಹ್ಮಣರ ಮೆಚ್ಚುಗೆಯನ್ನು ಪಡೆಯಲು ಅವರಿಗೆ ಭೂಮಿಯನ್ನು ದಾನವಾಗಿ ನೀಡುವ ಸಂಪ್ರದಾಯವನ್ನು ಆರಂಭಿಸಿದರು. ಸಿ.ಇ. ನಾಲ್ಕನೇ ಶತಮಾನದಲ್ಲಿ ಪಾಟಲೀಪುತ್ರವನ್ನು ಕೇಂದ್ರವಾಗಿಸಿ ಅಧಿಕಾರಕ್ಕೆ ಬಂದ ಗುಪ್ತರಾಜರು ಈ ಸಂಪ್ರದಾಯವನ್ನು ಇನ್ನಷ್ಟು ಬೆಳೆಸಿದರು.

### ಗುಪ್ತರಾಜರು

ಶ್ರೀಗುಪ್ತನು ಗುಪ್ತಸಾಮ್ರಾಜ್ಯದ ಸ್ಥಾಪಕನಾಗಿದ್ದಾನೆ. ಇತರ ಪ್ರಮುಖ ರಾಜರೆಂದರೆ:

- ಒಂದನೇ ಚಂದ್ರಗುಪ್ತ
- ಸಮುದ್ರಗುಪ್ತ
- ಎರಡನೇ ಚಂದ್ರಗುಪ್ತ
- ಒಂದನೇ ಕುಮಾರಗುಪ್ತ
- ಸ್ಕಂದಗುಪ್ತ

**ಭೂದಾನದ ವ್ಯತ್ಯಾಸ**

| ಶಾತವಾಹನರು | ಗುಪ್ತರು |
|---|---|
| ಭೂಮಿಯಲ್ಲಿನ ಸಂಪನ್ಮೂಲಗಳ ಹಕ್ಕನ್ನು ಮಾತ್ರ ನೀಡಿದರು. | ಭೂಮಿಯಲ್ಲಿನ ಸಂಪನ್ಮೂಲಗಳೊಂದಿಗೆ ಅಲ್ಲಿ ವಾಸಿಸುತ್ತಿರುವ ಜನರ ಮೇಲಿನ ಅಧಿಕಾರವನ್ನು ನೀಡಿದರು. |

### ಗುಪ್ತರ ಕಾಲದಲ್ಲಿ ಭೂದಾನ ಪ್ರಕ್ರಿಯೆಯ ಮೂಲಕ ಯಾವೆಲ್ಲ ಬದಲಾವಣೆಗಳುಂಟಾದವು ಎಂಬುದನ್ನು ನೋಡೋಣ.

- ದಾನವಾಗಿ ನೀಡಿದ ಭೂಮಿಯ ಮೇಲೆ ರಾಜನಿಗಿರುವ ಅಧಿಕಾರ ನಾಮಮಾತ್ರವಾಗಿತ್ತು.
- ದಾನವಾಗಿ ನೀಡುವ ಭೂಮಿಯ ತೆರಿಗೆ ಸಂಗ್ರಹ ಹಾಗೂ ನ್ಯಾಯ ಪರಿಪಾಲನೆಯ ಅಧಿಕಾರವು ಭೂಒಡೆತನದೊಂದಿಗೆ ಹಸ್ತಾಂತರವಾಯಿತು.
- ದಾನವಾಗಿ ಲಭಿಸಿದ ಭೂಮಿಯನ್ನು ತಮಗೆ ಇಷ್ಟವಿರುವವರಿಗೆ ಪುನಃ ದಾನವಾಗಿ ನೀಡುವ ಹಕ್ಕೂ ಭೂಮಿ ದಾನವಾಗಿ ಪಡೆದವರಿಗೆ ಲಭಿಸಿತು.
- ಕ್ರಮೇಣ ರಾಜ ಹಾಗೂ ಪ್ರಭುಗಳು ತಮಗೆ ಲಭಿಸುವ ಸೇವೆಗಿರುವ ಪ್ರತಿಫಲವನ್ನು ಹಣವಾಗಿ ನೀಡದೆ ಭೂದಾನದ ರೂಪದಲ್ಲಿ ನೀಡಲಾರಂಭಿಸಿದರು.
- ಬ್ರಾಹ್ಮಣರಿಗೆ ರಾಜನಿಂದ ಅತ್ಯಧಿಕ ಭೂಮಿ ಲಭಿಸಿದ್ದು ಕ್ರಮೇಣ ಇತರ ವಿಭಾಗದವರಿಗೂ ಭೂದಾನ ಲಭಿಸಲಾರಂಭವಾಯಿತು.

ಹೀಗೆ ಭೂದಾನವು ವ್ಯಾಪಿಸುವುದರೊಂದಿಗೆ ಸಮಾಜದಲ್ಲಿ ಸಂಪದ್ಭರಿತ ಹಾಗೂ ಪ್ರಭಾವಶಾಲಿಗಳಾದ ಭೂ ಒಡೆಯರ ಪ್ರಬಲವಾದೊಂದು ವಿಭಾಗವು ರೂಪುಗೊಂಡಿತು. ಭೂಮಿಯಲ್ಲಿ ಕೆಲಸ ಮಾಡುವ ಸೇವಕರೂ ಹಕ್ಕುಗಳಿಲ್ಲದವರೂ ಭೂ ಒಡೆಯರ ಆಶ್ರಿತರಾಗಿ ಬದಲಾದರು. ಈ ಸಂಪ್ರದಾಯದಲ್ಲಿ ಕೃಷಿಕರು, ಕೃಷಿ ಕೆಲಸಗಾರರು ಹಾಗೂ ಗುಲಾಮರು ಭೂಮಿಯಲ್ಲಿ ಬಂಧಿಸಲ್ಪಟ್ಟ ಸ್ಥಿತಿಯಲ್ಲಿದ್ದರು. ಅವರು ಒಂದೇ ಮಣ್ಣಿನಲ್ಲಿ ಜನಿಸಿ, ಜೀವಿಸಿ, ಮರಣ ಹೊಂದಿದರು. ಅವರು ಅವರ ಯಜಮಾನನಿಗಾಗಿ ದುಡಿದರು. ಸಮಾಜದ ಕೆಳಗಿನ ಹಂತದಲ್ಲಿದ್ದ ಅವರು ಮೇಲಿನ ಹಂತದಲ್ಲಿರುವವರಿಗೆ ತೆರಿಗೆಯ ಹೊರತಾಗಿ ಉಚಿತ ಸೇವೆಯನ್ನೂ ನೀಡಬೇಕಿತ್ತು. ಈ ಸಂಪ್ರದಾಯವನ್ನು 'ಸಾಮಂತ ಸಂಪ್ರದಾಯ' ಎಂದೂ 'ಭಾರತದ ಫ್ಯೂಡಲಿಸಂ' ಎಂದೂ ಕರೆಯುತ್ತಾರೆ. ಈ ಕಾಲದಲ್ಲಿ ಕೃಷಿ ರಂಗದಲ್ಲಿ ಪ್ರಗತಿ ಕಂಡುಬಂದಿತ್ತು.

**ಕೃಷಿಯ ವ್ಯಾಪಕತೆಗೆ ಸಹಾಯಕವಾದ ಘಟಕಗಳು**

- ಕೃಷಿಗೆ ಬಳಸದೆ ಇರುವ ಪ್ರದೇಶಗಳಲ್ಲೂ ಕೃಷಿ ಮಾಡಿದುದು.
- ನೂತನ ಸಾಮಾಜಿಕ ವ್ಯವಸ್ಥೆಯು ಕೃಷಿಗೆ ಬೇಕಾದ ಕೆಲಸಗಾರರನ್ನು ಒದಗಿಸಿತು.
- ಕೃಷಿಯ ತಾಂತ್ರಿಕತೆ ಹಾಗೂ ಹವಾಗುಣಕ್ಕೆ ಸಂಬಂಧಿಸಿ ಬ್ರಾಹ್ಮಣರಿಗಿದ್ದ ಜ್ಞಾನ.
- ವಿವಿಧ ರೀತಿಯ ನೀರಾವರಿ ಸೌಕರ್ಯಗಳು.

ಕೃಷಿಯ ವ್ಯಾಪಕತೆಗೆ ಸಹಾಯ ಮಾಡಿದ ನೀರಾವರಿ ವ್ಯವಸ್ಥೆಗಳು ಯಾವುವೆಂಬುದನ್ನು ನೋಡೋಣ.



ಗುಪ್ತರ ಕಾಲದಲ್ಲಿ ಭಾರತದಲ್ಲಿ ರೂಪುಗೊಂಡ ಸಾಮಂತ ಸಂಪ್ರದಾಯದ ವಿಶೇಷತೆಗಳನ್ನು ಚರ್ಚಿಸಿರಿ.



ಘಟಿಯಂತ್ರ (ಅರಘಟ್ಟ)

## ಕೈಕಸುಬು ಮತ್ತು ವ್ಯಾಪಾರ

ಭೂದಾನದ ಪರಿಣಾಮವಾಗಿ ಉಂಟಾದ ಕೃಷಿಯ ವ್ಯಾಪಿಸುವಿಕೆಯು ಕೃಷಿಯೇತರ ಚಟುವಟಿಕೆಗಳ ವಿಕಾಸಕ್ಕೆ ದಾರಿಮಾಡಿಕೊಟ್ಟಿತು. ವಿವಿಧ ರೀತಿಯ ಕೈಕಸುಬುಗಳನ್ನು ಜನರು ಜೀವನ ಮಾರ್ಗವಾಗಿ ಸ್ವೀಕರಿಸಿದರು. ಪ್ರಾಚ್ಯ ವಸ್ತುಗಳಿಂದಲೂ ಸಾಹಿತ್ಯಕೃತಿಗಳಿಂದಲೂ ಆ ಕಾಲದ ಕೈಕಸುಬುಗಳ ಕುರಿತು ಮಾಹಿತಿಗಳು ನಮಗೆ ಲಭಿಸುತ್ತವೆ. ಉತ್ಖನನಗಳಿಂದ ಲಭಿಸಿದ ಪ್ರಾಚ್ಯವಸ್ತುಗಳ ಕುರಿತಾದ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. ಇದರಿಂದ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕೈಕಸುಬುಗಳು ಯಾವುವೆಂಬುದನ್ನು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕಂಡುಹಿಡಿದ ಪ್ರಾಚ್ಯವಸ್ತುಗಳು | ಕೈಕಸುಬುಗಳು |
|---|---|
| • ಮಣ್ಣಿನ ಪಾತ್ರೆಗಳು | • ಮಣ್ಣಿನ ಪಾತ್ರೆಯ ನಿರ್ಮಾಣ |
| • ಚಿನ್ನ, ಬೆಳ್ಳಿ, ಬೆಲೆಬಾಳುವ ಕಲ್ಲು ಎಂಬಿವುಗಳಿಂದ ಮಾಡಿದ ಆಭರಣಗಳು | • ........................ |
| • ಮುತ್ತುಗಳು | • ........................ |
| • ಗಾಜಿನಿಂದ ನಿರ್ಮಿಸಿದ ವಸ್ತುಗಳು | • ........................ |
| • ರೇಶ್ಮೆ, ಹತ್ತಿ ಬಟ್ಟೆಗಳು | • ........................ |
| • ಆನೆಯ ದಂತದಿಂದ ನಿರ್ಮಿಸಿದ ಶಿಲ್ಪಗಳು | • ........................ |

ವಿವಿಧ ಕೈಕಸುಬುಗಳಲ್ಲಿ ತೊಡಗಿಸಿಕೊಂಡವರು ಅವರ ಒಕ್ಕೂಟವನ್ನು ರಚಿಸಿದರು. ಇವುಗಳನ್ನು ಗಿಲ್ಡುಗಳು ಅಥವಾ ಶ್ರೇಣಿಗಳು ಎಂದು ಕರೆದರು. ಆಡಳಿತಗಾರರು ಶ್ರೇಣಿಗಳಿಗೆ ಅಂಗೀಕಾರವನ್ನು ನೀಡಿದರು. ಶ್ರೇಣಿಗಳ ಸದಸ್ಯರು ಅದರ ನಿಯಮಗಳನ್ನು ಪಾಲಿಸಬೇಕು.

### ಶ್ರೇಣಿಗಳು

ಶ್ರೇಣಿಗಳೆಂದರೆ ಕೈಕಸುಬುಗಾರರ ಹಾಗೂ ವ್ಯಾಪಾರಿಗಳ ಸಂಘಟನೆಯಾಗಿತ್ತು. ಕಚ್ಚಾವಸ್ತುಗಳ ಸಂಗ್ರಹ, ಉತ್ಪಾದನೆಯ ನಿಯಂತ್ರಣ, ಉತ್ಪನ್ನಗಳನ್ನು ಮಾರುಕಟ್ಟೆಗೆ ತಲಪಿಸುವುದು ಮೊದಲಾದವುಗಳು ಇವುಗಳ ಜವಾಬ್ದಾರಿಗಳಾಗಿದ್ದವು.

ST-421-7-SOC. SCI.-I (K)-9-VOL-1

## ವ್ಯಾಪಾರ ಮತ್ತು ವಾಣಿಜ್ಯ

ಗುಪ್ತರ ಕಾಲದ ಆರಂಭದಲ್ಲಿ ಆಂತರಿಕ ವ್ಯಾಪಾರವು ಹೇರಳವಾಗಿತ್ತು. ಕೃಷಿಯ ಹೊರತಾಗಿ ವಿವಿಧ ರೀತಿಯ ಕೈಕಸುಬುಗಳು ಹಾಗೂ ಕರಕುಶಲ ನಿರ್ಮಾಣವು ಅಸ್ತಿತ್ವದಲ್ಲಿತ್ತು ಎಂಬುದನ್ನು ಪಟ್ಟಿಯಿಂದ ತಿಳಿದುಕೊಂಡಿರಲ್ಲವೇ. ಕರಕುಶಲ ತಜ್ಞರು ನಿರ್ಮಿಸಿದ ಇಂತಹ ಉತ್ಪನ್ನಗಳು ವ್ಯಾಪಾರದ ಮುಖ್ಯ ಸರಕುಗಳಾಗಿದ್ದವು. ಬಟ್ಟೆಯು ಅತ್ಯಂತ ದೊಡ್ಡ ಆಂತರಿಕ ವ್ಯಾಪಾರದ ಸರಕುಗಳಲ್ಲೊಂದಾಗಿತ್ತು. ವಿವಿಧ ರೀತಿಯ ಬಟ್ಟೆಗಳನ್ನು (ಮಸ್ಲಿನ್, ಕಾಲಿಕೋ, ಲಿನನ್) ಬೃಹತ್ ಪ್ರಮಾಣದಲ್ಲಿ ತಯಾರಿಸುತ್ತಿದ್ದರು.

### ನಗರತ್ತಾರ್ (ನಗರ ಶ್ರೇಷ್ಠಿಗಳು)

ನಗರಗಳ ಶ್ರೀಮಂತ ವ್ಯಾಪಾರಿಗಳಾದ ಇವರು ಆಡಳಿತದಲ್ಲೂ ಭಾಗಿಗಳಾಗಿದ್ದರು. ಮಾತ್ರವಲ್ಲ ಇವರು ವ್ಯಾಪಾರಿ ಸಂಘಗಳ ಪ್ರಮುಖರಾಗಿದ್ದರು.

ಪಶ್ಚಿಮ ಏಷ್ಯಾ, ಮಧ್ಯ ಏಷ್ಯಾ, ಆಗ್ನೇಯ ಏಷ್ಯಾ, ರೋಮ್ ಎಂಬೆಡೆಗಳಲ್ಲಿ ಇವರು ವಿದೇಶ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ಈ ಕಾಲದಲ್ಲಿ ನೂತನ ವಾಣಿಜ್ಯ ಮಾರ್ಗಗಳು ವಿಕಾಸಹೊಂದಿದವು. ಉತ್ತಮ ಚಿನ್ನದ ನಾಣ್ಯಗಳು ಹಾಗೂ ಬೆಳ್ಳಿ, ತಾಮ್ರದ ನಾಣ್ಯಗಳನ್ನೂ ಹೊರತಂದರು. ನಗರಶ್ರೇಷ್ಠಿ, ಸಾರ್ಥವಾಹ ಎಂಬೀ ವ್ಯಾಪಾರ ಪ್ರಮುಖರು ಆಡಳಿತದಲ್ಲಿ ಭಾಗಿಗಳಾಗಿದ್ದರು. ವೈಶಾಲಿ, ಪಾಟಲೀಪುತ್ರ, ಕನೌಜ್, ಶ್ರಾವಸ್ತಿ, ಕೌಸಾಂಬಿ, ಉಜ್ಜಯಿನಿ, ಮಥುರಾ ಮೊದಲಾದವು ಪ್ರಮುಖ ವ್ಯಾಪಾರ ಪಟ್ಟಣಗಳಾಗಿದ್ದವು.



ಗುಪ್ತರ ನಾಣ್ಯಗಳು (Gupta Coins)

ಗುಪ್ತರ ಕಾಲದ ಕೆಲವು ಪ್ರಮುಖ ನಗರಗಳು




ಭೂಪಟದಲ್ಲಿ ಗುರುತಿಸಿರುವ ಗುಪ್ತರ ಕಾಲದ ನಗರಗಳು ಇಂದು ಯಾವ ಯಾವ ರಾಜ್ಯಗಳಲ್ಲಿವೆಯೆಂದು ಕಂಡುಹಿಡಿಯಿರಿ.

- ........................................
- ........................................
- ........................................
- ........................................
- ........................................
- ........................................
- ........................................
- ........................................

ಸಿ.ಇ. ಆರನೇ ಶತಮಾನಕ್ಕಾಗುವಾಗ ರೋಮ್ ಸಾಮ್ರಾಜ್ಯ ಅಧಃಪತನ ಹೊಂದಿತಲ್ಲದೆ ಪಾಶ್ಚಾತ್ಯರು ಚೀನೀಯರಿಂದ ರೇಶ್ಮೆ ಬಟ್ಟೆ ತಯಾರಿಸುವ ತಾಂತ್ರಿಕತೆಯನ್ನು ಕಲಿತ ನಂತರ, ಭಾರತದ ವಿದೇಶ ವ್ಯಾಪಾರದಲ್ಲಿ ಬೃಹತ್ ಕುಸಿತ ಉಂಟಾಯಿತು. ಇದು ಆಂತರಿಕ ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಕೈಕಸುಬುಗಾರರು ಹಾಗೂ ಕರಕುಶಲ ಕೆಲಸಗಾರರು ವ್ಯಾಪಾರಕ್ಕಾಗಿ ದೇಶದ ವಿವಿಧ ಭಾಗಗಳಿಗೆ ಅಲೆದಾಡುವುದು ಕಡಿಮೆಯಾಯಿತು. ಅವರ ಜೀವನವು ಗ್ರಾಮಗಳಿಗೆ ಸೀಮಿತವಾಯಿತು. ಇದು ಕಲೆ ಮತ್ತು ಕೈಕಸುಬುಗಳ ಗ್ರಾಮೀಣಕರಣಕ್ಕೆ ದಾರಿಮಾಡಿಕೊಟ್ಟಿತು. ವ್ಯಾಪಾರದ ಅಧಃಪತನ, ಕೈಕಸುಬುಗಳ ಕೊರತೆ ಹಾಗೂ ಗ್ರಾಮೀಣಕರಣ ಇತ್ಯಾದಿಗಳು ಕೆಲವು ಪ್ರಮುಖ ನಗರಗಳ ಅಧಃಪತನಕ್ಕೆ ಕಾರಣವಾದವು. ಕೌಸಾಂಬಿ, ಹಸ್ತಿನಾಪುರ, ಅಹಿಚ್ಛತ್ರ, ತಕ್ಷಶಿಲೆ, ಅಯೋಧ್ಯೆ, ಉಜ್ಜಯಿನಿ, ಮಥುರಾ ಮೊದಲಾದ ನಗರಗಳ ಪ್ರೌಢಿಮೆ ಕಡಿಮೆಯಾಯಿತು. ಸಿ.ಇ. ಐದನೇ ಶತಮಾನದ ಚೀನೀ ಯಾತ್ರಿಕನಾದ ಫಾಹಿಯಾನನ ಪ್ರವಾಸ ಕಥನಗಳಲ್ಲಿ ಬೃಹತ್ ನಗರಗಳೆಂದು ಉಲ್ಲೇಖಿಸಿದ್ದ ಹಲವು ನಗರಗಳೂ ಏಳನೇ ಶತಮಾನದಲ್ಲಿ ಆಗಮಿಸಿದ ಚೀನೀ ಯಾತ್ರಿಕನಾದ ಹ್ಯೂಯೆನ್ ತ್ಸಾಂಗನು ತನ್ನ ಪ್ರವಾಸ ಕಥನದಲ್ಲಿ ಗ್ರಾಮಗಳಾಗಿ ಉಲ್ಲೇಖಿಸಿದ್ದಾನೆ. ಈ ಉಲ್ಲೇಖವು ಆ ಕಾಲದಲ್ಲುಂಟಾದ ನಗರಗಳ ಅಧಃಪತನವನ್ನು ಸೂಚಿಸುತ್ತದೆ.

## ಸಾಮಾಜಿಕ ಜೀವನ

ಗುಪ್ತರ ಕಾಲದಲ್ಲಿ ರೂಪುಗೊಂಡ ವಿವಿಧ ಉದ್ಯೋಗ ಒಕ್ಕೂಟಗಳ (ಶ್ರೇಣಿಗಳು) ಕುರಿತು ಹಿಂದೆ ನಾವು ಚರ್ಚಿಸಿದ್ದೇವಲ್ಲವೇ. ನೂತನ ಉದ್ಯೋಗ ಒಕ್ಕೂಟಗಳ ಹಾಗೂ ಜನ ವಿಭಾಗಗಳ ಆವಿರ್ಭಾವವು ಅನೇಕ ಉಪವಿಭಾಗಗಳು ರೂಪುಗೊಳ್ಳಲು ಕಾರಣವಾದವು. ಅಸ್ತಿತ್ವದಲ್ಲಿದ್ದ ವರ್ಣವ್ಯವಸ್ಥೆಗೆ ನೂತನವಾಗಿ ಹುಟ್ಟಿಕೊಂಡ ಉದ್ಯೋಗ ಒಕ್ಕೂಟಗಳನ್ನು ಅಂತರ್ಗತಗೊಳಿಸಲು ಅಸಾಧ್ಯವಾಯಿತು. ಇಂತಹ ಸನ್ನಿವೇಶದಲ್ಲಿ ಪ್ರತಿಯೊಂದು ಉದ್ಯೋಗ ಒಕ್ಕೂಟವೂ ನೂತನ ಜಾತಿಗಳು ಮತ್ತು ಉಪಜಾತಿಗಳಾದವು. ವಿವಿಧ ಉದ್ಯೋಗ ಒಕ್ಕೂಟಗಳ ಹೊರತಾಗಿ ವಿದೇಶಗಳಿಂದ ಬಂದವರು, ಅರಣ್ಯಗಳಲ್ಲಿ ವಾಸಿಸುತ್ತಿದ್ದವರು (ನಿಷಾದರು), ವಿವಿಧ ಜಾತಿಗೆ ಸೇರಿದವರ ಪರಸ್ಪರ ವಿವಾಹದಿಂದ ಜನಿಸಿದವರು ಹೊಸ ಹೊಸ ಜಾತಿಗಳಾಗಿ ಬದಲಾದರು. ಹೀಗೆ ಜಾತಿ ವ್ಯವಸ್ಥೆಯು ಹೆಚ್ಚು ಸಂಕೀರ್ಣವಾಯಿತು.

ಹೀಗೆ ರೂಪುಗೊಂಡ ಸಂಪ್ರದಾಯದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಎಂಬಿವರಿಗೆ ಸಮಾಜವು ನೀಡುತ್ತಿದ್ದ ಸ್ಥಾನಮಾನಗಳಿಗೆ ಯಾವುದೇ ಬದಲಾವಣೆಯುಂಟಾಗಲಿಲ್ಲ. ಏಳನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಚೀನೀ ಯಾತ್ರಿಕನಾದ ಹ್ಯೂಯೆನ್ ತ್ಸಾಂಗನು ಶೂದ್ರರನ್ನು ಕೃಷಿಕರೆಂದು ಕರೆದನು. ಈ ಮಾಹಿತಿಗಳು ಕೃಷಿಸಮಾಜದಲ್ಲಿ ಶೂದ್ರರ ಸಾಮಾಜಿಕ ಸ್ಥಿತಿಯನ್ನು ಸೂಚಿಸುತ್ತವೆ.

ಚಾತುರ್ವರ್ಣ್ಯ ಸಂಪ್ರದಾಯಕ್ಕೆ ಹೊರತಾಗಿದ್ದ 'ಅಂತ್ಯಜರು' ಎಂಬ ವಿಭಾಗವನ್ನು ಅಸ್ಪೃಶ್ಯರಾಗಿ ಪರಿಗಣಿಸಿದರು. ಅಂತ್ಯಜರಲ್ಲಿ 'ಚಂಡಾಲರು' ಎಂಬ ಸ್ಮಶಾನ ಪಾಲಕರು ಹಾಗೂ 'ಚಮ್ಮಾರರು' ಎಂಬ ಚರ್ಮವನ್ನು ಹದಗೊಳಿಸುವವರು ಅತ್ಯಂತ ಕಳಗಿನ ಹಂತದಲ್ಲಿದ್ದರು.

## ಸ್ತ್ರೀಯರ ಸ್ಥಾನಮಾನ

ವಾಕಾಟಕ ರಾಣಿಯಾಗಿದ್ದ ಪ್ರಭಾವತಿ ಗುಪ್ತೆಯಂತೆ ಕೆಲವು ರಾಣಿಯರು ಗೌರವಿಸಲ್ಪಟ್ಟಿದ್ದರೂ ಸಾಮಾನ್ಯವಾಗಿ ಸ್ತ್ರೀಯರ ಸ್ಥಿತಿ ಬಹಳ ಕೆಳಮಟ್ಟದಲ್ಲಿತ್ತು. ರಾಣಿಯಿಂದ ತೊಡಗಿ ಕೆಳಹಂತದ ವರೆಗಿನ ಎಲ್ಲ ವಿಭಾಗದ ಸ್ತ್ರೀಯರೂ ಪುರುಷರಿಗೆ ವಿಧೇಯರಾಗಿರಬೇಕೆಂದು ಗ್ರಹಿಸಿದ್ದರು. ಮೇಲ್ವರ್ಗದ ಸ್ತ್ರೀಯರಿಗೆ ಕೂಡಾ ಸಾಮಾನ್ಯವಾಗಿ ಸಮಾಜದಲ್ಲಿ ಮೇಲ್ಮಟ್ಟದ ಸ್ಥಾನಮಾನ ಅಥವಾ ಪರಿಗಣನೆ ಲಭಿಸಿರಲಿಲ್ಲ. ಯಾವುದೇ ಬ್ರಾಹ್ಮಣ ಸ್ತ್ರೀಗೆ ಕೂಡಾ ಭೂದಾನ ಮಾಡಿದುದಕ್ಕೆ ಪುರಾವೆಗಳಿಲ್ಲ.

### ಅನುಲೋಮ, ಪ್ರತಿಲೋಮ ವಿವಾಹಗಳು

ವಿವಿಧ ಜಾತಿಗಳಿಗೆ ಸೇರಿದವರು ತಮ್ಮೊಳಗೆ ನಡೆಸುವ ವಿವಾಹಗಳ ಬಗ್ಗೆ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. ಮೇಲ್ವರ್ಗದ ಪುರುಷ ಹಾಗೂ ಕೆಳವರ್ಗದ ಸ್ತ್ರೀಯರ ನಡುವಿನ ವಿವಾಹವನ್ನು ಅನುಲೋಮ ವಿವಾಹ ವೆಂದು ಕರೆಯುತ್ತಾರೆ.

ಮೇಲ್ವರ್ಗದ ಸ್ತ್ರೀ ಹಾಗೂ ಕೆಳವರ್ಗದ ಪುರುಷನ ನಡುವಿನ ವಿವಾಹವನ್ನು ಪ್ರತಿಲೋಮ ವಿವಾಹವೆಂದು ಕರೆಯುತ್ತಾರೆ.

### ಫಾಹಿಯಾನನ ವಿವರಣೆಗಳಲ್ಲಿ ಚಂಡಾಲರು

ಎರಡನೇ ಚಂದ್ರಗುಪ್ತನ ಆಡಳಿತಾವಧಿಯಲ್ಲಿ (ಸಿ.ಇ. ಐದನೇ ಶತಮಾನ) ಭಾರತವನ್ನು ಸಂದರ್ಶಿಸಿದ ಚೀನಾದ ಬೌದ್ಧ ಯಾತ್ರಿಕನಾದ ಫಾಹಿಯಾನನು ಚಂಡಾಲರ ಬಗ್ಗೆ ಹೀಗೆ ಹೇಳುತ್ತಾನೆ. "ನಗರಕ್ಕೆ ಅಥವಾ ಮಾರುಕಟ್ಟೆಗೆ ಪ್ರವೇಶಿಸುವ ಚಂಡಾಲರು ಮರದ ಹಲಗೆಯೊಂದಕ್ಕೆ ಬಡಿದು ಶಬ್ದವನ್ನುಂಟು ಮಾಡಬೇಕಾಗಿತ್ತು. ಇವರ ಆಗಮನವನ್ನು ಮೊದಲೇ ತಿಳಿದುಕೊಂಡು, ಮೇಲ್ಜಾತಿಯವರು ದಾರಿಯನ್ನು ಬಿಟ್ಟು ನಿಲ್ಲಲು ಹೀಗೆ ಮಾಡುತ್ತಿದ್ದರು."

## ರಾಷ್ಟ್ರ: ಕೇಂದ್ರ ಅಧಿಕಾರ ಹಾಗೂ ಪ್ರಾದೇಶಿಕ ಅಧಿಕಾರ



*"ಕುಬೇರನಿಗು ವರುಣನಿಗು ಇಂದ್ರನಿಗು ಅಂತಕನಿಗು ಸಮನಾದವನೂ ತನಗೆ ಸರಿಸಮಾನವಾದ ಓರ್ವ ಎದುರಾಳಿಯೂ ಈ ಭೂಮಿಯಲ್ಲಿಲ್ಲದವನೂ...*

ಇದು ಗುಪ್ತರ ಕಾಲದ ಅತ್ಯಂತ ಬಲಶಾಲಿಯಾದ ಆಡಳಿತಗಾರನಾಗಿದ್ದ ಸಮುದ್ರಗುಪ್ತನ ಕುರಿತಾಗಿ ಅಲಹಾಬಾದಿನ ಪ್ರಯಾಗ ಎಂಬಲ್ಲಿನ ಪ್ರಶಸ್ತಿ ಶಾಸನ.

ಗುಪ್ತರ ಕಾಲದ ರಾಜನ ಅಧಿಕಾರದ ಕುರಿತಾದ ಯಾವ ಯಾವ ಮಾಹಿತಿಗಳು ಇದರಿಂದ ನಮಗೆ ಲಭಿಸುತ್ತದೆ?

- ರಾಜನನ್ನು ದೇವರಿಗೆ ಸಮಾನವೆಂದು ತಿಳಿಯುತ್ತಿದ್ದರು.
- 

### ಗುಪ್ತರ ಕಾಲದ ಗ್ರಾಮಾಡಳಿತ

ಗುಪ್ತರ ಕಾಲದಲ್ಲಿ 'ಗ್ರಾಮಪತಿ' ಅಥವಾ 'ಗ್ರಾಮಾಧ್ಯಕ್ಷನು' ಗ್ರಾಮದ ಆಡಳಿತವನ್ನು ನಡೆಸುತ್ತಿದ್ದನು. 'ಗ್ರಾಮವೃದ್ಧರು' ಎಂದು ಕರೆಯಲ್ಪಡುವ ಗ್ರಾಮ ಮುಖ್ಯಸ್ಥರ ಸಂಘವು ಗ್ರಾಮದ ವಾದವಿವಾದಗಳನ್ನು ಇತ್ಯರ್ಥಗೊಳಿಸುತ್ತಿತ್ತು. ಕೃಷಿಕರು ಗ್ರಾಮದ ಪ್ರಮುಖ ಜನವಿಭಾಗದವರಾಗಿದ್ದರು. ಅಲ್ಲದೆ ಬಡಗಿಗಳು, ನೆಯ್ಗೆಯವರು, ಜಾನುವಾರುಗಳನ್ನು ಮೇಯಿಸುವವರು ಎಂಬಿವರೂ ಇದ್ದರು. ಇವರ ಸಂಘಗಳಿಗೆ ಗ್ರಾಮಾಡಳಿತದಲ್ಲಿ ಪ್ರಾತಿನಿಧ್ಯವಿತ್ತು.

ಗುಪ್ತರಾಜರಿಗೆ ವಿಪುಲವಾದ ಅಧಿಕಾರವಿತ್ತು. ಅದರೊಂದಿಗೆ ಕೆಲವು ಜವಾಬ್ದಾರಿಗಳೂ ಅವರಿಗಿದ್ದವು. ಅವು ಯಾವುವು ಎಂಬುದನ್ನು ನೋಡೋಣ

- ಪ್ರಜೆಗಳನ್ನು ಆಕ್ರಮಣದಿಂದ ರಕ್ಷಿಸುವುದು.
- ಬ್ರಾಹ್ಮಣರನ್ನು, ಶ್ರವಣರನ್ನು (ಬೌದ್ಧ – ಜೈನ ವಿಭಾಗಗಳು) ಮತ್ತು ಅಬಲರನ್ನು ರಕ್ಷಿಸುವುದು.
- ನ್ಯಾಯ ನಿರ್ವಹಣೆ ಮಾಡುವುದು.

ಗುಪ್ತರಾಜರು ತಾವು ವಶಪಡಿಸಿದ ಪ್ರದೇಶಗಳಲ್ಲಿನ ರಾಜರನ್ನು ತಮ್ಮ ಸಾಮಂತರಾಗಿ ಪರಿಗಣಿಸಿ ಅದಿಕಾರದಲ್ಲಿ ಮುಂದುವರಿಯಲು ಅನುಮತಿಯನ್ನು ನೀಡಿದರು. ಅವರಿಗೆ ಸ್ವಯಂ ಆಡಳಿತವನ್ನು ನೀಡಿದರು. ಅವರ ಆಡಳಿತದಲ್ಲೂ ಉತ್ತರಾಧಿಕಾರದಲ್ಲೂ ಗುಪ್ತರಾಜರು ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ ನೇರವಾದ ಆಡಳಿತವಿರುವ ಪ್ರದೇಶಗಳಲ್ಲಿ ವಿಪುಲವಾದ ಆಡಳಿತ ವ್ಯವಸ್ಥೆಯನ್ನು ಇವರು ಅಭಿವೃದ್ಧಿಪಡಿಸಿದರು.

ಗುಪ್ತರ ಕಾಲದ ಆಡಳಿತ ವ್ಯವಸ್ಥೆ ಹಾಗೂ ಮೌರ್ಯರ ಕಾಲದ ಆಡಳಿತ ವ್ಯವಸ್ಥೆಯನ್ನು ಪರಸ್ಪರ ಹೋಲಿಸಿ ಟಿಪ್ಪಣಿಯೊಂದನ್ನು ತಯಾರಿಸಿರಿ.

### ಪ್ರಶಸ್ತಿ ಶಾಸನಗಳು

ಪ್ರಾಚೀನ ಕಾಲದ ಭಾರತೀಯ ರಾಜರು ತಮ್ಮ ಸಾಧನೆಗಳನ್ನು ಘೋಷಿಸುವುದಕ್ಕಾಗಿ ಶಿಲೆಯಲ್ಲಿ ಕೆತ್ತಿಸಿದ ಬರಹಗಳನ್ನು ಪ್ರಶಸ್ತಿ ಶಾಸನಗಳು ಎನ್ನುತ್ತಾರೆ. ಸಿ.ಇ. ಎರಡನೇ ಶತಮಾನದಲ್ಲಿ ಕೆತ್ತಿಸಿದ ರುದ್ರದಮನನ ಜುನಾಗಢ್ ಶಾಸನವು ಲಭ್ಯವಾದ ಶಾಸನಗಳಲ್ಲಿ ಮೊತ್ತ ಮೊದಲ ಶಿಲಾಶಾಸನವಾಗಿದೆ. ಅಶೋಕ ಚಕ್ರವರ್ತಿಯ ಜುನಾಗಢ ಶಾಸನದ ಒಂದು ಭಾಗದಲ್ಲಿ ಈ ಪ್ರಶಸ್ತಿಯನ್ನು ಕೆತ್ತಲಾಗಿದೆ. ರಾಜನನ್ನು ಹೊಗಳುವುದು, ಅವನ ಯುದ್ಧದ ಸಾಧನೆಗಳನ್ನು ಶ್ಲಾಘಿಸುವುದು ಮೊದಲಾದವುಗಳು ಪ್ರಶಸ್ತಿ ಶಾಸನಗಳ ವಿಶೇಷತೆಗಳಾಗಿವೆ. ಪ್ರಶಸ್ತಿ ಶಾಸನ ಬರೆಯುವ ನೂತನ ವಿಧಾನವನ್ನು ದಕ್ಷಿಣ ಭಾರತದ ಚೋಳ, ರಾಷ್ಟ್ರಕೂಟ, ಚಾಲುಕ್ಯ, ಪಲ್ಲವ ರಾಜರು ಅನುಸರಿಸಿದ್ದರು. ಅತಿಶಯೋಕ್ತಿಯಾಗಿದ್ದರೂ ಆಡಳಿತಾಧಿಕಾರಿಯೊಬ್ಬನ ಕುರಿತಾದ ಚರಿತ್ರೆ ದಾಖಲೆಗಳೆಂಬ ದೃಷ್ಟಿಯಲ್ಲಿ ಇವು ನಮಗೆ ಸಹಕಾರಿಯಾಗಿವೆ.

### ಪ್ರಯಾಗ ಪ್ರಶಸ್ತಿ

ಪ್ರಯಾಗ ಪ್ರಶಸ್ತಿಯು ಗುಪ್ತರಾಜನಾದ ಸಮುದ್ರಗುಪ್ತನ ಆಕ್ರಮಣಗಳು, ಯುದ್ಧವಿಜಯಗಳು ಎಂಬಿವುಗಳನ್ನು ಶ್ಲಾಘಿಸುವುದಕ್ಕಾಗಿ ಕೆತ್ತಿಸಿದ್ದಾಗಿದೆ. ಇದನ್ನು ಅಲಹಾಬಾದ್ ಪ್ರಶಸ್ತಿ ಶಾಸನ ಎಂದೂ ಕರೆಯುತ್ತಾರೆ. ಸಮುದ್ರಗುಪ್ತನು ಉತ್ತರದಲ್ಲಿ ನೇಪಾಳದಿಂದ ದಕ್ಷಿಣದಲ್ಲಿ ತಮಿಳುನಾಡಿನ ವರೆಗಿನ ಪ್ರದೇಶಗಳನ್ನು ಆಕ್ರಮಿಸಿ ವಶಪಡಿಸಿಕೊಂಡಿದ್ದನ್ನು ಈ ಪ್ರಶಸ್ತಿಯು ಬಣ್ಣಿಸುತ್ತದೆ. ಗುಪ್ತರ ಆಸ್ಥಾನದಲ್ಲಿ ರಾಜಕವಿಯಾಗಿದ್ದ ಹರಿಸೇನನು ಈ ಪ್ರಶಸ್ತಿಯನ್ನು ಸಂಸ್ಕೃತ ಭಾಷೆಯಲ್ಲಿ ಬರೆದಿರುತ್ತಾನೆ.

## ಕಲೆ ಮತ್ತು ಸಾಹಿತ್ಯ

ಗುಪ್ತರ ಕಾಲದ ಸಾಮಾಜಿಕ – ರಾಜಕೀಯ ಬೆಳವಣಿಗೆಯನ್ನು ನಾವು ನೋಡಿದೆವಲ್ಲವೇ. ಇದರೊಂದಿಗೆ ಸೂಕ್ತವಾಗಿ ಹೊಂದಿಕೆಯಾಗುವ ರೀತಿಯಲ್ಲಿ ಈ ಕಾಲದಲ್ಲಿ ಕಲೆ ಮತ್ತು ಸಂಸ್ಕೃತ ಸಾಹಿತ್ಯ ಬೆಳೆದುಬಂತು. ವಾಸ್ತುಶಿಲ್ಪವು ಕಲಾಕ್ಷೇತ್ರದಲ್ಲಿ ಅತ್ಯಧಿಕ ಪ್ರಗತಿಯನ್ನು ಸಾಧಿಸಿತು. ಈ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿಸಲ್ಪಟ್ಟವು. ಅವುಗಳು ಯಾವ ಯಾವ ವಿಶೇಷತೆಗಳನ್ನು ಹೊಂದಿದ್ದವು ಎಂಬುದನ್ನು ನೋಡೋಣ.

**ರಚನಾತ್ಮಕ ದೇವಾಲಯಗಳು (Structural Temples)**

- ಶಿಲೆ ಹಾಗೂ ಇಟ್ಟಿಗೆಯನ್ನುಪಯೋಗಿಸಿ ದೇವಾಲಯಗಳ ನಿರ್ಮಾಣ
- ಕೆತ್ತನೆ ಕೆಲಸಗಳು

ಕೆಳಗೆ ನೀಡಿರುವ ಚಿತ್ರಗಳನ್ನು ನಿರೀಕ್ಷಿಸಿ ಗುಪ್ತರ ಕಾಲದ ವಾಸ್ತುಶಿಲ್ಪದ ವಿಶೇಷತೆಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.



ದಶಾವತಾರ ಕ್ಷೇತ್ರ, ದೇವ್ ಗಢ್, ಉತ್ತರಪ್ರದೇಶ



ತಿಗಾವಾದ ವಿಷ್ಣುಕ್ಷೇತ್ರ ಮಧ್ಯಪ್ರದೇಶ



ನಾಚ್ನಾ – ಕುತಾರ ಪಾರ್ವತಿ ಕ್ಷೇತ್ರ, ಪನ್ನಾ, ಮಧ್ಯಪ್ರದೇಶ

ಜಗತ್ಪ್ರಸಿದ್ಧವಾದ ಅಜಂತಾದ (ಮಹಾರಾಷ್ಟ್ರ) ಗುಹಾ ಚಿತ್ರಗಳು ಗುಪ್ತರ ಕಾಲದಲ್ಲಿ ರಚಿಸಲ್ಪಟ್ಟವುಗಳು. ರಾಜಕೀಯ ಜೀವನ, ರಾಜರ ಆಸ್ಥಾನ, ಅತಿಮಾನುಷ ಜೀವಿಗಳು ಎಂಬಿವುಗಳು ಚಿತ್ರೀಕರಣದ ವಿಷಯಗಳಾಗಿವೆ. ಇವುಗಳಲ್ಲಿ ರಾಮಾಯಣ – ಮಹಾಭಾರತ ಸನ್ನಿವೇಶಗಳೂ ಕಥಾವಸ್ತುಗಳಾಗಿವೆ. ಈ ಚಿತ್ರಗಳ ರಚನೆಗೆ ನೈಸರ್ಗಿಕವಾದ ಬಣ್ಣಗಳನ್ನು ಉಪಯೋಗಿಸಿದುದರಿಂದ ಅನೇಕ ಶತಮಾನಗಳ ವರೆಗೆ ಹಾಳಾಗದೆ ಇಂದೂ ಅತಿ ಮನೋಹರವಾಗಿ ಇರಲು ಇವುಗಳಿಗೆ ಸಾಧ್ಯವಾಯಿತು.



ಗುಪ್ತರ ಆಡಳಿತ ಕಾಲದ ದೇವಾಲಯಗಳ ಹಾಗೂ ಗುಹಾಚಿತ್ರಗಳ ಒಂದು ಡಿಜಿಟಲ್ ಸಂಚಿಕೆಯನ್ನು ತಯಾರಿಸಿ ಪ್ರದರ್ಶಿಸಿರಿ.

ಗುಪ್ತರ ಆಡಳಿತ ಕಾಲದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ರಾಜರ ಪ್ರೋತ್ಸಾಹವು ಲಭಿಸಿತು. ಸಂಸ್ಕೃತವು ಆಡಳಿತ ಭಾಷೆಯಾಗಿತ್ತು. ಪಾಲಿಯಂತೆಯೇ ಜನಸಾಮಾನ್ಯರ ಭಾಷೆಯನ್ನು ಬಳಸುತ್ತಿದ್ದ ಬೌದ್ಧರೂ ಕೂಡಾ ಸಂಸ್ಕೃತದಲ್ಲಿ ಕೃತಿಗಳನ್ನು ರಚಿಸಿದರು. ರಾಮಾಯಣ, ಮಹಾಭಾರತ ಹಾಗೂ ಹೆಚ್ಚಿನ ಪುರಾಣಗಳು ಕ್ರಮೀಕರಿಸಿದ್ದು (ಬಾಯ್ದೆರೆಯಿಂದ ಬರಹಕ್ಕೆ ಬದಲಾವಣೆಗೊಂಡದ್ದು) ಈ ಕಾಲದಲ್ಲಾಗಿದೆ.

ಈ ಕಾಲದಲ್ಲಿ ಸಂಸ್ಕೃತ ಭಾಷೆಯಲ್ಲಿ ನಾಟಕಗಳು, ಕಾವ್ಯಗಳು, ವ್ಯಾಕರಣ, ನಿಘಂಟು (ಶಬ್ದಕೋಶ) ಮೊದಲಾದವು ರಚಿತವಾದವು. ಇವುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ನೀಡಲಾಗಿದೆ.

| ಕೃತಿಯ ಹೆಸರು | ಕೃತಿಯ ಕರ್ತೃ | ಸಾಹಿತ್ಯ ವಿಭಾಗ |
|---|---|---|
| ಅಭಿಜ್ಞಾನ ಶಾಕುಂತಲ | ಕಾಳಿದಾಸ | ನಾಟಕ |
| ಕುಮಾರ ಸಂಭವ | ಕಾಳಿದಾಸ | ಕಾವ್ಯ |
| ಮೃಚ್ಛಕಟಿಕ | ಶೂದ್ರಕ | ನಾಟಕ |
| ಸ್ವಪ್ನವಾಸವದತ್ತ | ಭಾಸ | ನಾಟಕ |
| ತ್ರಿಕಾಂಡೀ | ಭರ್ತೃಹರಿ | ವ್ಯಾಕರಣ |
| ಅಮರಕೋಶ | ಅಮರಸಿಂಹ | ನಿಘಂಟು |

ಸಂಸ್ಕೃತ ನಾಟಕಗಳು ಜಗತ್ಪ್ರಸಿದ್ಧವಾಗಿದ್ದರೂ ಅವುಗಳನ್ನು ಪ್ರದರ್ಶಿಸುವಾಗ ಉನ್ನತ ಪುರುಷ ಕಥಾಪಾತ್ರಗಳು ಮಾತ್ರವೇ ಸಂಸ್ಕೃತದಲ್ಲಿ ಮಾತನಾಡುತ್ತಿದ್ದುವಷ್ಟೆ. ರಾಣಿಯನ್ನು ಒಳಗೊಂಡ ಸ್ತ್ರೀಯರು ಹಾಗೂ ಕೆಳವರ್ಗವೆಂದು ಪರಿಗಣಿಸಲ್ಪಟ್ಟ ಪುರುಷ ಕಥಾಪಾತ್ರಗಳು ಸಂಭಾಷಣೆಗೆ ಪ್ರಾಕೃತ ಭಾಷೆಯನ್ನು ಬಳಸಬೇಕಿತ್ತು.

ಭಾರತೀಯ ತತ್ವಚಿಂತನೆಗೆ ಅಡಿಪಾಯವನ್ನು ಹಾಕಿದ ಕೆಲವು ದರ್ಶನಗಳು ಈ ಕಾಲದಲ್ಲಿ ಮೂಡಿಬಂದವು. ಷಟ್ದರ್ಶನಗಳು (Six systems of Philosophy) ಎಂದು ಹೆಸರುವಾಸಿಯಾದ ಇವು ಪರಸ್ಪರ ಸಂವಾದದ ಮೂಲಕ ರೂಪುಗೊಂಡದ್ದಾಗಿವೆ. ಆ ದರ್ಶನಗಳು ಹಾಗೂ ಅವುಗಳ ವಕ್ತಾರರನ್ನು ನಾವು ಪರಿಚಯಿಸಿಕೊಳ್ಳೋಣ.

| ದರ್ಶನ | ವಕ್ತಾರರು |
|---|---|
| ಸಾಂಖ್ಯ | ಕಪಿಲ |
| ಯೋಗ | ಪತಂಜಲಿ |
| ನ್ಯಾಯ | ಗೌತಮ |
| ವೈಶೇಷಿಕ | ಕಣಾದ |
| ವೇದಾಂತ | ಬಾದಾರಾಯಣ |
| ಮೀಮಾಂಸ | ಜೈಮಿನಿ |

ST-421-8-SOC. SCI.-I (K)-9-VOL-1

## ಶಾಸ್ತ್ರ

ಗುಪ್ತರ ಕಾಲದಲ್ಲಿ ಶಾಸ್ತ್ರಗ್ರಂಥಗಳೂ ರಚಿತವಾಗಿದ್ದವು. ಇವು ಪ್ರಮುಖವಾಗಿ ಜ್ಯೋತಿಶ್ಯಾಸ್ತ್ರ, ಗಣಿತ, ವೈದ್ಯ ಶಾಸ್ತ್ರ ಎಂಬೀ ವಲಯಗಳಲ್ಲಾಗಿದ್ದವು. ವರಾಹಮಿಹಿರನ ಬೃಹತ್ ಸಂಹಿತೆ, ಆರ್ಯಭಟನ ಆರ್ಯಭಟೀಯಂ, ಅಮರ ಸಿಂಹನ ಅಮರಕೋಶ ಎಂಬಿವುಗಳು ಈ ಕಾಲದಲ್ಲಿ ರಚಿತವಾದ ಪ್ರಮುಖ ಶಾಸ್ತ್ರಗ್ರಂಥಗಳಾಗಿವೆ.

### ಲೋಹದ ಸಂಸ್ಕರಣೆ

ಸಿ.ಇ. ನಾಲ್ಕನೇ ಶತಮಾನದಲ್ಲಿ ನಿರ್ಮಿಸಿದ ದೆಹಲಿಯ ಸಮೀಪದ ಮೆಹ್ರೌಲಿಯಲ್ಲಿರುವ ಕಬ್ಬಿಣದ ಸ್ತಂಭವು ಆ ಕಾಲದ ಲೋಹ ಸಂಸ್ಕರಣೆಯ ತಾಂತ್ರಿಕತೆಗೆ ಉದಾಹರಣೆಯಾಗಿದೆ. ಶತಮಾನಗಳಿಂದ ಮಳೆ ಹಾಗೂ ಬಿಸಿಲಿಗೆ ಮೈಯೊಡ್ಡಿ ನಿಂತಿರುವ ಈ ಕಬ್ಬಿಣದ ಸ್ತಂಭವು ಈಗಲೂ ತುಕ್ಕು ಹಿಡಿಯದೆ ನಿಂತುಕೊಂಡಿದೆ.





ವೈಜ್ಞಾನಿಕ ರಂಗಕ್ಕೆ ಗುಪ್ತರ ಕಾಲದ ಕೊಡುಗೆಗಳನ್ನು ಅವಲೋಕಿಸಿರಿ.

## ದಕ್ಷಿಣ ಭಾರತದೆಡೆಗೆ

ಗುಪ್ತ ರಾಜರು ಬ್ರಾಹ್ಮಣರಿಗೆ ಭೂದಾನ ನೀಡಿದುದನ್ನು ಹಿಂದೆ ಚರ್ಚಿಸಿದ್ದೇವಲ್ಲವೇ. ಸಿ.ಇ. ಆರನೇ ಶತಮಾನಕ್ಕಾಗುವಾಗ ಭೂದಾನ ಮಾಡುವ ರೂಢಿಯು ದಕ್ಷಿಣ ಭಾರತಕ್ಕೂ ವ್ಯಾಪಿಸಿತು. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬ್ರಾಹ್ಮಣರು ವಲಸೆ ಬಂದದ್ದು ಇದಕ್ಕೆ ಕಾರಣವಾಗಿದೆ. ಈ ಕಾಲದಲ್ಲಿ ಪಲ್ಲವರು ಹಾಗೂ ಪಾಂಡ್ಯರು ದಕ್ಷಿಣ ಭಾರತದ ಪ್ರಮುಖ ರಾಜವಂಶಗಳಾಗಿದ್ದವು. ಅವರು ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಭೂಮಿಯನ್ನು ದಾನ ಮಾಡಿದರು. ಇದರ ಪರಿಣಾಮವಾಗಿ ದಕ್ಷಿಣ ಭಾರತದ ಸಮಾಜದಲ್ಲಿ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಉನ್ನತ ಸ್ಥಾನಮಾನ ಲಭಿಸಿತು. ಬ್ರಾಹ್ಮಣರಿಗೆ ಭೂದಾನ ಲಭಿಸಿದ ಪ್ರದೇಶಗಳಲ್ಲಿ ಕೃಷಿಯು ಅಭಿವೃದ್ಧಿ ಹೊಂದಿತು. ಹಿಂದೆ ಸೂಚಿಸಿದಂತೆ ಬ್ರಾಹ್ಮಣರಿಗೆ ಕೃಷಿಯ ತಾಂತ್ರಿಕತೆಯ ಕುರಿತು ಹಾಗೂ ಹವಾಗುಣದ ಕುರಿತಾದ ತಿಳುವಳಿಕೆಯು ಕೃಷಿಯ ವ್ಯಾಪಕತೆಗೆ ಸಹಕಾರಿಯಾಯಿತು. ರಾಜರು ಹಾಗೂ ಗ್ರಾಮಾಡಳಿತದವರು ಜಲಸಂಗ್ರಹಗಾರಗಳನ್ನು ನಿರ್ಮಿಸಿಯೂ ನೀರಾವರಿ ವ್ಯವಸ್ಥೆಯನ್ನು ಮಾಡಿಯೂ ಕೃಷಿಯನ್ನು ಪ್ರೋತ್ಸಾಹಿಸಿದರು.

ಬ್ರಾಹ್ಮಣರ ನಿಯಂತ್ರಣದಲ್ಲಿದ್ದ ದೇವಾಲಯಗಳ ಹಸ್ತಕ್ಷೇಪದಿಂದಾಗಿ ಪಲ್ಲವರ ರಾಜ್ಯದಲ್ಲಿ ಕೃಷಿಯು ಪ್ರಗತಿ ಹೊಂದಿತು. ಕೃಷಿಯ ಅಧಿಕ ಉತ್ಪಾದನೆಯು ವ್ಯಾಪಾರದ ಪ್ರಗತಿಗೆ ಕಾರಣವಾಯಿತು. ಆಂತರಿಕ ವ್ಯಾಪಾರದೊಂದಿಗೆ ಸಮುದ್ರ ವ್ಯಾಪಾರವೂ ಬೆಳೆದುಬಂತು. ಮಹಾಬಲಿಪುರವು ಪಲ್ಲವರ ಕಿಕ್ಕಿರಿದ ಬಂದರಾಗಿತ್ತು. ನಾಗಪಟ್ಟಣವು ಮತ್ತೊಂದು ಬಂದರು ಆಗಿತ್ತು. ವ್ಯಾಪಾರ ಸಮುದಾಯಗಳು ಪಾಂಡ್ಯರಾಜ್ಯದ ವ್ಯಾಪಾರದ ವಿಶೇಷತೆಯಾಗಿತ್ತು. ಉತ್ತರ ಭಾರತದಲ್ಲಿ ಶ್ರೇಣಿಗಳೆಂದು ಹೆಸರುವಾಸಿಯಾಗಿದ್ದ ವ್ಯಾಪಾರ ಕೂಟಗಳನ್ನು ದಕ್ಷಿಣ ಭಾರತದಲ್ಲಿ ವ್ಯಾಪಾರ ಸಮುದಾಯಗಳೆಂದು ಕರೆಯುತ್ತಿದ್ದರು. ಒಂದೊಂದು ಉತ್ಪನ್ನದ ವ್ಯಾಪಾರದಲ್ಲಿ ಒಂದೊಂದು ವ್ಯಾಪಾರ ಸಂಘವು ಗಮನವನ್ನು ಕೇಂದ್ರೀಕರಿಸಿತು.

'ನಗರತ್ತಾರ್'ರು ವ್ಯಾಪಾರಿಗಳಾಗಿದ್ದರು. ಕರಿಮೆಣಸು, ಶ್ರೀಗಂಧ, ಚಿನ್ನ, ಮುತ್ತು ಮೊದಲಾದವುಗಳು ಪಾಂಡ್ಯರ ಪ್ರಮುಖ ರಫ್ತು ಸರಕುಗಳಾಗಿದ್ದವು. ಕೊರ್ಕೈ, ಕಾಯಲ್ ಪಟ್ಟಣಂ, ಪೆರಿಯ ಪಟ್ಟಣಂ ಇತ್ಯಾದಿ ಬಂದರುಗಳ ಮೂಲಕ ರೋಮ್, ಗ್ರೀಕ್, ಚೀನಾ, ಅರಬಿ ವ್ಯಾಪಾರಿಗಳೊಂದಿಗೆ ಪಾಂಡ್ಯರೂ ವ್ಯಾಪಾರವನ್ನು ನಡೆಸುತ್ತಿದ್ದರು. ಕೃಷಿಯ ವ್ಯಾಪಿಸುವಿಕೆ ವ್ಯಾಪಾರದ ಬೆಳವಣಿಗೆಗೆ ಹಾಗೂ ವಿವಿಧ ವೃತ್ತಿಗಳು ಪಲ್ಲವ, ಪಾಂಡ್ಯ ರಾಜ್ಯಗಳಿಗೆ ತೆರಿಗೆ ಮಾರ್ಗಗಳಾಗಿ ಬದಲಾದವು. ಭೂತೆರಿಗೆಯು ಪ್ರಮುಖವಾದುದಾಗಿತ್ತು. ಇದು ಬೆಳೆಯ $\frac{1}{10}$ ರಿಂದ $\frac{1}{6}$ ರ ವರೆಗೆ ನೀಡಬೇಕಿತ್ತು. ವಿವಿಧ ವೃತ್ತಿಗಳನ್ನು ಮಾಡುತ್ತಿದ್ದವರು ತೆರಿಗೆಯನ್ನು ಪಾವತಿಸಬೇಕಿತ್ತು. ದೇವಾಲಯಗಳಿಗೆ ದಾನವಾಗಿ ನೀಡಿದ ಬ್ರಹ್ಮದೇಯಂ, ಬ್ರಾಹ್ಮಣರು ವಾಸಿಸುತ್ತಿದ್ದ ಅಗ್ರಹಾರ ಎಂಬಿವುಗಳನ್ನು ಭೂತೆರಿಗೆಯಿಂದ ಹೊರತುಪಡಿಸಲಾಗಿತ್ತು.

### ಬ್ರಹ್ಮಸ್ವಂ ಅಥವಾ ಬ್ರಹ್ಮದೇಯಂ

ಒಂದು ಗುಂಪು ಬ್ರಾಹ್ಮಣರಿಗೆ ದಾನವಾಗಿ ನೀಡುವ ಭೂಮಿಯನ್ನು ಬ್ರಹ್ಮದೇಯಂ ಎನ್ನುತ್ತಾರೆ.

### ಅಗ್ರಹಾರ

ಬ್ರಾಹ್ಮಣ ಗ್ರಾಮಗಳನ್ನು ಅಗ್ರಹಾರಗಳೆಂದು ಕರೆಯುತ್ತಾರೆ.

### ದೇವಸ್ವಂ ಅಥವಾ ದೇವದಾನಂ

ದೇವರಿಗೆ ಅಥವಾ ದೇವಾಲಯಕ್ಕೆ ದಾನವಾಗಿ ನೀಡಿದ ಭೂಮಿಯನ್ನು ದೇವದಾನಂ ಎಂದು ಕರೆದರು. ದೇವಾಲಯದ ನಿರ್ವಹಣೆಯನ್ನು ಮಾಡುವವರು ಈ ಭೂಮಿಯ ನಿರ್ವಹಣೆಯನ್ನು ಮಾಡುತ್ತಿದ್ದರು.

ದಕ್ಷಿಣ ಭಾರತಕ್ಕೆ ಭೂದಾನದ ವ್ಯಾಪಿಸುವಿಕೆಯು ಇಲ್ಲಿನ ಆರ್ಥಿಕ ರಂಗದಲ್ಲುಂಟುಮಾಡಿದ ಬದಲಾವಣೆಗಳನ್ನು ಚರ್ಚಿಸಿರಿ.

ಇನ್ನು ನಾವು ದಕ್ಷಿಣ ಭಾರತದ ಸಾಮಾಜಿಕ – ಸಾಂಸ್ಕೃತಿಕ ಜೀವನದ ಬಗ್ಗೆ ಚರ್ಚಿಸೋಣ.

ಪಲ್ಲವ – ಪಾಂಡ್ಯರ ಪ್ರದೇಶದ ಸಮಾಜವು ಜಾತಿ ವ್ಯವಸ್ಥೆಯಲ್ಲಿ ಹುದುಗಿಕೊಂಡಿತ್ತು. 'ಬ್ರಹ್ಮದೇಯಗಳು' ಎಂಬ ಹೆಸರಿನಲ್ಲಿ ಹೇರಳವಾದ ಭೂದಾನ ಲಭಿಸಿದ ಬ್ರಾಹ್ಮಣರು ಶ್ರೀಮಂತರೂ ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದವರೂ ಆಗಿದ್ದರು.

ಕೆಳವರ್ಗದವರೆಂದು ಪರಿಗಣಿಸಲ್ಪಟ್ಟವರು ಹಲವು ಸಮಸ್ಯೆಗಳನ್ನು ಅನುಭವಿಸಿದ್ದರು. ವರ್ಣವ್ಯವಸ್ಥೆಯಲ್ಲಿ ಒಳಪಡದ ಕೆಲವು ವಿಭಾಗಗಳೂ ಇದ್ದುವು.

ಪಲ್ಲವ – ಪಾಂಡ್ಯ ರಾಜ್ಯಗಳಲ್ಲಿ ಗ್ರಾಮ ಸ್ವಯಂ ಆಡಳಿತವು ಅಸ್ತಿತ್ವದಲ್ಲಿತ್ತು. ಗ್ರಾಮ ನ್ಯಾಯಾಲಯಗಳಿದ್ದುವು. ವಿದ್ಯಾಭ್ಯಾಸ, ನ್ಯಾಯ ನೀತಿ ಎಂಬಿವುಗಳನ್ನು ಜಾರಿಗೊಳಿಸುವುದರೊಂದಿಗೆ ಒಟ್ಟುಗೂಡಿ ಚರ್ಚಿಸಿ ವಿವಾದಗಳನ್ನು ಇತ್ಯರ್ಥ ಗೊಳಿಸುತ್ತಿದ್ದರು. ಇವುಗಳಲ್ಲಿ ಯಾವುದರಲ್ಲೂ ರಾಜರು ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ಆಚಾರಗಳು, ಆರಾಧನಾ ಕ್ರಮಗಳು, ಜಾತಿ ನಿಯಮಗಳಲ್ಲಿ ರಾಜರ ಹಸ್ತಕ್ಷೇಪವಿರಲಿಲ್ಲ.

ನೀವು ಹಿಂದಿನ ಪಾಠಭಾಗದಲ್ಲಿ ಪರಿಚಯಿಸಿಕೊಂಡಿರುವ ಜೈನ ಹಾಗೂ ಬೌದ್ಧ ಮತಗಳು ಪಲ್ಲವರಿಗಿಂತ ಮೊದಲು ದಕ್ಷಿಣ ಭಾರತದಲ್ಲಿ ಬಹಳ ಸಕ್ರಿಯವಾಗಿತ್ತು. ಆದರೆ ಬ್ರಾಹ್ಮಣರ ಅಧಿಕಾರ ಬೆಳೆದುಬಂದಂತೆ ಈ ಮತಗಳು ಕ್ಷಯಿಸಿದವು. ಪಲ್ಲವರು ಮತ್ತು ಪಾಂಡ್ಯರು ಶೈವ – ವೈಷ್ಣವ ದೇವಾಲಯಗಳನ್ನು ನಿರ್ಮಿಸಿದರಲ್ಲದೆ ಭಕ್ತಿ ಚಳುವಳಿಯನ್ನು ಪ್ರೋತ್ಸಾಹಿಸಿದರು.

ಆ ಕಾಲದ ದಕ್ಷಿಣ ಭಾರತದ ಸಾಹಿತ್ಯದಲ್ಲಿ ಬ್ರಾಹ್ಮಣ ಮತ ಹಾಗೂ ಭಕ್ತಿಯ ಆಶಯಗಳು ಪ್ರತಿಫಲಿಸಿದ್ದವು. ಪಲ್ಲವರು ಸಂಸ್ಕೃತ ಸಾಹಿತ್ಯವನ್ನು ಪ್ರೋತ್ಸಾಹಿಸಿದರು. ಪಲ್ಲವ ರಾಜನಾದ ಒಂದನೇ ಮಹೇಂದ್ರವರ್ಮನು ಸಂಸ್ಕೃತ ಪಂಡಿತನಾಗಿದ್ದನು. 'ಮತ್ತವಿಲಾಸಪ್ರಹಸನಂ' ಎಂಬುದು ಅವನು ರಚಿಸಿದ ಕೃತಿಯಾಗಿದೆ.
ದಕ್ಷಿಣ ಭಾರತದ ದೇವಾಲಯಗಳು ಆ ಕಾಲದ ಜನಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು. ದೇವಾಲಯಗಳು ಆ ಕಾಲದ ಪ್ರಮುಖ ಕಲಾ ನಿರ್ಮಾಣಗಳಾಗಿದ್ದವು. ಕಾಂಚೀಪುರಂ, ಮಹಾಬಲಿಪುರಂ, ಮಧುರಾ ಎಂಬೆಡೆಗಳಲ್ಲಿ ಆ ಕಾಲದ ಪ್ರಮುಖ ದೇವಾಲಯಗಳಿವೆ. 'ದ್ರಾವಿಡಶೈಲಿ' ಎಂಬ ದಕ್ಷಿಣ ಭಾರತ ಕ್ಷೇತ್ರ ನಿರ್ಮಾಣ ಶೈಲಿಯು ಪಲ್ಲವರ ಕಾಲದಲ್ಲಿ ರೂಪುಗೊಂಡಿತು. ಕಾಲಕ್ರಮೇಣ ದೇವಾಲಯ ನಿರ್ಮಾಣವು ಮೂರು ಹಂತಗಳಲ್ಲಾಗಿ ವಿಕಾಸಹೊಂದಿತು. ಅವುಗಳನ್ನು ಕೆಳಗೆ ನೀಡಲಾಗಿದೆ.

- ಶಿಲೆಯನ್ನು ಕೊರೆದು ನಿರ್ಮಿಸಿದ ದೇವಾಲಯಗಳು
- ಏಕ ಶಿಲೆಯಲ್ಲಿ ನಿರ್ಮಿಸಿದ ರಥಕ್ಷೇತ್ರಗಳು.
- ರಚನಾ ದೇವಾಲಯಗಳು



ಮಾಮಂಡೂರ್ ಗುಹಾ ದೇವಾಲಯ (ಕಾಂಚೀಪುರ)



ಮಧುರೆ ಮೀನಾಕ್ಷಿ ದೇವಾಲಯ



ಮಹಾಬಲಿಪುರದ ರಥಕ್ಷೇತ್ರ

### ದ್ರಾವಿಡ ವಾಸ್ತು ಶಿಲ್ಪಕಲೆ

ದೇವಾಲಯ ನಿರ್ಮಾಣವು ಭಾರತದಲ್ಲಿ ಪುರಾತನ ಕಾಲದಿಂದಲೇ ಅಸ್ತಿತ್ವದಲ್ಲಿತ್ತು. ದೇವಾಲಯ ವಾಸ್ತು ಶಿಲ್ಪ ಕಲೆಯು ಮೂರು ವಿಧದಲ್ಲಿತ್ತು. 'ನಾಗರ' 'ವೇಸರ' ಶೈಲಿಗಳು ಸಾಮಾನ್ಯವಾಗಿ ಉತ್ತರ ಭಾರತದಲ್ಲೂ ದ್ರಾವಿಡ ಶೈಲಿಯು ದಕ್ಷಿಣ ಭಾರತದಲ್ಲೂ ಅಸ್ತಿತ್ವದಲ್ಲಿತ್ತು. ಭೀಮಾಕಾರದ ಮಂಟಪಗಳು ದ್ರಾವಿಡ ವಾಸ್ತುಶಿಲ್ಪ ಕಲೆಯ ಪ್ರಮುಖ ವಿಶೇಷತೆಗಳಾಗಿವೆ.

ಪಲ್ಲವರು ದ್ರಾವಿಡ ವಾಸ್ತು ಶಿಲ್ಪದ ಪ್ರಾವೀಣ್ಯವನ್ನು ಮೊತ್ತಮೊದಲು ಸಾಬೀತುಪಡಿಸಿದವರಾಗಿದ್ದಾರೆ. ಮಹಾಬಲಿಪುರದ ದೇವಾಲಯಗಳು ಅವರ ವಾಸ್ತು ಶಿಲ್ಪ ಕಲೆಯ ಪ್ರಾವೀಣ್ಯಕ್ಕಿರುವ ಉದಾಹರಣೆಗಳಾಗಿವೆ. ಆದರೆ ಚೋಳರು ದ್ರಾವಿಡ ಶೈಲಿಯಲ್ಲಿ ಅತ್ಯಧಿಕ ದೇವಾಲಯಗಳನ್ನು ನಿರ್ಮಾಣ ಮಾಡಿದವರಾಗಿದ್ದಾರೆ. ತಮಿಳುನಾಡಿನ ವಿವಿಧ ಭಾಗಗಳಲ್ಲಿ ಆ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳು ಇಂದೂ ಇವೆ. ಮಧುರೆ ಮೀನಾಕ್ಷಿ ದೇವಾಲಯ, ಶ್ರೀರಂಗ ದೇವಾಲಯ ಮೊದಲಾದವು ಪಾಂಡ್ಯರ ಕಾಲದ ಪ್ರಸಿದ್ಧವಾದ ನಿರ್ಮಾಣಗಳಾಗಿವೆ.

ದ್ರಾವಿಡ ವಾಸ್ತುಶಿಲ್ಪಕಲೆಯಲ್ಲಿ ನಿರ್ಮಿಸಿದ ದೇವಾಲಯಗಳಿಗೆ ಪ್ರಮುಖವಾಗಿ ಗರ್ಭಗುಡಿ (ಶ್ರೀಕೋವಿಲ್), ವಿಮಾನ (ದೇವಾಲಯದ ಮೇಲ್ಭಾಗ), ಶಿಖರ (ವಿಮಾನದ ತುದಿ), ಮಂಟಪ, ಪ್ರದಕ್ಷಿಣೆ ಪಥ ಎಂಬಿವುಗಳಿರುವುವು. ಭೀಮಾಕಾರದ ಹೆಬ್ಬಾಗಿಲುಗಳು, ಎತ್ತರವಾದ ಗೋಪುರಗಳು, ಅಲಂಕೃತವಾಗಿ ಕೆತ್ತಿದ ಆನೆಗಳು, ಕುದುರೆಗಳು, ಯಾಳಿಮುಖ ಎಂಬಿವುಗಳು ದ್ರಾವಿಡ ಶೈಲಿಯ ವಿಶೇಷತೆಗಳಾಗಿವೆ. ಈ ದೇವಾಲಯಗಳ ಗೋಡೆಗಳಲ್ಲಿ ಅಸಾಮಾನ್ಯ ಪ್ರಾವೀಣ್ಯತೆಯಿಂದ ಇತಿಹಾಸ – ಪುರಾಣಗಳ ಕಥೆಗಳು ಮತ್ತು ಕಥಾ ಪಾತ್ರಗಳನ್ನು ಅತಿ ಸೂಕ್ಷ್ಮವಾಗಿ ಕೆತ್ತಲಾಗಿದೆ.

### ಮಹಾಬಲಿಪುರಂ


ಷೋರ ದೇವಾಲಯ

ತಮಿಳುನಾಡಿನ ಮಹಾಬಲಿಪುರಂನಲ್ಲಿ ಆ ಕಾಲದ ಅತ್ಯಂತ ಗಮನಾರ್ಹವಾದ ದೇವಾಲಯಗಳು ಹಾಗೂ ಶಿಲೆಯಲ್ಲಿ ಕೆತ್ತಿದ ವಿಗ್ರಹಗಳು ಕಂಡುಬರುತ್ತವೆ. ಮಾಮಲ್ಲಪುರಂ ಎಂಬುದಾಗಿಯೂ ಕರೆಯಲ್ಪಡುವ ಮಹಾಬಲಿಪುರವು ಬಂಗಾಳ ಕೊಲ್ಲಿಯ ತೀರದಲ್ಲಿದೆ. ಏಕ ಶಿಲೆಯಲ್ಲಿ ನಿರ್ಮಿಸಿದ, ಪಂಚಪಾಂಡವರನ್ನು ಸೂಚಿಸುವ ಐದು ರಥಕ್ಷೇತ್ರಗಳು, ಕಡಲ ತೀರದಲ್ಲಿ ನಿರ್ಮಿಸಿದ ಸಮುದ್ರ ಷೋರ ದೇವಾಲಯ (Shore Temple) ಇತ್ಯಾದಿಗಳು ಪಲ್ಲವರ ವಾಸ್ತು ಶಿಲ್ಪಕಲೆಗೆ ಉತ್ತಮ ಉದಾಹರಣೆಗಳಾಗಿವೆ. ಶಿಲೆಯ ಕೆತ್ತನೆ ಕೆಲಸಗಳಾದ 'ಅರ್ಜುನ ತಪಸ್ಸು', 'ಮಹಿಷಾಸುರ ಮರ್ದನ' ಎಂಬಿವು ಪಲ್ಲವ ಕಲೆಗೆ ಇತರ ಉದಾಹರಣೆಗಳಾಗಿವೆ. ಯುನೆಸ್ಕೋ ಪಾರಂಪರಿಕ ನಗರವಾಗಿ ಮಹಾಬಲಿಪುರಂನ್ನು ಅಂಗೀಕರಿಸಿದೆ.

## ಮುಂದುವರಿದ ಚಟುವಟಿಕೆಗಳು

- ರಾಜಾಡಳಿತ ಕಾಲದ 'ಭೂದಾನಗಳು ಮತ್ತು ದುಷ್ಪರಿಣಾಮಗಳು' ಎಂಬ ವಿಷಯದಲ್ಲಿ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿರಿ.
- ವಿವಿಧ ನಿರ್ಮಾಣ ಶೈಲಿಗಳು ಕಂಡುಬರುವ ದೇವಾಲಯಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ಗುಪ್ತರ ಕಾಲದಲ್ಲಿ ವೈಜ್ಞಾನಿಕ – ತಾಂತ್ರಿಕ ರಂಗಗಳಲ್ಲಿ ಗಳಿಸಿದ ಸಾಧನೆಗಳನ್ನು ಒಳಗೊಂಡ ಒಂದು ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿರಿ.

# 4 ಭಾರತದ ಸಂವಿಧಾನ ಮತ್ತು ಅಧಿಕಾರ ವಿನ್ಯಾಸ






"ಬಹಳ ವರ್ಷಗಳ ಹಿಂದೆಯೇ ಭವಿಷ್ಯದೊಂದಿಗೆ ನಮ್ಮ ಮುಖಾಮುಖಿ ನಡೆದಿತ್ತು. ಆಗ ಕೈಗೊಂಡ ಪ್ರತಿಜ್ಞೆಯನ್ನು ಈಡೇರಿಸುವುದು ಸಂಪೂರ್ಣವಲ್ಲದಿದ್ದರೂ ಈಗ ಗಣನೀಯವಾಗಿ ಈಡೇರಿಸುವ ಸಮಯ ಬಂದಿದೆ. ಇಂದು ಮಧ್ಯರಾತ್ರಿಯ ಘಂಟೆ ಬಾರಿಸುತ್ತಿರುವ ಈ ಹೊತ್ತಿನಲ್ಲಿ ಜಗವೆಲ್ಲಾ ಮಲಗಿರಲು ಭಾರತ ಎಚ್ಚೆತ್ತುಕೊಂಡಿದೆ. ಹೊಸ ಜೀವನ ಹಾಗೂ ಸ್ವಾತಂತ್ರ್ಯಕ್ಕಾಗಿ....

ಒಂದು ಯುಗ ಅಂತ್ಯಗೊಳ್ಳುತ್ತಿದೆ. ದೀರ್ಘಕಾಲದಿಂದ ದಮನಿಸಲ್ಪಟ್ಟ ಒಂದು ದೇಶದ ಆತ್ಮಧ್ವನಿಯು ಕೇಳಿಸುತ್ತಿದೆ. ಈ ಅಪೂರ್ವ ಕ್ಷಣದಲ್ಲಿ ಭಾರತ ಮತ್ತು ಅದರ ಜನತೆಯ ಹಾಗೂ ವಿಶಾಲವಾದ ಮಾನವರಾಶಿಯ ಸಂಪೂರ್ಣ ಸೇವೆಗಾಗಿ ಸ್ವಯಂ ಸಮರ್ಪಿಸಿಕೊಳ್ಳುತ್ತೇವೆ ಎಂದು ನಾವು ಪ್ರತಿಜ್ಞೆ ಮಾಡೋಣ."

ಸ್ವಾತಂತ್ರ್ಯೋದಯದ ಸಂದರ್ಭದಲ್ಲಿ ಪ್ರಥಮ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಮಾಡಿದ ಭಾಷಣದ ಭಾಗವನ್ನು ಮೇಲೆ ನೀಡಲಾಗಿದೆ.

ವಿದೇಶೀಯರ ಆಡಳಿತದಲ್ಲಿನ ಕೆಡುಕುಗಳನ್ನು ಹೋಗಲಾಡಿಸಿ, ನಿರೀಕ್ಷೆಗಳಿಂದ ತುಂಬಿದ ಹಾಗೂ ಜವಾಬ್ದಾರಿಯುತ ರೀತಿಯಲ್ಲಿ ದೇಶವನ್ನು ಮುನ್ನಡೆಸಲು ಸಂವಿಧಾನದ ರಚನಾ ಸಭೆಯಲ್ಲಿ ನೆಹರು ಆಹ್ವಾನ ನೀಡಿದರು. 1947 ಆಗಸ್ಟ್ 15 ರಂದು ಭಾರತವು ಗಳಿಸಿದ ಸ್ವಾತಂತ್ರ್ಯವು ನಮ್ಮ ಸಂವಿಧಾನ ರಚನಾ ಸಭೆಗೆ ವಹಿಸಿದ ಜವಾಬ್ದಾರಿಯು ಅತ್ಯಂತ ದೊಡ್ಡದೂ ಪ್ರಾಮುಖ್ಯವಾದುದೂ ಆಗಿತ್ತು. ಬ್ರಿಟಿಷ್ ಆಡಳಿತದಲ್ಲಿ ಜನರು ತಾರತಮ್ಯ, ಪ್ರಜಾಪ್ರಭುತ್ವ ವಿರೋಧಿ ಮತ್ತು ಅನ್ಯಾಯದ ಕ್ರಮಗಳಿಗೆ ಒಳಗಾಗಿದ್ದರು. ಆ ಕಾಲದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ವ್ಯವಸ್ಥೆ, ಇತರ ಸಾಮಾಜಿಕ ಅನಾಚಾರಗಳು, ಮಾನವ ಹಕ್ಕುಗಳ ಉಲ್ಲಂಘನೆ ಇತ್ಯಾದಿಗಳು ಆಧುನಿಕ ಸಮಾಜದ ಊಹನೆಗೂ ನಿಲುಕದ್ದಾಗಿತ್ತು. ಸ್ವಾತಂತ್ರ್ಯದ ನಂತರ ಇವುಗಳಿಗೆಲ್ಲ ಪರಿಹಾರವನ್ನುಂಟುಮಾಡುವ ಒಂದು ಪ್ರಜಾಪ್ರಭುತ್ವ ಆಡಳಿತ ವಿಧಾನ ಮತ್ತು ಕ್ಷೇಮರಾಷ್ಟ್ರ ವ್ಯವಸ್ಥೆ ನಿರ್ಮಾಣವಾಗಬೇಕೆಂಬ ಚಿಂತನೆಯು ನಮ್ಮ ರಾಷ್ಟ್ರೀಯ ಚಳುವಳಿಗೆ ಮತ್ತು ಜನರಿಗೆ ಇತ್ತು.

ಪ್ರಜಾಪ್ರಭುತ್ವ ಆಡಳಿತ ವಿಧಾನ ಮತ್ತು ಕ್ಷೇಮರಾಷ್ಟ್ರದ ನಿರ್ಮಾಣವು ಸ್ವತಂತ್ರ ಭಾರತವು ಜನರಿಗೆ ನೀಡಿದ ಪ್ರಮುಖವಾದ ಎರಡು ಭರವಸೆಗಳಾಗಿದ್ದವು. ಸಂವಿಧಾನ ರಚನಾ ಸಭೆಯ ರೂಪೀಕರಣ ಮತ್ತು ನೆಹರು ಮಂಡಿಸಿದ ಧ್ಯೇಯಗಳ ನಿರ್ಣಯವು ಇದಕ್ಕಿರುವ ಮೊದಲ ಹೆಜ್ಜೆಯಾಗಿದೆ.

## ಧ್ಯೇಯಗಳ ನಿರ್ಣಯದಿಂದ ಸಂವಿಧಾನದ ಕಡೆಗೆ

### ಧ್ಯೇಯಗಳ ನಿರ್ಣಯ

- ಈ ಸಂವಿಧಾನ ರಚನಾ ಸಭೆಯು ಭಾರತವನ್ನು ಸ್ವತಂತ್ರ ಸಾರ್ವಭೌಮ ಗಣರಾಜ್ಯವಾಗಿ ರೂಪಿಸಲು ಮತ್ತು ಅದಕ್ಕಾಗಿ ಒಂದು ಸಂವಿಧಾನವನ್ನು ರಚಿಸಲು ತನ್ನ ದೃಢವಾದ ಮತ್ತು ಗಂಭೀರವಾದ ಸಂಕಲ್ಪವನ್ನು ಘೋಷಿಸುತ್ತದೆ.
- ಸ್ವತಂತ್ರ ಪರಮಾಧಿಕಾರ ಭಾರತ ಎಂಬುದು ಹಿಂದಿನ ಬ್ರಿಟೀಷ್ ಅಧೀನ ಭಾರತದ ಪ್ರದೇಶಗಳು, ಭಾರತದ ಪ್ರಾಂತ್ಯಗಳು, ಭಾರತದ ಒಕ್ಕೂಟದ ಭಾಗವಾಗಲು ಸನ್ನದ್ಧವಾಗಿರುವ ಬ್ರಿಟೀಷ್ ಭಾರತದ ಹೊರತಾಗಿರುವ ಇತರ ಪ್ರದೇಶಗಳು ಎಂಬಿವುಗಳ ಒಂದು ಒಕ್ಕೂಟವಾಗಿರುತ್ತದೆ.
- ಭಾರತದ ಸಂಯುಕ್ತ ಒಕ್ಕೂಟವು ರೂಪೀಕರಿಸುವ ಪ್ರದೇಶಗಳು ಸ್ವಯಂ ಆಡಳಿತ ಘಟಕಗಳಾಗಿರುತ್ತವೆ. ಅಲ್ಲದೆ ಕೇಂದ್ರ ಸರಕಾರದಲ್ಲಿ ಒಳಗೊಳ್ಳದೆ ಇರುವ ಎಲ್ಲ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಅದಕ್ಕೆ ನೀಡಲಾಗುವುದು.
- ಸ್ವತಂತ್ರ ಪರಮಾಧಿಕಾರ ಭಾರತದ ಎಲ್ಲ ಅಧಿಕಾರಗಳೂ ಜನರಿಂದಲೇ ರೂಪಿತವಾಗುತ್ತದೆ.
- ಭಾರತದ ಎಲ್ಲ ಜನತೆಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾದ ನ್ಯಾಯ, ಸ್ಥಾನಮಾನದ ಸಮಾನತೆ, ಸಮಾನ ಅವಕಾಶ, ಕಾನೂನಿನ ಮುಂದೆ ಇರುವ ಸಮಾನತೆಯು ಅಲ್ಲದೆ ಕಾನೂನಿಗೂ, ಸಾರ್ವಜನಿಕ ನೈತಿಕತೆ ಒಳಪಟ್ಟಿರುವ ವಾಕ್, ಅಭಿವ್ಯಕ್ತಿ, ನಂಬಿಕೆ, ಆರಾಧನೆ, ಉದ್ಯೋಗ, ಸಂಘಟನೆ ಮತ್ತು ಕಾರ್ಯನಿರ್ವಹಣೆ ಎಂಬೀ ಮೂಲಭೂತ ಸ್ವಾತಂತ್ರ್ಯಗಳನ್ನು ಖಾತರಿಪಡಿಸುವುದು ಮತ್ತು ಸಂರಕ್ಷಿಸುವುದು.

1946 ಡಿಸೆಂಬರ್ 13 ರಂದು ಸಂವಿಧಾನ ರಚನಾ ಸಭೆಯಲ್ಲಿ ಜವಹರಲಾಲ್ ನೆಹರು ಮಂಡಿಸಿದ ಧ್ಯೇಯ ನಿರ್ಣಯದ ಕೆಲವು ಆಶಯಗಳನ್ನು ಮೇಲೆ ನೀಡಲಾಗಿದೆ. ರಾಷ್ಟ್ರೀಯ ಚಳುವಳಿ ಮುಂದಿರಿಸಿದ ಕೆಲವು ಆಶಯಗಳು ಧ್ಯೇಯ ನಿರ್ಣಯದಲ್ಲಿ ಒಳಗೊಂಡಿವೆ.

ರಾಷ್ಟ್ರೀಯ ಚಳುವಳಿಯು ಮುಂದಿರಿಸಿದ ಯಾವೆಲ್ಲ ಆಶಯಗಳು ಧ್ಯೇಯ ನಿರ್ಣಯದಲ್ಲಿ ಒಳಗೊಂಡಿವೆ?

- ಸಮಾನ ಅವಕಾಶ
- 
- 
- 

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ** ;

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ST-421-9-SOC. SCI.-I (K)-9-VOL-1

ಧ್ಯೇಯ ನಿರ್ಣಯಗಳಲ್ಲಿ ಮಂಡಿಸಲಾದ ಯಾವೆಲ್ಲ ಆಶಯಗಳು ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ? ಹೋಲಿಸಿರಿ.

- ಜನರಿಗೆ ಪರಮಾಧಿಕಾರ
- 
- 
- 

ಧ್ಯೇಯ ನಿರ್ಣಯಗಳಲ್ಲಿರುವ ವಿವಿಧ ಆಶಯಗಳು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆಯೆಂದು ತಿಳಿಯಿತಲ್ಲವೆ? ಪ್ರಸ್ತಾವನೆಯಲ್ಲಿರುವ ಆಶಯಗಳು, ದೃಷ್ಟಿಕೋನ, ಉದ್ದೇಶಗಳು ಮೊದಲಾದ ವಿಚಾರಗಳನ್ನು ಸಾಕ್ಷಾತ್ಕಾರಗೊಳಿಸಲು ಸಂವಿಧಾನ ತತ್ವಗಳು ಎಷ್ಟರ ಮಟ್ಟಿಗೆ ಸಮರ್ಪಕವಾಗಿದೆಯೆಂದು ಪರಿಶೀಲಿಸೋಣ.

## ಸಂವಿಧಾನದ ವಿಶೇಷತೆಗಳು

ಕ್ಯಾಬಿನೆಟ್ ಮಿಶನ್‌ನ ಶಿಫಾರಸಿನ ಮೇರೆಗೆ, ಸಂವಿಧಾನ ನಿರ್ಮಾಣ ಸಮಿತಿಯನ್ನು 1946 ಡಿಸೆಂಬರ್ 6 ರಂದು ರೂಪಿಸಲಾಯಿತು. ಭಾರತದ ಸಂವಿಧಾನವು 1946 ಡಿಸೆಂಬರ್ 9 ರಿಂದ 2 ವರ್ಷ 11 ತಿಂಗಳು 17 ದಿವಸಗಳ ಕಾಲ ನಡೆದ ಮಹತ್ತರವಾದ ಪ್ರಕ್ರಿಯೆಯ ಮೂಲಕ ರಚನೆಯಾಯಿತು. 1949 ನವೆಂಬರ್ 26 ಅಂಗೀಕರಿಸಿ ಕಾನೂನಾಗಿ ನಮಗಾಗಿ ಸಮರ್ಪಿಸಿದ ಭಾರತದ ಸಂವಿಧಾನದಲ್ಲಿ 22 ಭಾಗಗಳು, 395 ವಿಧಿಗಳು, 8 ಅನುಸೂಚಿಗಳು ಇದ್ದುವು. 1950 ಜನವರಿ 26 ರಂದು ಅಸ್ತಿತ್ವಕ್ಕೆ ಬಂದ ಭಾರತದ ಸಂವಿಧಾನವು ಕಾಲಕ್ಕನುಗುಣವಾದ ಬದಲಾವಣೆಗೆ ಒಳಗಾಗಿ ಒಂದು ಸಜೀವ ದಾಖಲೆಯಾಗಿ ಮುಂದುವರಿಯುತ್ತಿವೆ.

ಭಾರತೀಯ ರಾಷ್ಟ್ರೀಯ ಚಳುವಳಿ ಮತ್ತು ಧ್ಯೇಯ ನಿರ್ಣಯದಲ್ಲಿ ಸೂಚಿಸಲಾದ ಹಲವು ಆಶಯಗಳು ಸಂವಿಧಾನದ ಭಾಗವಾಗಿವೆ. ಆಳವಾದ ಅಧ್ಯಯನ ಹಾಗೂ ಚರ್ಚೆಗಳ ಮೂಲಕ ತಯಾರಿಸಲಾದ ಸಂವಿಧಾನದ ವಿಶೇಷತೆಗಳನ್ನು ಪರಿಚಯಿಸೋಣ.

ಅತಿದೊಡ್ಡ ಲಿಖಿತ ಸಂವಿಧಾನ → ಒಂದೂವರೆ ಲಕ್ಷದವರೆಗೆ ಪದಗಳಿರುವ ಸಮಗ್ರ ಹಾಗೂ ವಿಸ್ತೃತವಾದ ದಾಖಲೆ. ರಾಷ್ಟ್ರದ ವೈವಿಧ್ಯ, ವಿಶಾಲತೆಯನ್ನು ಪರಿಗಣಿಸಿದ ಸಮಗ್ರವಾದ ವಿಷಯ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ → ಕಾರ್ಯನಿರ್ವಹಣಾ ವಿಭಾಗದ ಸದಸ್ಯರು ಶಾಸನ ನಿರ್ಮಾಣ ಸಭೆಯವರಾಗಿದ್ದಾರೆ. ಶಾಸನ ನಿರ್ಮಾಣ ವಿಭಾಗವು ಕಾರ್ಯನಿರ್ವಹಣ ವಿಭಾಗವನ್ನು ನಿಯಂತ್ರಿಸುತ್ತದೆ.

**ಸುದೃಢವೂ ಸ್ಥಿತಿಸ್ಥಾಪಕತ್ವವೂ ಇರುವ ರಚನೆ**

ಕೆಲವು ವ್ಯವಸ್ಥೆಗಳನ್ನು ತಿದ್ದುಪಡಿ ಮಾಡಲು ಪ್ರತ್ಯೇಕ ಕ್ರಮಗಳನ್ನು ಪಾಲಿಸಬೇಕಾಗಿದೆ. ಇನ್ನು ಕೆಲವನ್ನು ಸಾಮಾನ್ಯ ನಿಯಮ ನಿರ್ಮಾಣ ರೀತಿಯಲ್ಲಿ ತಿದ್ದುಪಡಿ ಮಾಡಬಹುದು.

**ಮೂಲಭೂತ ಹಕ್ಕುಗಳು ಮೂಲಭೂತ ಕರ್ತವ್ಯಗಳು**

- ಪ್ರತಿಯೊಬ್ಬ ವ್ಯಕ್ತಿಗೂ ರಾಷ್ಟ್ರವು ಖಾತರಿಪಡಿಸಬೇಕಾದ ಮೂಲಭೂತಹಕ್ಕುಗಳು.
- ಪೌರನು ರಾಷ್ಟ್ರಕ್ಕೂ ಸಮಾಜಕ್ಕೂ ಪಾಲಿಸಬೇಕಾದ ಜವಾಬ್ದಾರಿಗಳು.

**ನಿರ್ದೇಶಕ ತತ್ವಗಳು**

ಭಾವೀ ರಾಷ್ಟ್ರದ ಸಾಮಾಜಿಕ - ಆರ್ಥಿಕ ಏಳಿಗೆಗಾಗಿ ರಾಷ್ಟ್ರಕ್ಕೆ ನೀಡಿರುವ ನಿರ್ದೇಶನಗಳು.

**ದ್ವಿಸದನ ಶಾಸಕಾಂಗ**

ಎಲ್ಲ ಜನರನ್ನು ಪ್ರತಿನಿಧಿಸುವ ಸಭೆ ಕೆಳಮನೆ. (ಲೋಕಸಭೆ) : ಕಾನೂನು ರಚನೆಯಲ್ಲಿ ಪುನರ್ ಚಿಂತನೆಗಾಗಿ ರಾಜ್ಯಗಳನ್ನು ಪ್ರತಿನಿಧಿಸುವ ಮೇಲ್ಮನೆ. (ರಾಜ್ಯಸಭೆ) ಎಂಬ ಎರಡು ಸದನಗಳು.

**ಫೆಡರಲಿಸಂ ಬಲಿಷ್ಠವಾದ ಕೇಂದ್ರ ಸರಕಾರದಿಂದ ಕೂಡಿದ ಸಂಯುಕ್ತ ವ್ಯವಸ್ಥೆ.**

ಅಧಿಕಾರಗಳನ್ನು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವೆ ವಿಭಜಿಸಲಾಗಿದೆ. ಆದರೂ ಕೇಂದ್ರಕ್ಕೆ ಮೇಲುಗೈ ನೀಡುವ ಕೆಲವು ವಿಶೇಷ ಅಧಿಕಾರಗಳನ್ನು ಸಂವಿಧಾನದಲ್ಲಿ ಒಳಪಡಿಸಲಾಗಿದೆ.

**ಸ್ವತಂತ್ರವೂ, ನಿಷ್ಪಕ್ಷಪಾತವೂ ಆದ ನ್ಯಾಯಾಂಗ ವ್ಯವಸ್ಥೆ**

ಶಾಸಕಾಂಗ ಕಾರ್ಯಾಂಗ ವಿಭಾಗಗಳ ನಿಯಂತ್ರಣಕ್ಕೊಳಪಡದ ನ್ಯಾಯಾಲಯ ವ್ಯವಸ್ಥೆ.

**ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳು**

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಮಗ್ರ ಮತ್ತು ಅರ್ಥಪೂರ್ಣವಾಗಿಸಲಿರುವ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳು.

ಪ್ರಸ್ತುತ ಸಂವಿಧಾನದಲ್ಲಿ ಎಷ್ಟು ಭಾಗಗಳು ಮತ್ತು ಅನುಸೂಚಿಗಳು ಇವೆ? ಕಂಡು ಹಿಡಿಯಿರಿ.

# ಭಾರತದ ಫೆಡರಲಿಸಂ

ಸಂವಿಧಾನದ ವಿಶೇಷತೆಗಳ ಕುರಿತು ತರಗತಿಯಲ್ಲಿ ಮಂಡಿಸಿದ ವಿಚಾರಗೋಷ್ಠಿ ಪ್ರಬಂಧದ ಪ್ರಮುಖ ಭಾಗಗಳನ್ನು ಗಮನಿಸಿರಿ.

...ಫೆಡರಲ್ ವ್ಯವಸ್ಥೆಯು ನಮ್ಮ ದೇಶದ ವೈವಿಧ್ಯ ಮತ್ತು ಏಕತೆಯನ್ನು ಕಾಪಾಡಿಕೊಳ್ಳಲು ಸಹಾಯಮಾಡುತ್ತದೆ. ಮಾತ್ರವಲ್ಲದೆ ಪ್ರಾದೇಶಿಕ ಪ್ರಾತಿನಿಧ್ಯವನ್ನು ಖಾತರಿಪಡಿಸುವ ಮೂಲಕ ಪ್ರತ್ಯೇಕತಾವಾದಿ ಪ್ರವೃತ್ತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಇಂತಹ ಆಡಳಿತ ವ್ಯವಸ್ಥೆಯು ಉಪಯುಕ್ತವಾಗಿದೆ. ಆಡಳಿತದ ವಿವಿಧ ಹಂತಗಳನ್ನು ಸಂಯೋಜಿಸುವ ಮೂಲಕ ಆರ್ಥಿಕ ಪ್ರಗತಿಯನ್ನು ಸಾಧಿಸಲು ಮತ್ತು ಎಲ್ಲಾ ವರ್ಗಗಳ (ವಿಭಾಗ) ಕ್ಷೇಮವನ್ನು ಖಾತರಿಪಡಿಸಿಕೊಳ್ಳಲು ಫೆಡರಲಿಸಂನ ಮೂಲಕ ಸಾಧ್ಯವಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ಹಂಚಿಕೆಯಾಗುವ ಈ ಆಡಳಿತ ವ್ಯವಸ್ಥೆಯು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಹೆಚ್ಚು ಅರ್ಥಪೂರ್ಣವಾಗಿಸುತ್ತದೆ...

ಮೇಲೆ ಕೊಟ್ಟಿರುವ ಪ್ರಬಂಧದ ಭಾಗದ ಆಧಾರದಲ್ಲಿ ಭಾರತವು ಫೆಡರಲಿಸಂ ವ್ಯವಸ್ಥೆಯನ್ನು ಸ್ವೀಕರಿಸಲಿರುವ ಕಾರಣಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

- ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಅಧಿಕಾರ ಹಂಚಿಕೆಯ ಮೂಲಕ ಪ್ರಜಾಪ್ರಭುತ್ವವನ್ನು ದೃಢಗೊಳಿಸುವುದಕ್ಕೆ.
- 
- 
- 
- 
- 

ಫೆಡರಲಿಸಂ ಎಂಬುದು ಸಂವಿಧಾನದ ಆಧಾರದಲ್ಲಿ ಅಧಿಕಾರವು ಎರಡು ಸ್ತರಗಳಲ್ಲಿ ವಿಭಜಿಸಲಾದ ಆಡಳಿತ ವ್ಯವಸ್ಥೆಯಾಗಿದೆ. ಇದು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಪರಸ್ಪರ ಅಧಿಕಾರವನ್ನು ಹಂಚಿಕೊಳ್ಳುವ ಆಡಳಿತ ರೀತಿಯಾಗಿದೆ.

ಸುದೃಢವಾದ ಸಂವಿಧಾನ, ಅಧಿಕಾರ ವಿಭಜನೆ, ಸ್ವತಂತ್ರವಾದ ನ್ಯಾಯಾಂಗವ್ಯವಸ್ಥೆ ಎಂಬಿವುಗಳನ್ನು ಫೆಡರಲಿಸಂನ ಮೂಲಭೂತ ವಿಶೇಷತೆಗಳಾಗಿ ಪರಿಗಣಿಸಲಾಗುತ್ತದೆ.

## ಭಾಗ I

## ಒಕ್ಕೂಟದ ಹೆಸರು ಮತ್ತು ಪ್ರದೇಶಗಳು

**1. ಒಕ್ಕೂಟದ ಹೆಸರು ಮತ್ತು ಪ್ರದೇಶಗಳು**- (1) ಇಂಡಿಯಾ ಅಂದರೆ ಭಾರತ, ರಾಜ್ಯಗಳ ಒಕ್ಕೂಟವಾಗಿರತಕ್ಕದ್ದು.

[1][(2) ರಾಜ್ಯಗಳು ಮತ್ತು ಅದರ ಪ್ರಾಂತ್ಯಗಳು ಮೊದಲ ಶೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.]

(3) ಭಾರತದ ಭೂಪ್ರದೇಶವು ಒಳಗೊಂಡಿರುತ್ತದೆ -

(ಕ) ರಾಜ್ಯಗಳ ಪ್ರದೇಶಗಳು;

[2][(ಖ) ಮೊದಲ ಶೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿದ ಕೇಂದ್ರಾಡಳಿತ ಪ್ರದೇಶಗಳು;]

(ಗ) ಸ್ವಾಧೀನಪಡಿಸಿಕೊಳ್ಳಬಹುದಾದಂತಹ ಇತರ ಭೂಪ್ರದೇಶಗಳು, ಒಳಗೊಂಡಿರುವುದಾಗಿದೆ.

ಭಾರತದ ಸಂವಿಧಾನದ ಒಂದನೇ ಅನುಚ್ಛೇದವನ್ನು ನೀವು ಓದಿದರಲ್ಲವೇ. ಇದರ ಪ್ರಕಾರ ಇಂಡಿಯಾ ಅಂದರೆ ಭಾರತವು ರಾಜ್ಯಗಳ ಒಕ್ಕೂಟವಾಗಿದೆ. ಆದರೆ ಸಂವಿಧಾನದಲ್ಲಿ ಎಲ್ಲಿಯೂ ಭಾರತವನ್ನು ಒಂದು ಫೆಡರಲ್ ದೇಶ ಎಂದು ನಮೂದಿಸಲಾಗಿಲ್ಲ. ಭಾರತದ ಸಾಮಾಜಿಕ, ಪ್ರಾದೇಶಿಕ, ಭೌಗೋಳಿಕ ವೈವಿಧ್ಯಗಳನ್ನು ಸ್ವಾಯತ್ತಗೊಳಿಸಲು ರಾಷ್ಟ್ರದ ಏಕತೆಯನ್ನು, ಅಖಂಡತೆಯನ್ನು ಕಾಪಾಡಲು ನಾವು ಫೆಡರಲ್ ವ್ಯವಸ್ಥೆಯನ್ನು ಸ್ವೀಕರಿಸಿಕೊಂಡಿದ್ದೇವೆ.

ಭಾರತದ ಫೆಡರಲಿಸಂನ ಕೆಲವು ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ.



ಭಾರತದ ಫೆಡರಲ್ ರಚನೆಯು ಭಾರತದ ಸಂವಿಧಾನ ಎತ್ತಿಹಿಡಿಯುವ ಪ್ರಜಾಸತ್ತಾತ್ಮಕ ಬದ್ಧತೆಯ ಇನ್ನೊಂದು ವಿಶೇಷತೆಯಾಗಿದೆ. ಭಾರತದ ಸಂವಿಧಾನವು ರಾಷ್ಟ್ರದ ಅಧಿಕಾರಗಳನ್ನು ಒಂದು ಹಂತದಲ್ಲಿ ಕೇಂದ್ರೀಕರಿಸುವ ಬದಲು ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳ ನಡುವೆ ವಿಭಜಿಸುವ ವಿಧಾನವನ್ನು ಅಳವಡಿಸಿಕೊಂಡಿದೆ. ಅಧಿಕಾರಗಳ ವಿಭಜನೆಯನ್ನು ಉಲ್ಲೇಖಿಸುವ ಸಂವಿಧಾನದ ಏಳನೇ ಅನುಸೂಚಿ (ಶೆಡ್ಯೂಲ್) ಯನ್ನು ಪರಿಶೀಲಿಸೋಣ.

## ಅಧಿಕಾರ ವಿಭಜನೆ (Division of Powers) ಏಳನೇಅನುಸೂಚಿ

**ಕೇಂದ್ರ ಪಟ್ಟಿ** (Union List) - ಇದು ಕೇಂದ್ರ ಸರಕಾರದ ಕಾನೂನು ರಚನೆಯ ಸಂಪೂರ್ಣ ಅಧಿಕಾರವನ್ನು ಸೂಚಿಸುವ ವಿಷಯಗಳ ಪಟ್ಟಿಯಾಗಿದೆ. ಸಂವಿಧಾನ ಜಾರಿಗೆ ಬಂದಾಗ ಇದರಲ್ಲಿ 97 ವಿಷಯಗಳಿದ್ದುವು.

ಉದಾ – ವಿದೇಶಾಂಗ ವ್ಯವಹಾರ, ರಕ್ಷಣೆ, ರೈಲ್ವೆ, ಬ್ಯಾಂಕಿಂಗ್, ಪೌರತ್ವ ಮೊದಲಾದವು.

**ರಾಜ್ಯ ಪಟ್ಟಿ** (State List) - ಇದು ಸಾಮಾನ್ಯವಾಗಿ ಪ್ರಾಂತ್ಯ ಸರಕಾರಗಳಿಗೆ ಕಾನೂನು ರಚನೆಯ ಅಧಿಕಾರ ಇರುವ ವಿಷಯಗಳ ಪಟ್ಟಿಯಾಗಿದೆ. ಆರಂಭದಲ್ಲಿ ಇದು 66 ವಿಷಯಗಳನ್ನು ಒಳಗೊಂಡಿತ್ತು.

ಉದಾ – ಕೃಷಿ, ಸೆರೆಮನೆ, ಪೋಲಿಸ್, ಸ್ಥಳೀಯ ಆಡಳಿತ ಮೊದಲಾದವು.

**ಸಮವರ್ತಿ ಪಟ್ಟಿ** (Concurrent List) - ಇದು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳಿಗೆ ಬೇಕಾಗಿರುವ ಕಾನೂನು ರಚಿಸುವ ಅಧಿಕಾರವನ್ನು ನೀಡುವ ವಿಷಯಗಳನ್ನು ಹೊಂದಿರುವ ಪಟ್ಟಿಯಾಗಿದೆ. ಆರಂಭದಲ್ಲಿ 47 ವಿಷಯಗಳು ಇದ್ದುವು.

ಉದಾ – ವಿದ್ಯಾಭ್ಯಾಸ, ಅರಣ್ಯ, ಕಾರ್ಮಿಕ ಸಂಘಟನೆ, ವಿವಾಹ, ಜನನ-ಮರಣ ನೋಂದಾವಣೆ ಮುಂತಾದವು.

**ಶೇಷಾಧಿಕಾರ (ಶಾಸನದ ಉಳಿದ ಅಧಿಕಾರಗಳು)** (Residuary Powers) - ಮೇಲಿನ ಮೂರು ಅಧಿಕಾರ ಪಟ್ಟಿಗಳಲ್ಲಿ ಒಳಪಡದ ವಿಷಯಗಳನ್ನು ಶೇಷಾಧಿಕಾರ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಕಾನೂನು ರಚನೆಯ ಅಧಿಕಾರವು ಕೇಂದ್ರ ಸರಕಾರದ್ದಾಗಿದೆ.

ಉದಾ – ಸೈಬರ್ ನಿಯಮಗಳು.



ಮೇಲೆ ಕೊಡಲಾದ ವಾರ್ತಾ ಶೀರ್ಷಿಕೆಗಳನ್ನು ಗಮನಿಸಿದ್ದೀರಲ್ಲವೇ. ಇವುಗಳು ಯಾವ ಪಟ್ಟಿಯಲ್ಲಿ ಒಳಗೊಳ್ಳುತ್ತವೆ ಎಂದು ದಾಖಲಿಸಿರಿ.

| ಕೇಂದ್ರ ಪಟ್ಟಿ | ರಾಜ್ಯ ಪಟ್ಟಿ | ಸಮವರ್ತಿ ಪಟ್ಟಿ |
|---|---|---|
| | | |

ಭಾರತದ ಫೆಡರಲಿಸಂ ಪ್ರಜಾಪ್ರಭುತ್ವದ ಮೇಲೆ ಹೇಗೆ ಪ್ರಭಾವವನ್ನು ಬೀರುತ್ತದೆ - ಚರ್ಚಾಗೋಷ್ಠಿಯನ್ನು ಏರ್ಪಡಿಸಿರಿ.

## ಅಧಿಕಾರ ವಿಭಜನೆ

"ಸಂವಿಧಾನ ಒಂದು ಮೌಲ್ಯಯುತ ದಾಖಲೆಯಾಗಿದೆ. ಆಡಳಿತ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ – ಇವುಗಳ ಸ್ಥಾನ ಮತ್ತು ಅಧಿಕಾರಗಳನ್ನು ಅದು ನಿರ್ವಚಿಸುತ್ತದೆ.... ಸಂವಿಧಾನದ ಗುರಿಯು ಆಡಳಿತದ ವ್ಯವಸ್ಥೆಗಳನ್ನು ಸೃಷ್ಟಿಸುವುದು ಮಾತ್ರವಲ್ಲ, ಅದರ ಅಧಿಕಾರಗಳನ್ನು ಪರಿಮಿತಗೊಳಿಸುವುದಾಗಿದೆ. ಕಾರಣವೇನೆಂದರೆ ಸರಕಾರದ ಅಂಗಗಳ ಅಧಿಕಾರವನ್ನು ಪರಿಮಿತಗೊಳಿಸದಿದ್ದರೆ ಸ್ವೇಚ್ಛಾಧಿಪತ್ಯ ಮತ್ತು ದಬ್ಬಾಳಿಕೆಯು ಉಂಟಾಗಬಹುದು".

ಡಾ. ಬಿ. ಆರ್. ಅಂಬೇಡ್ಕರ್ : ಸಂವಿಧಾನದ ಕರಡು ಸಮಿತಿಯಲ್ಲಿ
ನಡೆಸಿದ ಭಾಷಣದಿಂದ ಆರಿಸಲಾಗಿದೆ.



## ಅಧಿಕಾರ ವಿಭಜನೆ (Separation of Powers)




ನಮ್ಮ ಸಂವಿಧಾನವು ಹೇಳುವ ಅಧಿಕಾರ ವಿಭಜನೆಯ ಕುರಿತು ಸಂವಿಧಾನ ಶಿಲ್ಪಿಯಾದ ಡಾ. ಬಿ. ಆರ್. ಅಂಬೇಡ್ಕರ್‌ರ ಅಭಿಪ್ರಾಯವನ್ನು ಗಮನಿಸಿದಿರಲ್ಲವೆ? ಭಾರತದ ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರವು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಪೈಕಿ ಯಾವುದಾದರೊಂದರಲ್ಲಿ ಕೇಂದ್ರೀಕರಿಸುವುದನ್ನು ತಡೆಯಲು ಮತ್ತು ಪ್ರಜಾಪ್ರಭುತ್ವವನ್ನು ಹಿಂದಿಕ್ಕಿ ಏಕಾಧಿಪತ್ಯವು ಬರದಂತೆ ಮಾಡಲು ಸಂವಿಧಾನವು ಗಮನ ಹರಿಸಿದೆ. ಈ ಚರ್ಚೆಗಳಿಂದಾಗಿ ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆ ಮತ್ತು ಫೆಡರಲ್ ವ್ಯವಸ್ಥೆಗಳು ಪರಸ್ಪರ ಬೆಸೆದುಕೊಂಡಿವೆ.

ಇನ್ನು ನಮಗೆ ಸಂವಿಧಾನ ವ್ಯವಸ್ಥೆಯ ಪ್ರಕಾರ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳ ರಚನೆ, ಅಧಿಕಾರ ಜವಾಬ್ದಾರಿಗಳನ್ನು ಯಾವ ರೀತಿಯಲ್ಲಿ ವಿಭಜಿಸಲಾಗಿದೆಯೆಂದು ಪರಿಶೀಲಿಸೋಣ.

### ಶಾಸಕಾಂಗ (Legislature)

ಭಾರತದ ಶಾಸಕಾಂಗವನ್ನು ಸಂಸತ್ತು ಎನ್ನುತ್ತಾರೆ. ದೇಶಕ್ಕೆ ಅಗತ್ಯವಿರುವ ಕಾನೂನುಗಳನ್ನು ರಚನೆ ಮಾಡುವುದು ಸಂಸತ್ತಿನ ಪ್ರಾಥಮಿಕ ಕರ್ತವ್ಯವಾಗಿದೆ. ಜನರ ವಿವಿಧ ರೀತಿಯ ಅಭಿಲಾಷೆಗಳನ್ನು ಗಮನದಲ್ಲಿಟ್ಟುಕೊಂಡು ಕಾಲಕ್ಕನುಗುಣವಾದ ಬದಲಾವಣೆಗಳನ್ನು ತರುವುದಕ್ಕೂ ನೂತನ ಉದ್ದೇಶಗಳನ್ನು ಈಡೇರಿಸುವುದಕ್ಕೂ ಕಾನೂನುಗಳನ್ನು ರಚಿಸುವುದಿದೆ. ಲೋಕಸಭೆ ಮತ್ತು ರಾಜ್ಯಸಭೆ ಎಂಬೆರಡು ಸದನಗಳನ್ನು ಹೊಂದಿರುವ ಭಾರತದ ಸಂಸತ್ತು ದ್ವಿಸದನ ಶಾಶಕಾಂಗವಾಗಿದೆ. ವಿಶಾಲ ಮತ್ತು ವೈವಿಧ್ಯಪೂರ್ಣವಾಗಿರುವ ರಾಷ್ಟ್ರಗಳು ಸಾಮಾನ್ಯವಾಗಿ ಅವರ ದೇಶದ ಶಾಸಕಾಂಗದಲ್ಲಿ ಎರಡು ಸದನಗಳನ್ನು ಹೊಂದಿರುತ್ತವೆ. ದೇಶದ ಎಲ್ಲ ವೈವಿಧ್ಯಗಳನ್ನು (ಜನರನ್ನು ಮತ್ತು ಭೂಪ್ರದೇಶಗಳನ್ನು) ಪ್ರತಿನಿಧಿಕರಿಸಲು ಇದು ಸಹಾಯಕವಾಗಿದೆ. ಮಾತ್ರವಲ್ಲದೆ ಪ್ರಜಾಪ್ರಭುತ್ವಾತ್ಮಕ ಚರ್ಚೆಗಳು, ಸಂವಾದಗಳು ಇತ್ಯಾದಿಗಳನ್ನು ಏರ್ಪಡಿಸುವಲ್ಲಿ ದ್ವಿಸದನ ಶಾಸಕಾಂಗವು ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯ ಶಾಸಕಾಂಗವು ರಾಜ್ಯಗಳಲ್ಲಿ ಕಾನೂನು ರಚನೆ ಮಾಡುತ್ತದೆ.

ಶಾಸಕಾಂಗದ ಜವಾಬ್ದಾರಿಗಳು ಯಾವುವೆಲ್ಲ ಎಂದು ಪರಿಚಯಿಸಿಕೊಳ್ಳೋಣ.

**ಪಾರ್ಲಿಮೆಂಟಿನ ಪ್ರಧಾನ ಜವಾಬ್ದಾರಿಗಳು**

- ಶಾಸನ ನಿರ್ಮಾಣ
- ಸಾರ್ವಜನಿಕ ಖಜಾನೆಯ ಸಂರಕ್ಷಕನಾಗಿ ಕಾರ್ಯನಿರ್ವಹಿಸುವುದು.
- ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದು.
- ಕಾರ್ಯಾಂಗವನ್ನು ನಿಯಂತ್ರಿಸುವುದು.
- ಮಹಾಭಿಯೋಗ (Impeachment) ಪ್ರಕ್ರಿಯೆಗಳಲ್ಲಿ ನ್ಯಾಯಾಂಗ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.
- ಸಾಂವಿಧಾನಿಕ ತಿದ್ದುಪಡಿಯ ಪರಿಗಣನೆ ಹಾಗೂ ಅಂಗೀಕಾರ.

ಪಾರ್ಲಿಮೆಂಟ್ (ಸಂಸತ್ತು)ನ ಪ್ರಮುಖ ಜವಾಬ್ದಾರಿಗಳನ್ನು ಪರಿಚಯಿಸಿಕೊಂಡೆವಲ್ಲವೆ. ಪಾರ್ಲಿಮೆಂಟಿನ ಎರಡು ಸಭೆಗಳಾದ ಲೋಕಸಭೆ ಹಾಗೂ ರಾಜ್ಯಸಭೆಯ ಪ್ರಮುಖ ವಿಶೇಷತೆಗಳನ್ನು ಪರಿಶೀಲಿಸೋಣ.

## ಲೋಕಸಭೆ



ಲೋಕಸಭೆಯು ಪಾರ್ಲಿಮೆಂಟಿನ ಕೆಳಮನೆಯಾಗಿದೆ. ಲೋಕಸಭೆಯ ಸದಸ್ಯರನ್ನು ಬಹುಮತ ವ್ಯವಸ್ಥೆಯ ಆಧಾರದಲ್ಲಿ ಜನರಿಂದ ನೇರವಾಗಿ ಆಯ್ಕೆ ಮಾಡುತ್ತಾರೆ. 25 ವರ್ಷ ಪೂರ್ತಿಯಾದ ಭಾರತೀಯ ಪೌರನಿಗೆ ಲೋಕಸಭೆಗೆ ಸ್ಪರ್ಧಿಸಲು ಅರ್ಹತೆ ಇದೆ. ಲೋಕಸಭೆಯ ಕಾಲಾವಧಿಯು ಐದು ವರ್ಷವಾಗಿದೆ. ಲೋಕಸಭೆಯ ಗರಿಷ್ಠ ಸದಸ್ಯರ ಸಂಖ್ಯೆ 550. ಆದರೆ ಪ್ರಸ್ತುತ 543 (2023ರಲ್ಲಿ) ಚುನಾಯಿತ ಸದಸ್ಯರಿದ್ದಾರೆ. ಲೋಕಸಭೆಯಲ್ಲಿ ಬಹುಮತದ ಆಧಾರದಲ್ಲಿ ಸರಕಾರದ ರಚನೆ ಮತ್ತು ಅಸ್ತಿತ್ವವು ಅವಲಂಬಿತವಾಗಿದೆ. ಒಂದು ಪಕ್ಷ ಅಥವಾ ಒಕ್ಕೂಟವು ಸರಕಾರವನ್ನು ರಚಿಸಲು ವಿಫಲವಾದಾಗ ಆಡಳಿತ ಪಕ್ಷವೋ ಅಥವಾ ಮೈತ್ರಿ ಪಕ್ಷವೋ ತನ್ನ ಬಹುಮತವನ್ನು ಕಳೆದುಕೊಂಡಾಗ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಲೋಕಸಭೆಯ ಅಧ್ಯಕ್ಷರು ಸ್ಪೀಕರ್. ಹಣಕಾಸಿನ ವಿಚಾರದಲ್ಲಿ ರಾಜ್ಯಸಭೆಗಿಂತ ಲೋಕಸಭೆಗೆ ಹೆಚ್ಚಿನ ಅಧಿಕಾರಗಳಿವೆ. ಹಣಕಾಸು ಮಸೂದೆ ಮತ್ತು ಅವಿಶ್ವಾಸ ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸಲಾಗುತ್ತದೆ.

## ರಾಜ್ಯಸಭೆ

ರಾಜ್ಯಸಭೆ ಪಾರ್ಲಿಮೆಂಟಿನ ಮೇಲ್ಮನೆಯಾಗಿದೆ. ಈ ಸಭೆಯಲ್ಲಿ ಜನಸಂಖ್ಯಾ ಅನುಪಾತದಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯವನ್ನು ನೀಡಲಾಗುವುದು. ರಾಜ್ಯಸಭಾ ಸದಸ್ಯರನ್ನು ರಾಜ್ಯ ಶಾಸನ ಸಭೆಯ ಸದಸ್ಯರು (M.L.A.) ಆಯ್ಕೆ ಮಾಡುತ್ತಾರೆ. 30 ವರ್ಷ ಪೂರ್ತಿಯಾದ ಭಾರತೀಯ ಪೌರರು ರಾಜ್ಯಸಭೆಗೆ ಸ್ಪರ್ಧಿಸುವ ಅರ್ಹತೆಯನ್ನು ಹೊಂದಿದ್ದಾರೆ. ರಾಜ್ಯಸಭೆಯು ಶಾಶ್ವತ ಸಭೆಯಾಗಿದೆ. ರಾಜ್ಯಸಭೆಯ ಸದಸ್ಯರ ಕಾಲಾವಧಿ ಆರು ವರ್ಷವಾಗಿದೆ.

ST-421-10-SOC. SCI.-I (K)-9-VOL-1



ರಾಜ್ಯಸಭೆಯ 1/3 ಭಾಗದಷ್ಟು ಸದಸ್ಯರು ಪ್ರತಿ 2 ವರ್ಷಗಳಿಗೊಮ್ಮೆ ನಿವೃತ್ತಿ ಹೊಂದಿದಾಗ ತೆರವುಗೊಂಡ ಸ್ಥಾನಗಳನ್ನುತುಂಬಲು ಚುನಾವಣೆಗಳನ್ನುನಡೆಸಲಾಗುವುದು. ಉಪರಾಷ್ಟ್ರಪತಿ ರಾಜ್ಯಸಭೆಯ ಅಧ್ಯಕ್ಷರಾಗಿರುತ್ತಾರೆ. ರಾಜ್ಯಸಭೆಯ ಗರಿಷ್ಠ ಸದಸ್ಯರ ಸಂಖ್ಯೆ 250. ಇವರಲ್ಲಿ 238 ಮಂದಿ ಚುನಾಯಿತ ಸದಸ್ಯರಾಗಿರುತ್ತಾರೆ. ಉಳಿದ 12 ಮಂದಿಯನ್ನು ರಾಷ್ಟ್ರಪತಿ ನಾಮನಿರ್ದೇಶನ ಮಾಡುತ್ತಾರೆ. ಉಪರಾಷ್ಟ್ರಪತಿಯನ್ನು ಪದಚ್ಯುತಗೊಳಿಸುವ ಪ್ರಕ್ರಿಯೆಯು ರಾಜ್ಯಸಭೆಯಲ್ಲಿ ಪ್ರಾರಂಭವಾಗುತ್ತದೆ. ಮಾತ್ರವಲ್ಲದೆ, ನೂತನ ಅಖಿಲಭಾರತ ಸೇವೆಯನ್ನು ಸೃಷ್ಟಿಸಲು ಸಂಸತ್ತಿಗೆ ಜವಾಬ್ದಾರಿ ವಹಿಸಲಿರುವ ಅಧಿಕಾರವು ರಾಜ್ಯಸಭೆಯಲ್ಲಿ ನಿಕ್ಷಿಪ್ತವಾಗಿದೆ.

ಲೋಕಸಭೆ ಮತ್ತು ರಾಜ್ಯಸಭೆ ವಿಶೇಷತೆಗಳನ್ನು ತಿಳಿದುಕೊಂಡಿರಲ್ಲವೆ? ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಲೋಕಸಭೆ | ರಾಜ್ಯಸಭೆ |
|---|---|
| ಕೆಳಮನೆ | ಮೇಲ್ಮನೆ |
| | |
| | |
| | |
| | |



ಕೇರಳದಲ್ಲಿ ಎಷ್ಟು ಲೋಕಸಭಾ ಕ್ಷೇತ್ರಗಳಿವೆ? ಅವುಗಳ ಹೆಸರುಗಳನ್ನು ಕಂಡುಹಿಡಿಯಿರಿ.

## ಭಾರತದಲ್ಲಿ ಕಾನೂನು ರಚನೆ

ಭಾರತದಲ್ಲಿ ಕಾನೂನುಗಳನ್ನು ರೂಪಿಸುವ ಅಧಿಕಾರವು ಸಂಸತ್ತಿನಲ್ಲಿ ನಿಕ್ಷಿಪ್ತವಾಗಿದೆ. ಕಾನೂನು ರಚನೆ ಪ್ರಕ್ರಿಯೆಯಲ್ಲಿ ಸಂವಿಧಾನದಲ್ಲಿ ಹೇಳಲ್ಪಟ್ಟದ್ದು ಮತ್ತು ಅನಂತರ ರೂಪುಗೊಂಡಿರುವ ಅನೇಕ ಕಾರ್ಯವಿಧಾನಗಳಿವೆ. ಕಾನೂನು ನಿರ್ಮಾಣವು ಕೇವಲ ತಾಂತ್ರಿಕ ಪ್ರಕ್ರಿಯೆ ಮಾತ್ರವಲ್ಲದೆ ರಾಜಕೀಯ ಪ್ರಕ್ರಿಯೆಯೂ ಆಗಿದೆ. ಕಾನೂನುಗಳೆಂಬುದು ಸಮಾಜ ವಿವಿಧ ಮೂಲಗಳಿಂದ ಲಭಿಸಿದ ಜನಾಭಿಪ್ರಾಯಗಳಿಗಿರುವ ಸರಕಾರದ ಪ್ರತಿಕ್ರಿಯೆಯಾಗಿದೆ.

ರಾಜಕೀಯ ಪಕ್ಷಗಳ ಚುನಾವಣಾ ಭರವಸೆಗಳನ್ನು ಈಡೇರಿಸುವುದಕ್ಕಾಗಿ ಮತ್ತು ಆಡಳಿತ ಪ್ರಕ್ರಿಯೆಯನ್ನು ಸುಗಮಗೊಳಿಸಲು ಕಾನೂನುಗಳನ್ನು ರಚನೆ ಮಾಡುತ್ತಾರೆ.

ಕಾನೂನು ರಚನೆಗೆ ಮಂತ್ರಿಮಂಡಲವು ಅಂಗೀಕಾರ ನೀಡಿದ ನಂತರ ಅದಕ್ಕೆ ಸಂಬಂಧಿಸಿದ ಸಚಿವಾಲಯದ ಮೇಲ್ನೋಟದಲ್ಲಿ ಹಾಗೂ ಸೂಚನೆಗಳ ಆಧಾರದಲ್ಲಿ ನೌಕರ ವೃಂದವು ಶಾಸನದ ಕರಡು ರೂಪವಾದ ಮಸೂದೆಯನ್ನು ತಯಾರಿಸುತ್ತದೆ.

ವಿವಿಧ ರೀತಿಯ ಮಸೂದೆಗಳಿವೆ. ಮಂತ್ರಿಗಳು ಮಂಡಿಸುವ ಮಸೂದೆಯೇ ಸರಕಾರದ ಮಸೂದೆಯಾಗಿದೆ. ಮಂತ್ರಿಗಳಲ್ಲದೆ ಸಂಸತ್ತಿನ ಸದಸ್ಯರು ಮಂಡಿಸುವ ಮಸೂದೆಯನ್ನು ಖಾಸಗಿ ಮಸೂದೆ ಎನ್ನುತ್ತಾರೆ. ಇದಲ್ಲದೆ ಸಾರ್ವಜನಿಕ ಖಜಾನೆಗಿರುವ ಹಣ ಸಂಗ್ರಹ ಮತ್ತು ಖರ್ಚುಗಳಿಗೆ ಸಂಬಂಧಿಸಿದ ಮಸೂದೆಗಳನ್ನು ಹಣಕಾಸುಮಸೂದೆ ಎನ್ನುತ್ತಾರೆ. ಹಣಕಾಸು ಮಸೂದೆಯನ್ನು ಮೊತ್ತಮೊದಲು ಲೋಕಸಭೆಯಲ್ಲಿ ಮಂಡಿಸುತ್ತಾರೆ. ಹಣಕಾಸು ಮಸೂದೆಗಳಲ್ಲದ ಮಸೂದೆಗಳನ್ನು ಹಣಕಾಸೇತರ ಮಸೂದೆಗಳೆನ್ನುತ್ತಾರೆ. ಸಂವಿಧಾನ ತಿದ್ದುಪಡಿ ಮಸೂದೆಗಳು ಮತ್ತು ಸಾಮಾನ್ಯ ಮಸೂದೆಗಳನ್ನು ಹಣಕಾಸೇತರ ಮಸೂದೆ ಎಂದು ಪರಿಗಣಿಸಲಾಗುತ್ತದೆ.

ಒಂದು ಮಸೂದೆಯು ಕಾನೂನಾಗಿ ಬದಲಾವಣೆಯಾಗುವ ವಿವಿಧ ಹಂತಗಳನ್ನು ಪರಿಚಯಿಸೋಣ.

**ಪ್ರಥಮ ವಾಚನ** - ಹಣಕಾಸು ಮಸೂದೆಯನ್ನು ಹೊರತುಪಡಿಸಿ ಇನ್ನಿತರ ಯಾವುದೇ ಮಸೂದೆಯನ್ನು ಸಚಿವರು ಅಥವಾ ಇತರ ಸದಸ್ಯರು ಸಾಮಾನ್ಯವಾಗಿ ಈ ಎರಡು ಸದನಗಳ ಪೈಕಿ ಯಾವುದಾದರೂ ಒಂದರಲ್ಲಿ ಮಂಡಿಸುತ್ತಾರೆ.

**ದ್ವಿತೀಯ ವಾಚನ** – ಈ ಹಂತದಲ್ಲಿ ಮಸೂದೆಯನ್ನು ಸಮಿತಿಯ ಪರಿಗಣನೆಗೆ ಕಳುಹಿಸುವುದೋಅಥವಾಸದನದಲ್ಲಿದ್ದೆಯೇಚರ್ಚಿಸಲಾಗುತ್ತದೆ. ಇದನ್ನು ಸಮಿತಿಯ ಹಂತ ಎಂದು ಕರೆಯುತ್ತಾರೆ. ಈ ಹಂತದಲ್ಲಿ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು ಮಾಡಲಾಗುತ್ತದೆ.

**ತೃತೀಯ ವಾಚನ** – ಸಂಸತ್ತಿನಲ್ಲಿ ಮಸೂದೆಯನ್ನು ಅಂಗೀಕರಿಸಬಹುದು ಅಥವಾ ನಿರಾಕರಿಸಬಹುದು.

ಮಸೂದೆಯನ್ನು ಮೊದಲು ಮಂಡಿಸಿದ ಸದನದಲ್ಲಿ ಕಾರ್ಯವಿಧಾನವು ಪೂರ್ಣಗೊಂಡ ನಂತರ ಎರಡನೇ ಸದನದಲ್ಲಿ ಅದೇ ಪ್ರಕ್ರಿಯೆ ಪುನರಾವರ್ತಿತವಾಗುತ್ತದೆ. ಉಭಯ ಸದನಗಳು ಅಂಗೀಕರಿಸಿದರೆ ಮಸೂದೆಯನ್ನು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳುಹಿಸಲಾಗುತ್ತದೆ. ರಾಷ್ಟ್ರಪತಿಗಳು ಸಹಿ ಮಾಡುವುದರ ಮೂಲಕ ನಂತರ ಮಸೂದೆ ಕಾನೂನು ಆಗಿ ಪರಿವರ್ತನೆಗೊಳ್ಳುತ್ತದೆ.

## ಸಂವಿಧಾನದ ತಿದ್ದುಪಡಿ

ಸಂವಿಧಾನದ 61 ನೇ ತಿದ್ದುಪಡಿಯ ಅಂಗೀಕಾರ: 18 ವರ್ಷ ಪೂರ್ತಿಯಾದವರು ಇನ್ನು ಮುಂದೆ ಚುನಾವಣೆಯಲ್ಲಿ ಮತದಾನ ಮಾಡಬಹುದು.

ಸಂವಿಧಾನದ 86 ನೇ ತಿದ್ದುಪಡಿಗೆ ರಾಷ್ಟ್ರಪತಿಗಳ ಅಂಗೀಕಾರ : ಶಿಕ್ಷಣವು ನಮಗಿನ್ನು ಮೂಲಭೂತ ಹಕ್ಕು.

101 ನೇ ತಿದ್ದುಪಡಿಯ ಪ್ರಕಾರ ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ಜಾರಿಗೆ ಬಂತು.

ಮೇಲೆ ಕೊಡಲಾದ ವಾರ್ತಾ ಶೀರ್ಷಿಕೆಗಳನ್ನು ಗಮನಿಸಿರಿ – ಸಾಂವಿಧಾನದ ತಿದ್ದುಪಡಿಯ ಆವಶ್ಯಕತೆಗಳನ್ನು ಚರ್ಚಿಸಿರಿ.

ಸಂವಿಧಾನದಲ್ಲಿ ತಿದ್ದುವಿಕೆ, ಹೊರತುಪಡಿಸುವಿಕೆ ಮತ್ತು ಸೇರ್ಪಡೆಗೊಳಿಸುವಿಕೆ ಮಾಡುವುದನ್ನು ಸಂವಿಧಾನ ತಿದ್ದುಪಡಿ ಎನ್ನುತ್ತಾರೆ. ತಿದ್ದುಪಡಿ ಪ್ರಕ್ರಿಯೆಯು ಸಾಮಾಜಿಕ ಮತ್ತು ರಾಜಕೀಯ ಅಗತ್ಯಗಳನ್ನು ಪರಿಗಣಿಸಿ ಕಾಲಕ್ಕನುಸಾರವಾಗಿ ಸಂವಿಧಾನದಲ್ಲಿ ಬದಲಾವಣೆ ತರಲು ತಿದ್ದುಪಡಿ ಪ್ರಕ್ರಿಯೆ ಸಹಾಯ ಮಾಡುತ್ತದೆ. ಭಾರತದ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿನಲ್ಲಿ ಮಾತ್ರ ನಿಕ್ಷಿಪ್ತವಾಗಿದೆ. ಸಂವಿಧಾನದ 368 ನೇ ವಿಧಿಯ ಪ್ರಕಾರ ತಿದ್ದುಪಡಿ ಮಾಡುವ ಅಧಿಕಾರವು ಸಂಸತ್ತಿಗೆ ಲಭಿಸಿತು. ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿಯವರ ಪೂರ್ವಾನುಮತಿ ಅಗತ್ಯವಿಲ್ಲ. ಸಂವಿಧಾನದ ತಿದ್ದುಪಡಿ ಮಸೂದೆಯು ಕಾನೂನು ಆಗಬೇಕಾದರೆ ಉಭಯ ಸದನಗಳ ಅಂಗೀಕಾರ ಅತ್ಯಗತ್ಯ. ಸಂವಿಧಾನದ ತಿದ್ದುಪಡಿ ಮಸೂದೆಗೆ ಸಂಬಂಧಿಸಿದ ವಿವಾದಗಳನ್ನು ಪರಿಹರಿಸಲು ಉಭಯ ಸದನಗಳ ನಡುವೆ ಜಂಟಿಅಧಿವೇಶನದಂತಹ ಯಾವುದೇ ಕಾರ್ಯವಿಧಾನ ಇಲ್ಲ. ಸಂವಿಧಾನದ ಯಾವುದೇ ತಿದ್ದುಪಡಿ ಕಾಯ್ದೆಯು ಸಂವಿಧಾನದ ಪದಗಳು ಅಥವಾ ಮೂಲ ಆಶಯಗಳಿಗೆ ವಿರುದ್ಧವಾಗಿದೆ ಎಂದು ಕಂಡುಬಂದರೆ ಅದನ್ನು ಅಸಿಂಧುಗೊಳಿಸುವ ಅಧಿಕಾರವು ನ್ಯಾಯಾಂಗಕ್ಕೆ ಇದೆ.

ಭಾರತ ಸಂವಿಧಾನವು ಸೂಚಿಸಿರುವ ತಿದ್ದುಪಡಿಯ ವಿವಿಧ ವಿಧಾನಗಳನ್ನು ಪರಿಚಯಿಸೋಣ.

## ತಿದ್ದುಪಡಿ ವಿಧಾನಗಳು

### ಸರಳ ತಿದ್ದುಪಡಿ

ಭಾರತದ ಸಂವಿಧಾನದ ಕೆಲವು ಭಾಗಗಳನ್ನು ಸಂಸತ್ತಿಗೆ ಸಾಮಾನ್ಯ ಕಾನೂನಿನಂತೆಯೇ ಸರಳ ಬಹುಮತದ ಮೂಲಕ ತಿದ್ದುಪಡಿ ಮಾಡಬಹುದು.

ಉದಾ : ರಾಜ್ಯಗಳ ಹೆಸರು, ಗಡಿಗಳು, ಪೌರತ್ವ ಮೊದಲಾದವುಗಳು.

### ವಿಶೇಷ ತಿದ್ದುಪಡಿ

ಕೆಲವು ಪ್ರಮುಖ ಭಾಗಗಳಲ್ಲಿ ತಿದ್ದುಪಡಿ ತರಲು ಸಂಸತ್ತಿನ ಎರಡು ಸಭೆಗಳ ವಿಶೇಷ ಬಹುಮತದ ಅಗತ್ಯವಿದೆ.

ಉದಾ : ಮೂಲಭೂತ ಹಕ್ಕುಗಳು, ನಿರ್ದೇಶಕ ತತ್ವಗಳು ಮೊದಲಾದವುಗಳು.

### ಅತಿ ವಿಶೇಷ ತಿದ್ದುಪಡಿ

ಕೆಲವು ಅತಿ ಪ್ರಮುಖವಾದ ವಿಷಯಗಳನ್ನು ಸಂಸತ್ತಿನ ಎರಡು ಸದನಗಳ ವಿಶೇಷ ಬಹುಮತದೊಂದಿಗೆ ಅರ್ಧಕ್ಕಿಂತಲೂ ಕಡಿಮೆಯಾಗದೆ ರಾಜ್ಯಗಳ ಅಂಗೀಕಾರದೊಂದಿಗೆ ಮಾತ್ರವೇ ತಿದ್ದುಪಡಿ ಮಾಡಲು ಸಾಧ್ಯ.

ಉದಾ : ಕೇಂದ್ರ - ರಾಜ್ಯ ಅಧಿಕಾರ ವಿಭಜನೆ, ಜನ ಪ್ರಾತಿನಿಧ್ಯ ವ್ಯವಸ್ಥೆ ಮೊದಲಾದವುಗಳು.

ಭಾರತದ ಸಂವಿಧಾನದ ಮೂರು ವಿಧದ ತಿದ್ದುಪಡಿಗಳನ್ನು ಪರಿಚಯಿಸಿಕೊಂಡಿರಲ್ಲವೇ. ಅದರ ಆಧಾರದಲ್ಲಿ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ವಿಷಯಗಳು | ತಿದ್ದುಪಡಿ |
|---|---|
| ರಾಜ್ಯಗಳ ಹೆಸರಿನ ಬದಲಾವಣೆ | |
| 86 ನೇ ಸಂವಿಧಾನ ತಿದ್ದುಪಡಿ | |
| ಸಮವರ್ತಿ ಪಟ್ಟಿಯಲ್ಲಿ ತಿದ್ದುಪಡಿ ಮಾಡುವುದು | |

ನಮ್ಮ ಸಂವಿಧಾನವು ತಿದ್ದುಪಡಿಗಳ ಮೂಲಕ ಕಾಲಕ್ಕನುಗುಣವಾದ ಬದಲಾವಣೆಗಳನ್ನು ಅಳವಡಿಸಿಕೊಂಡು ಸಜೀವ ಸಂವಿಧಾನವಾಗಿ ವಿಕಾಸಗೊಳ್ಳುತ್ತಿದೆ. ಸಂಸತ್ತಿನ ಕಾನೂನು ನಿರ್ಮಾಣ ಪ್ರಕ್ರಿಯೆ ನಮಗೆ ಪರಿಚಯವಾಯಿತಲ್ಲವೇ. ಸಂಸತ್ತು ಅಂಗೀಕರಿಸಿರುವ ಕಾನೂನುಗಳನ್ನು ಕಾರ್ಯಾಂಗವು ಜ್ಯಾರಿಗೊಳಿಸುತ್ತದೆ.

## ಕಾರ್ಯಾಂಗ ವಿಭಾಗ (Executive)

ಕಾನೂನು ಮತ್ತು ನೀತಿಗಳ ಜಾರಿಗೊಳಿಸುವಿಕೆ, ಆಡಳಿತ ನಿರ್ವಹಣೆ ಮುಂತಾದ ಜವಾಬ್ದಾರಿಯನ್ನು ನಿರ್ವಹಿಸುವ ಸರಕಾರದ ಅಂಗವೇ ಕಾರ್ಯಾಂಗ ವಿಭಾಗವಾಗಿದೆ. ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿಯ ನೇತೃತ್ವದಲ್ಲಿರುವ ಮಂತ್ರಿಮಂಡಲ ಮುಂತಾದುವುಗಳನ್ನು ಒಳಗೊಂಡಿರುವುದೇ ಕಾರ್ಯಾಂಗ. ಭಾರತದ ಸಂವಿಧಾನದ ಪ್ರಕಾರ ಕಾರ್ಯಾಂಗದ ಅಧಿಕಾರವು ರಾಷ್ಟ್ರಪತಿಯವರಲ್ಲಿ ನಿಕ್ಷಿಪ್ತವಾಗಿದ್ದರೂ ಅದನ್ನು ನಿರ್ವಹಿಸುವುದು ಪ್ರಧಾನಮಂತ್ರಿಯ ನೇತೃತ್ವದ ಮಂತ್ರಿಮಂಡಲವಾಗಿದೆ.



ಮೇಲೆ ಕೊಟ್ಟಿರುವ ಫ್ಲೋಚಾರ್ಟ್‌ನ್ನು ಗಮನಿಸಿದಿರಲ್ಲವೇ. ಇವುಗಳನ್ನು ಒಂದೊಂದಾಗಿ ಪರಿಚಯಿಸೋಣ.

## ರಾಜಕೀಯ ಕಾರ್ಯಾಂಗ (Political Executive)



ಡಾ| ರಾಜೇಂದ್ರಪ್ರಸಾದ್
(ಭಾರತದ ಪ್ರಥಮ ರಾಷ್ಟ್ರಪತಿ)

ರಾಜಕೀಯ ಕಾರ್ಯಾಂಗವು ರಾಷ್ಟ್ರಪತಿ, ಉಪರಾಷ್ಟ್ರಪತಿ, ಸರಕಾರದ ನೇತೃತ್ವ ವಹಿಸುವ ಪ್ರಧಾನಮಂತ್ರಿ, ಸಚಿವರು ಮೊದಲಾದವರನ್ನು ಒಳಗೊಂಡಿದೆ. ರಾಷ್ಟ್ರಪತಿ ಸಾಂವಿಧಾನಿಕವಾಗಿ ಕಾರ್ಯಾಂಗದ ಮುಖ್ಯಸ್ಥರಾಗಿದ್ದಾರೆ. ಆದರೆ ರಾಷ್ಟ್ರಪತಿಯವರು, ಪ್ರಧಾನಿ ಮತ್ತು ಅವರ ನೇತೃತ್ವದ ಮಂತ್ರಿಮಂಡಲ ನೀಡುವ ಸಲಹೆಯಂತೆ ಕಾರ್ಯನಿರ್ವಹಿಸಬೇಕು. ಅದೇ ಸಮಯದಲ್ಲಿ ರಾಷ್ಟ್ರಪತಿಯವರಿಗೆ ಸ್ವಂತ ವಿವೇಚನ ಅಧಿಕಾರವನ್ನು ಬಳಸಿಕೊಂಡು ಕಾರ್ಯನಿರ್ವಹಿಸಬಹುದಾದ ಸಂದರ್ಭಗಳಿವೆ.

### ರಾಷ್ಟ್ರಪತಿ (President)

ರಾಷ್ಟ್ರಪತಿಯವರು ಭಾರತದ ಕಾರ್ಯಾಂಗದ ಮುಖ್ಯಸ್ಥರಾಗಿದ್ದಾರೆ. ಮೂವತ್ತೈದು ವಯಸ್ಸು ಪೂರ್ತಿಯಾದ ಭಾರತೀಯ ಪೌರನಿಗೆ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹತೆ ಇದೆ. ಸಂಸತ್ತಿನ ಉಭಯ ಸದನಗಳು ಮತ್ತು ರಾಜ್ಯಶಾಸಕಾಂಗಗಳ ಚುನಾಯಿತ ಸದಸ್ಯರನ್ನು ಒಳಗೊಂಡಿರುವ ಇಲೆಕ್ಟೋರಲ್ ಕಾಲೇಜು ರಾಷ್ಟ್ರಪತಿಯವರನ್ನು ಆಯ್ಕೆ ಮಾಡುತ್ತದೆ. ರಾಷ್ಟ್ರಪತಿಯ ಅಧಿಕಾರ ಅವಧಿ ಐದು ವರ್ಷ. ಸಂಸತ್ತಿನ ಅಧಿವೇಶನವನ್ನು ಕರೆಯುವುದು, ಲೋಕಸಭೆ ವಿಸರ್ಜಿಸುವುದು, ಪ್ರಧಾನಮಂತ್ರಿ ಮತ್ತು ಸಚಿವ ಸಂಪುಟವನ್ನು ನೇಮಿಸುವುದು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟಿನ ನ್ಯಾಯಾಧೀಶರನ್ನು ನೇಮಿಸುವುದು, ರಾಜ್ಯಪಾಲರನ್ನು ನೇಮಿಸುವುದು, ತುರ್ತು ಪರಿಸ್ಥಿತಿ ಘೋಷಿಸುವುದು ಇತ್ಯಾದಿಗಳು ರಾಷ್ಟ್ರಪತಿಯವರ ಜವಾಬ್ದಾರಿಗಳಾಗಿವೆ. ರಾಷ್ಟ್ರಪತಿಯವರು ಉಪರಾಷ್ಟ್ರಪತಿಗೆ ತಮ್ಮ ರಾಜಿನಾಮೆಯನ್ನು ಸಲ್ಲಿಸುತ್ತಾರೆ. ರಾಷ್ಟ್ರಪತಿಯವರ ಅನುಪಸ್ಥಿತಿಯಲ್ಲಿ ಉಪರಾಷ್ಟ್ರಪತಿಯವರು ಈ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. ರಕ್ಷಣಾ ಪಡೆಗಳ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುವುದು ಮೊದಲಾದವುಗಳು ರಾಷ್ಟ್ರಪತಿಯವರ ಜವಾಬ್ದಾರಿಗಳಾಗಿವೆ.

### ಪ್ರಧಾನಮಂತ್ರಿ (Prime Minister)

ದೇಶದ ಆಡಳಿತ ಮುಖ್ಯಸ್ಥನಾಗಿರುವ ಪ್ರಧಾನಮಂತ್ರಿಯು ಲೋಕಸಭೆಯಲ್ಲಿ ಬಹುಮತ ಹೊಂದಿರುವ ಪಕ್ಷದ, ಒಕ್ಕೂಟದ ಮತ್ತು ದೇಶದ ಪ್ರಮುಖ ನೇತಾರರಾಗಿದ್ದಾರೆ. ಮಂತ್ರಿಮಂಡಲವನ್ನು ರೂಪಿಸುವುದು, ಮಂತ್ರಿಮಂಡಲ ಮತ್ತು ಸಂಪುಟದ ಸದಸ್ಯರನ್ನು ನಿಶ್ಚಯಿಸುವುದು ಪ್ರಧಾನಮಂತ್ರಿಯಾಗಿದ್ದಾರೆ. ಖಾತೆಯನ್ನು ಬದಲಾಯಿಸುವುದು, ಸಂಪುಟದ ಮತ್ತು ಮಂತ್ರಿಮಂಡಲಕ್ಕೆ ಸದಸ್ಯರನ್ನು ಸೇರಿಸುವುದು ಹಾಗೂ ತೆಗೆದುಹಾಕುವ ಅಧಿಕಾರ ಪ್ರಧಾನಮಂತ್ರಿಗಿದೆ. ರಾಷ್ಟ್ರಪತಿ, ಮಂತ್ರಿಮಂಡಲ ಮತ್ತು ಸಂಸತ್ತಿನ ನಡುವಿನ ಕೊಂಡಿಯಾಗಿ ಪ್ರಧಾನಮಂತ್ರಿಯು ಕಾರ್ಯನಿರ್ವಹಿಸುತ್ತಾರೆ. ಲೋಕಸಭೆಯಲ್ಲಿ ಐದು ವರ್ಷ ಕಾಲಾವಧಿಗಿಂತ ಮೊದಲು ಪ್ರಧಾನಮಂತ್ರಿ ಬಹುಮತ ಕಳೆದುಕೊಂಡರೆ ರಾಷ್ಟ್ರಪತಿಗೆ ರಾಜಿನಾಮೆ ಸಲ್ಲಿಸಿ ಸ್ಥಾನವನ್ನು ತೆರವುಗೊಳಿಸಬೇಕು.

ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದವುಗಳ ಎದುರು (✓) ತಪ್ಪಾದವುಗಳ ಎದುರು (×) ಗುರುತಿಸಿರಿ.

- ಪ್ರಧಾನಮಂತ್ರಿಯು ಕಾರ್ಯಾಂಗದ ಮುಖ್ಯಸ್ಥರಾಗಿದ್ದಾರೆ. ☐
- ರಾಷ್ಟ್ರಪತಿಯವರಿಗೆ ವಿವೇಚನಾ ಅಧಿಕಾರವಿದೆ. ☐
- ಪ್ರಧಾನಮಂತ್ರಿ ಮಂತ್ರಿಮಂಡಲದ ಮುಖ್ಯಸ್ಥರಾಗಿದ್ದಾರೆ. ☐
- ಪ್ರಧಾನ ಮಂತ್ರಿಯು ರಕ್ಷಣಾ ಪಡೆಗಳ ಮುಖ್ಯ ಸೇನಾಧಿಪತಿಯಾಗಿದ್ದಾರೆ. ☐
- ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಿಸುತ್ತಾರೆ. ☐
- ರಾಷ್ಟ್ರಪತಿಯವರು ಪ್ರಧಾನಮಂತ್ರಿಗೆ ರಾಜೀನಾಮೆಯನ್ನು ಸಲ್ಲಿಸುತ್ತಾರೆ. ☐
- ರಾಜ್ಯಪಾಲರು ಪ್ರಧಾನಮಂತ್ರಿಯನ್ನು ನೇಮಿಸುತ್ತಾರೆ. ☐

ಮಂತ್ರಿಮಂಡಲವು ರಾಷ್ಟ್ರಪತಿಯವರಿಗೆ ಆಡಳಿತದಲ್ಲಿ ಸಹಾಯ ಮಾಡುವ ಸಮಿತಿಯಾಗಿದೆ. ಇದರ ಪ್ರಮುಖ ಮುಖ್ಯಸ್ಥ ಪ್ರಧಾನಮಂತ್ರಿ ಆಗಿದ್ದಾರೆ. ಮಂತ್ರಿಮಂಡಲದ ಪ್ರಮುಖ ಜವಾಬ್ದಾರಿಗಳನ್ನು ಪರಿಶೀಲಿಸೋಣ.

## ಮಂತ್ರಿಮಂಡಲದ ಜವಾಬ್ದಾರಿಗಳು



## ಖಾಯಂ ಕಾರ್ಯಾಂಗ (Permanent Executive)

ಸರಕಾರದ ದೈನಂದಿನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು, ಮುಂಗಡ ಪತ್ರವೂ ಒಳಗೊಂಡಂತೆ ಮಸೂದೆಗಳ ರೂಪೀಕರಣದಲ್ಲಿ ರಾಜಕೀಯ ಕಾರ್ಯಾಂಗಕ್ಕೆ ಸಹಾಯ ಮಾಡುವುದು ನೌಕರವೃಂದ (**Bureacracy**) ಎಂದು ಕರೆಯಲ್ಪಡುವ ಉದ್ಯೋಗಿಗಳ ವೃಂದವಾಗಿದೆ. ಇವರು ಅರ್ಹತೆಯ ಆಧಾರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಗೊಳ್ಳುವರಲ್ಲದೆ ತರಬೇತಿ ಲಭಿಸುವ ಮೂಲಕ ಪರಿಣತಿ ಹೊಂದಿರುವವರಾಗಿದ್ದಾರೆ. ನಿವೃತ್ತಿಯಾಗುವವರೆಗೆ ಸರಕಾರದ ಹುದ್ದೆಯಲ್ಲಿ ಇರುವುದರಿಂದ ಇವರನ್ನು 'ಖಾಯಂ ಕಾರ್ಯಾಂಗ' ಎಂದು ಕರೆಯುತ್ತಾರೆ.

## ನ್ಯಾಯಾಂಗ ವ್ಯವಸ್ಥೆ (Judiciary)





ನ್ಯಾಯಾಂಗವು ಎಂಬುದು ಮೇಲೆ ಹೇಳಲಾದ ಶಾಸಕಾಂಗ ಮತ್ತು ಕಾರ್ಯಾಂಗಗಳು ಸಂವಿಧಾನಕ್ಕನುಗುಣವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಖಾತರಿಪಡಿಸುವ ವ್ಯವಸ್ಥೆಯಾಗಿದೆ. ಇದು ಪೌರರ ಹಕ್ಕುಗಳನ್ನು ಸಂರಕ್ಷಿಸುವುದರೊಂದಿಗೆ ಸಂವಿಧಾನದ ಮೌಲ್ಯಗಳನ್ನೂ ಸಂರಕ್ಷಿಸುತ್ತದೆ. ಆದುದರಿಂದ ನ್ಯಾಯಾಂಗ ವ್ಯವಸ್ಥೆಯನ್ನು ಸಂವಿಧಾನದ 'ಸಂರಕ್ಷಕ' ಎಂದು ಬಣ್ಣಿಸುತ್ತಾರೆ. ಕಾರ್ಯದಕ್ಷತೆಯಿಂದ ಕೂಡಿದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸ್ವತಂತ್ರವೂ ನಿಷ್ಪಕ್ಷವೂ ಆದ ನ್ಯಾಯಾಂಗ ವ್ಯವಸ್ಥೆಯು ಅನಿವಾರ್ಯವಾಗಿದೆ.




"ನೋಡು ಅಮ್ಮು... ಸುಪ್ರೀಂಕೋರ್ಟಿನ ನೇತೃತ್ವದಲ್ಲಿ ಏಕರೂಪದ ನ್ಯಾಯಾಂಗ ವ್ಯವಸ್ಥೆ ಭಾರತದಲ್ಲಿದೆ. ಪಿರಮಿಡ್ಡ್‌ನ ರೂಪದಲ್ಲಿ ಕ್ರಮೀಕರಿಸಲಾದ ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಮೇಲಿನ ಹಂತಕ್ಕೆ ಹೋದಂತೆ ನ್ಯಾಯಾಲಯಗಳ ಸಂಖ್ಯೆ ಕಡಿಮೆಯಾಗುತ್ತವೆ ಮತ್ತು ಅಧಿಕಾರ ಹೆಚ್ಚುತ್ತದೆ. ಕೆಳ ಹಂತಕ್ಕೆ ಬಂದಾಗ ನ್ಯಾಯಾಲಯಗಳ ಸಂಖ್ಯೆ ಹೆಚ್ಚಾಗುತ್ತದೆ ಹಾಗೂ ಅಧಿಕಾರ ಕಡಿಮೆ ಆಗುತ್ತದೆ."



## ಸುಪ್ರೀಂಕೋರ್ಟ್ (Supreme Court)

ಭಾರತದ ಪರಮೋಚ್ಛ ನ್ಯಾಯಾಲಯವಾದ ಸುಪ್ರೀಂಕೋರ್ಟ್ 1950 ಜನವರಿ 28 ರಂದು ಅಸ್ತಿತ್ವಕ್ಕೆ ಬಂತು. ಇದರ ಪ್ರಧಾನ ಕಛೇರಿಯು ದೆಹಲಿಯಲ್ಲಿದೆ. ಸುಪ್ರೀಂಕೋರ್ಟಿನ ನ್ಯಾಯಾಧೀಶರ ನಿವೃತ್ತಿ ವಯಸ್ಸು 65 ಆಗಿದೆ. ನ್ಯಾಯಧೀಶರನ್ನು ಅಧಿಕಾರ ಕಾಲಾವಧಿಗಿಂತ ಮೊದಲೇ ವಜಾಗೊಳಿಸುವ ಅಧಿಕಾರವು ಸಂಸತ್ತಿಗಿದೆ. ರಾಷ್ಟ್ರಪತಿಯವರು ಮುಖ್ಯ ನ್ಯಾಯಧೀಶರಿಗೆ ಹಾಗೂ ಇತರ ನ್ಯಾಯಧೀಶರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸುತ್ತಾರೆ ಮತ್ತು ಅವರ ರಾಜಿನಾಮೆಯನ್ನು ಸ್ವೀಕರಿಸುತ್ತಾರೆ. ಸುಪ್ರೀಂಕೋರ್ಟ್ ವಿವಿಧ ರೀತಿಯ ಕಾನೂನು ವಿವಾದಗಳಿಗೆ ಪರಿಹಾರಗಳನ್ನು ನೀಡುವುದರೊಂದಿಗೆ ಸಂವಿಧಾನದ ಪರಮೋನ್ನತ ವ್ಯಾಖ್ಯಾನಕಾರ ಮತ್ತು ಮೂಲಭೂತ ಹಕ್ಕುಗಳ ಸಂರಕ್ಷಕನಾಗಿ ಕಾರ್ಯನಿರ್ವಹಿಸುತ್ತದೆ.

## ಸುಪ್ರೀಂಕೋರ್ಟ್‌ನ ಅಧಿಕಾರಗಳು

- **ಮೂಲಾಧಿಕಾರ :** ಸುಪ್ರೀಂಕೋರ್ಟಿನಿಂದ ಮಾತ್ರ ಪರಿಹರಿಸಲು ಸಾಧ್ಯವಿರುವ ವಿಷಯಗಳು ಮೂಲಾಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ. ಉದಾ: ಕೇಂದ್ರ–ರಾಜ್ಯ ವಿವಾದಗಳು.
- **ಮೇಲ್ಮನವಿಯನ್ನು ಪರಿಗಣಿಸಲಿರುವ ಅಧಿಕಾರ :** ಸುಪ್ರೀಂಕೋರ್ಟ್ ಅತ್ಯುನ್ನತ ಮೇಲ್ಮನವಿ ನ್ಯಾಯಾಲಯವಾಗಿದೆ. ಆದುದರಿಂದ ದೇಶದ ಯಾವುದೇ ಕೆಳ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿಗಳನ್ನು ಪರಿಗಣಿಸುವ ಅಧಿಕಾರವನ್ನು ಸುಪ್ರೀಂಕೋರ್ಟ್ ಹೊಂದಿದೆ.
- **ಸಲಹೆ ನೀಡುವ ಅಧಿಕಾರ :** ರಾಷ್ಟ್ರಪತಿ ಅಪೇಕ್ಷಿಸುವ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿ ಕಾನೂನು ಸಲಹೆ ನೀಡಲು ಸುಪ್ರೀಂಕೋರ್ಟ್ ಸಾಂವಿಧಾನಿಕ ಜವಾಬ್ದಾರಿಯನ್ನು ಹೊಂದಿದೆ.
- **ರಿಟ್ ಅಧಿಕಾರ :** ಮೂಲಭೂತ ಹಕ್ಕುಗಳು ಉಲ್ಲಂಘನೆ ಯಾದಾಗ ಅವುಗಳನ್ನು ಸಂರಕ್ಷಿಸಲು ರಿಟ್ ಗಳ ರೂಪದಲ್ಲಿ ವಿಶೇಷ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ಸುಪ್ರೀಂಕೋರ್ಟ್ ಹೊಂದಿದೆ.
- **ಪುನರಾವಲೋಕನ ಅಧಿಕಾರ :** ನ್ಯಾಯಾಂಗ ಪುನರವಲೋಕನ ಅಧಿಕಾರವು ಸಂವಿಧಾನದ ಸಂರಕ್ಷಕನೆಂಬ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ನ್ಯಾಯಾಂಗ ವ್ಯವಸ್ಥೆಗೆ ಹೆಚ್ಚಿನ ಬಲವನ್ನು ನೀಡುತ್ತದೆ.

### ನ್ಯಾಯಾಂಗ ಪುನರಾವಲೋಕನ (Judicial Reveiw)

ಸಂಸತ್ತು ಅಂಗೀಕರಿಸುವ ಕಾನೂನುಗಳು ಮತ್ತು ಕಾರ್ಯಾಂಗವು ಹೊರಡಿಸುವ ಆಜ್ಞೆಗಳ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಲು ಮತ್ತು ಅವುಗಳು ಸಂವಿಧಾನದ ಪದಗಳಿಗೆ ಅಥವಾ ಅರ್ಥಗಳಿಗೆ ವಿರುದ್ಧವಾಗಿದೆ ಎಂದು ಸ್ಪಷ್ಟವಾದರೆ ಅವುಗಳನ್ನು ಸಂವಿಧಾನ ವಿರುದ್ಧ ಎಂದು ಘೋಷಿಸಲಿರುವ ಸುಪ್ರೀಂಕೋರ್ಟಿನ ಪ್ರತ್ಯೇಕ ಅಧಿಕಾರವನ್ನು ನ್ಯಾಯಾಂಗ ಪುನರಾವಲೋಕನ ಅಧಿಕಾರ ಎಂದು ಕರೆಯುತ್ತಾರೆ.

## ಪರಸ್ಪರ ನಿಯಂತ್ರಣಗಳು ಮತ್ತು ಅಧಿಕಾರ ಸಮತೋಲನಗಳು (Checks and Balances)

ಸಾಂವಿಧಾನಾತ್ಮಕವಾಗಿ ಸರಕಾರವನ್ನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಂಬ ಮೂರು ಅಂಗಗಳಾಗಿ ವಿಭಜಿಸಲಾಗಿದೆ. ಆದರೂ ಇವುಗಳ ನಡುವೆ ತಾರ್ಕಿಕವಾಗಿ ಪರಸ್ಪರ ನಿಯಂತ್ರಣ, ಸಮನ್ವಯ, ಅಧಿಕಾರ ಹಂಚಿಕೆಯ ಸಮತೋಲನವನ್ನು ತರಲು ನಮ್ಮ ಸಂವಿಧಾನವು ಗಮನಹರಿಸಿದೆ.

ST-421-11-SOC. SCI.-I (K)-9-VOL-1

ಕೆಳಗೆ ಕೊಟ್ಟಿರುವ ಡಯಾಗ್ರಂನ್ನು ನಿರೀಕ್ಷಿಸಿರಿ.




ಭಾರತದ ಸಂವಿಧಾನವು ಪ್ರಜಾಪ್ರಭುತ್ವ ಎಂಬ ಆಡಳಿತ ವ್ಯವಸ್ಥೆಯನ್ನು, ಮೌಲ್ಯವನ್ನು, ರಾಷ್ಟ್ರ ಕಲ್ಪನೆಯೊಂದಿಗೆ ದೃಢಪಡಿಸುತ್ತದೆ. ಆಡಳಿತ ಕೇಂದ್ರೀಕರಣವನ್ನು ಹೊರತುಪಡಿಸುವುದಕ್ಕಾಗಿ ಹಾಗೂ ಸ್ವೇಚ್ಛಾಧಿಪತ್ಯವನ್ನು ತಡೆಗಟ್ಟುವುದಕ್ಕಾಗಿ, ಪ್ರಜಾಪ್ರಭುತ್ವವನ್ನು ರಕ್ಷಿಸುವುದಕ್ಕಾಗಿ ಸರಕಾರದ ಅಧಿಕಾರವನ್ನು ಮೂರು ವಿಭಾಗಗಳಾಗಿ ವಿಭಜಿಸಲಾಗಿದೆ. ಸ್ವಾತಂತ್ರ್ಯ ಹೋರಾಟದ ಉದ್ದೇಶಗಳು ಹಾಗೂ ಆಕಾಂಕ್ಷೆಗಳು ಸಂವಿಧಾನವು ಎತ್ತಿಹಿಡಿಯುವ ಮೌಲ್ಯ ಹಾಗೂ ದೃಷ್ಟಿಕೋನಗಳಿಗೆ ಅನುಸಾರವಾಗಿ ಸರಕಾರದ ವಿವಿಧ ವಿಭಾಗಗಳ ಮೂಲಕ ಜಾರಿಗೊಳಿಸುವ ಪ್ರಯತ್ನವನ್ನು ನಮ್ಮ ರಾಷ್ಟ್ರದಲ್ಲಿ ಸಂವಿಧಾನದ ಮೂಲಕ ಮಾಡಲಾಗಿದೆ.

## ಮುಂದುವರಿದ ಚಟುವಟಿಕೆಗಳು

- 'ಭಾರತದ ಫೆಡರಲಿಸಂನ ವಿಶೇಷತೆಗಳು' ಎಂಬ ವಿಷಯದಲ್ಲಿ ವಿಚಾರಗೋಷ್ಠಿಯನ್ನು ಆಯೋಜಿಸಿರಿ.
- ಸಂವಿಧಾನದ ಅಧಿಕಾರ ಪಟ್ಟಿಯಲ್ಲಿರುವ ಮೂರು ಪಟ್ಟಿಗಳಲ್ಲಿ ಪ್ರಸ್ತುತ ಎಷ್ಟು ವಿಷಯಗಳಿವೆ ಎಂದು ಗ್ರಂಥಾಲಯದ ಸಹಾಯದಿಂದ ಕಂಡುಹಿಡಿಯಿರಿ.
- ಶಾಸನ ನಿರ್ಮಾಣ ಪ್ರಕ್ರಿಯೆಯ ವಿವಿಧ ಹಂತಗಳು ಒಳಗೊಳ್ಳುವ ರೀತಿಯಲ್ಲಿ ಮಾದರಿ ಸಂಸತ್ತನ್ನು ತರಗತಿಯಲ್ಲಿ ಆಯೋಜಿಸಿರಿ.
- ಸುಪ್ರೀಂಕೋರ್ಟಿನ ಅಧಿಕಾರಗಳು – ಎಂಬ ವಿಷಯದ ಕುರಿತು ಕಾನೂನು ತಜ್ಞರೊಂದಿಗೆ ಸಂದರ್ಶನ ನಡೆಸಿರಿ.

# 5 ಭಾರತದ ಜನಸಂಖ್ಯಾ ಒಲವುಗಳು



ಭಾರತದ ಅಮಿತ ಜನಸಂಖ್ಯೆ: ಜನಸಂಖ್ಯೆ ಮತ್ತು ಆಹಾರ ಉತ್ಪಾದನಾ ಸಾಮರ್ಥ್ಯ ಪರಸ್ಪರ ಮುಖಾಮುಖಿ

ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವ ಭಾರತದ ಜನಸಂಖ್ಯೆಯು ಬಡತನದ ಹೆಚ್ಚಳ ಮತ್ತು ಪೋಷಕಹಾರದ ಕೊರತೆಯನ್ನು ಎದುರಿಸುತ್ತಿದೆ.

ಅತೀ ಹೆಚ್ಚು ಜನಸಂಖ್ಯೆಯಿರುವ ದೇಶ : ಭಾರತ ಸಂತೋಷ ಪಡುವುದೇ? ಅಥವಾ ಗಾಬರಿಗೊಳ್ಳುವುದೇ?

ಭಾರತದ ಜನಸಂಖ್ಯೆ : ನಿರುದ್ಯೋಗ ಸಮಸ್ಯೆ ಲಕ್ಷಾಂತರ ಜನರನ್ನು ದೊಡ್ಡ ನಗರಗಳೆಡೆಗೆ ಕೊಂಡೊಯ್ಯುತ್ತದೆ.

ಜನಸಂಖ್ಯೆಯ ಹೆಚ್ಚಳವು ಆರೋಗ್ಯ ರಂಗದಲ್ಲಿ ಹಾಗೂ ಜೀವನ ಗುಣಮಟ್ಟದಲ್ಲೂ ದೂರವ್ಯಾಪಕವಾದ ಸಂದಿಗ್ಧತೆಯನ್ನು ಸೃಷ್ಟಿಸುತ್ತದೆ.

ಭಾರತದ ಜನಸಂಖ್ಯೆ : ಕಾಡುವ ಒಂದು ಸಮಸ್ಯೆ.

ಪತ್ರಿಕಾ ಶೀರ್ಷಿಕೆಗಳನ್ನು ಓದಿದಿರಲ್ಲವೇ. ಇವು ಭಾರತದ ಜನಸಂಖ್ಯಾ ಬೆಳವಣಿಗೆಯನ್ನು ಸೂಚಿಸುತ್ತವೆ. ಜನಸಂಖ್ಯಾ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳು ಯಾವುವು?

- ಬಡತನ
- ನಿರುದ್ಯೋಗ
- ಹಸಿವು
- 

ಒಂದು ಪ್ರದೇಶದಲ್ಲಿ ನಿಶ್ಚಿತ ಕಾಲಾವಧಿಯಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಯು ಆ ಪ್ರದೇಶದ ಜನಸಂಖ್ಯೆಯಾಗಿದೆ. ಜನಸಂಖ್ಯಾ ಹೆಚ್ಚಳವು ದೇಶದ ಸಾಮಾಜಿಕ – ಆರ್ಥಿಕ ಪ್ರಗತಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಮೇಲಿನ ಪತ್ರಿಕಾ ಶೀರ್ಷಿಕೆಗಳು ಸೂಚಿಸುತ್ತವೆ. ಹೀಗಾದರೆ ನಮ್ಮ ದೇಶಕ್ಕೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವೇ? ಭೂಮಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳಿಗೆ ಆನುಪಾತಿಕವಾಗಿ ಜನಸಂಖ್ಯೆಯನ್ನು ನಿಯಂತ್ರಿಸಬೇಕಾಗಿದೆಯಲ್ಲವೇ?

2023ರ ಯುನೈಟೆಡ್ ನೇಷನ್ಸ್ ಪೋಪ್ಯುಲೇಶನ್ ಫಂಡ್‌ನ (UNFPA) ವರದಿಯ ಪ್ರಕಾರ ಪ್ರಪಂಚದ ಜನಸಂಖ್ಯೆಯು 804.5 ಕೋಟಿ ಮತ್ತು ಭಾರತದ ಜನಸಂಖ್ಯೆಯು 142.86 ಕೋಟಿ ಆಗಿದೆ.

ಒಂದು ದೇಶದ ಅಥವಾ ಪ್ರದೇಶದ ಜನಸಂಖ್ಯಾ ಮಾಹಿತಿಗಳನ್ನು (ಜನನ ಪ್ರಮಾಣ, ಮರಣ ಪ್ರಮಾಣ, ಶಿಶುಮರಣ ಪ್ರಮಾಣ, ಪ್ರಾಯ ರಚನೆ ಮೊದಲಾದವು) ಪರಿಗಣಿಸಿಕೊಂಡು, ಸಾಮಾಜಿಕ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಧರಿಸಲಾಗುತ್ತದೆ. ಇದಕ್ಕಾಗಿ ಜನಸಂಖ್ಯೆಯ ವಿಭಿನ್ನ ಒಲವುಗಳನ್ನು ಮತ್ತು ಜನಸಂಖ್ಯಾ ರಚನೆಯನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

### ಯುನೈಟೆಡ್ ನೇಶನ್ಸ್ ಪೋಪ್ಯುಲೇಶನ್ ಫಂಡ್ (UNFPA)

ಯುನೈಟೆಡ್ ನೇಶನ್ಸ್ ಪೋಪ್ಯುಲೇಶನ್ ಫಂಡ್ ವಿಶ್ವಸಂಸ್ಥೆಯ ಅಧೀನದಲ್ಲಿರುವ ಒಂದು ಅಂತಾರಾಷ್ಟ್ರೀಯ ಏಜೆನ್ಸಿಯಾಗಿದೆ. ಎಲ್ಲಾ ವ್ಯಕ್ತಿಗಳಿಗೂ ಉತ್ತಮ ಪ್ರತ್ಯುತ್ಪಾದನಾ ಆರೋಗ್ಯ ವ್ಯವಸ್ಥೆ, ವಯೋಜನ ಆರೈಕೆ, ಸಮಗ್ರ ಲೈಂಗಿಕ ಶಿಕ್ಷಣ ಮೊದಲಾದವುಗಳನ್ನು ಒದಗಿಸುವುದು ಮತ್ತು ಆ ಮೂಲಕ ಜನಸಂಖ್ಯಾ ಅಭಿವೃದ್ಧಿಯನ್ನು ಸಾಧಿಸುವುದು ಇದರ ಪ್ರಧಾನ ಉದ್ದೇಶವಾಗಿದೆ.

ಜನನ-ಮರಣ ಪ್ರಮಾಣ, ವಲಸೆ, ಜನಸಾಂದ್ರತೆ ಮೊದಲಾದ ಜನಸಂಖ್ಯಾ ರಚನೆಯ ಘಟಕಗಳ ಕುರಿತಾದ ಅಧ್ಯಯನ ನಡೆಸುವ ವಿಜ್ಞಾನದ ಶಾಖೆಯನ್ನು ಜನಸಂಖ್ಯಾಶಾಸ್ತ್ರ (Demography) ಎನ್ನುತ್ತಾರೆ.

ಒಂದು ಪ್ರದೇಶದ ವೈವಿಧ್ಯಮಯವಾದ ಮಾನವ ಸಂಪನ್ಮೂಲಗಳನ್ನು ಹಾಗೂ ಅದರ ರಚನಾತ್ಮಕ ಬದಲಾವಣೆಗಳನ್ನು ಜನಸಂಖ್ಯಾಶಾಸ್ತ್ರವು ವಿಶ್ಲೇಷಿಸುತ್ತದೆ. ಈ ಮಾನವ ಸಂಪನ್ಮೂಲಗಳನ್ನು ಒಂದು ಸಮಾಜದ ಅಭಿವೃದ್ಧಿಗೆ ಹೇಗೆ ಪ್ರಯೋಜನಪಡಿಸಿಕೊಳ್ಳಬಹುದೆಂಬುದರ ವಿವರವಾದ ಅಧ್ಯಯನವನ್ನು ಜನಸಂಖ್ಯಾ ಶಾಸ್ತ್ರದಿಂದ ಅರ್ಥೈಸಿಕೊಳ್ಳಬಹುದು.

ಜನಸಂಖ್ಯಾಶಾಸ್ತ್ರವು (Demography) ಜನಸಂಖ್ಯೆಯ ವ್ಯವಸ್ಥಿತವಾದ ಅಧ್ಯಯನವಾಗಿದೆ. ಗ್ರೀಕ್ ಪದಗಳಾದ Demos (ಜನರು) ಮತ್ತು Graphein (ವಿವರಿಸು) ಎಂಬಿವುಗಳ ಸಂಯೋಜನೆಯಿಂದ Demography ಎಂಬ

ಪದವು ರೂಪುಗೊಂಡಿದೆ. ಇದು ಜನರ ಕುರಿತಾದ ವಿವರಣೆಯನ್ನು ಸೂಚಿಸುತ್ತದೆ. ಇದು ಜನಸಂಖ್ಯೆಗೆ ಸಂಬಂಧಿಸಿದ ಒಲವುಗಳ ಮತ್ತು ಪ್ರಕ್ರಿಯೆಗಳ ಕುರಿತು ಅಧ್ಯಯನ ನಡೆಸುತ್ತದೆ.

ಜನನ, ಮರಣ, ವಲಸೆ ಇತ್ಯಾದಿಗಳು ಜನಸಂಖ್ಯೆಯ ಗಾತ್ರದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ. ಇವುಗಳ ವ್ಯತ್ಯಾಸಕ್ಕೆ ಅನುಗುಣವಾಗಿ ಒಂದು ಪ್ರದೇಶದ ಜನಸಂಖ್ಯಾ ಗಾತ್ರವೂ (size of population) ಬದಲಾಗುತ್ತದೆ. ಒಂದು ಪ್ರದೇಶದ ಜನಸಂಖ್ಯೆಯ ರಚನೆ ಮತ್ತು ಸಂಯೋಜನೆಯನ್ನು (structure and composition of population) ಅಲ್ಲಿನ ಜನರ ಪ್ರಾಯ ರಚನೆ, ಸ್ತ್ರೀ – ಪುರುಷ ಅನುಪಾತ, ಆಶ್ರಿತಾನುಪಾತ ಎಂಬಿವುಗಳ ಆಧಾರದಲ್ಲಿ ಗಣನೆ ಮಾಡಲಾಗುತ್ತದೆ.

ಒಂದು ಪ್ರದೇಶದಲ್ಲಿ ವಾಸಿಸುವ ಜನರ ಕುರಿತಾದ ಅಂಕಿಅಂಶಗಳಿಗೆ ಒತ್ತು ನೀಡಿ ನಡೆಸುವ ಸಮೀಕ್ಷೆ, ಜನಗಣತಿ ಮೊದಲಾದವುಗಳ ಆಧಾರದಲ್ಲಿ ಎಲ್ಲಾ ಜನಸಂಖ್ಯಾ ಅಧ್ಯಯನಗಳನ್ನು ನಡೆಸಲಾಗುತ್ತದೆ. ಜನಸಂಖ್ಯಾಶಾಸ್ತ್ರದ ಹೆಚ್ಚಿನ ಎಲ್ಲಾ ಮಾಹಿತಿಗಳನ್ನು ದರಗಳ ರೂಪದಲ್ಲಿ ಸೂಚಿಸಲಾಗುತ್ತದೆ. ಉದಾಹರಣೆಗೆ ಜನನ ಪ್ರಮಾಣ, ಮರಣ ಪ್ರಮಾಣ, ಸ್ತ್ರೀ – ಪುರುಷ ಅನುಪಾತ, ಆಶ್ರಿತ ಅನುಪಾತ ಇತ್ಯಾದಿ.

ಸಾಮಾಜಿಕ ಜನಸಂಖ್ಯಾಶಾಸ್ತ್ರ ಮತ್ತು ಔಪಚಾರಿಕ ಜನಸಂಖ್ಯಾ ಶಾಸ್ತ್ರವು ಜನಸಂಖ್ಯಾ ಶಾಸ್ತ್ರದ ಎರಡು ಶಾಖೆಗಳಾಗಿವೆ.

ಸಾಮಾಜಿಕ ಜನಸಂಖ್ಯಾ ಶಾಸ್ತ್ರವು (Social Demography) ಜನಸಂಖ್ಯೆಯ ರಚನೆ, ಅವುಗಳ ಬದಲಾವಣೆಯ ಕಾರಣಗಳ ಮತ್ತು ಪರಿಣಾಮಗಳ ಕುರಿತು ಅನ್ವೇಷಣೆ ನಡೆಸುತ್ತದೆ. ಒಂದು ಪ್ರದೇಶದ ಸಾಮಾಜಿಕ – ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳಿಗೆ ಇದು ಪ್ರಾಧಾನ್ಯತೆಯನ್ನು ನೀಡುತ್ತದೆ.

ಔಪಚಾರಿಕ ಜನಸಂಖ್ಯಾ ಶಾಸ್ತ್ರದಲ್ಲಿ (Formal Demography) ಜನಸಂಖ್ಯಾ ಬದಲಾವಣೆಯ ಘಟಕಗಳನ್ನು ಮೌಲ್ಯಮಾಪನ ಮತ್ತು ವಿಶ್ಲೇಷಣೆ ಮಾಡಲಾಗುತ್ತದೆ. ಜನಗಣತಿಯು (Census) ಔಪಚಾರಿಕ ಜನಸಂಖ್ಯಾ ಅಧ್ಯಯನಕ್ಕೊಂದು ಉದಾಹರಣೆಯಾಗಿದೆ. ಜನಗಣತಿಯ ಮೂಲಕ ದೇಶದ ಒಟ್ಟು ಜನಸಂಖ್ಯೆ, ಪ್ರಾಯರಚನೆ, ಸ್ತ್ರೀ – ಪುರುಷ ಅನುಪಾತ, ಸಾಮಾಜಿಕ – ಆರ್ಥಿಕ ಸ್ಥಿತಿ ಮೊದಲಾದ ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತದೆ.

ಭಾರತದಲ್ಲಿ ರಿಜಿಸ್ಟ್ರಾರ್ ಜನರಲ್ ಆಂಡ್ ಸೆನ್ಸಸ್ ಕಮೀಷನರ್ ಓಫ್ ಇಂಡಿಯಾವು ಜನಗಣತಿಯ ಚಟುವಟಿಕೆಗಳಿಗೆ ನೇತೃತ್ವ ನೀಡುತ್ತದೆ. ಭಾರತದ ಜನಗಣತಿಯು ವಿಶ್ವದಲ್ಲಿ ಅತೀ ದೊಡ್ಡ ಜನಗಣತಿಯಾಗಿದೆ. ಸಾಮಾನ್ಯವಾಗಿ ಹತ್ತು ವರ್ಷಗಳಿಗೊಮ್ಮೆ ಭಾರತದಲ್ಲಿ ಜನಗಣತಿಯನ್ನು ನಡೆಸಲಾಗುತ್ತದೆ.

- ಭಾರತದಲ್ಲಿ ಜನಗಣತಿ ಪ್ರಾರಂಭಿಸಿದ್ದು ಯಾವಾಗ?
- ಭಾರತದಲ್ಲಿ ಕೊನೆಯ ಜನಗಣತಿ ಯಾವಾಗ ನಡೆಯಿತು?

## ಭಾರತದ ಜನಸಂಖ್ಯಾ ಬೆಳವಣಿಗೆ

| ವರ್ಷ | ಒಟ್ಟು ಜನಸಂಖ್ಯೆ (ದಶಲಕ್ಷದಲ್ಲಿ) |
|---|---|
| 1901 | 238 |
| 1911 | 252 |
| 1921 | 251 |
| 1931 | 279 |
| 1941 | 319 |
| 1951 | 361 |
| 1961 | 439 |
| 1971 | 548 |
| 1981 | 683 |
| 1991 | 846 |
| 2001 | 1028 |
| 2011 | 1210 |




ಕೊಟ್ಟಿರುವ ಪಟ್ಟಿ ಮತ್ತು ಗ್ರಾಫನ್ನು ನಿರೀಕ್ಷಿಸಿ ಭಾರತದ ಜನಸಂಖ್ಯೆಯ ಬೆಳವಣಿಗೆಯ ಕುರಿತು ಟಿಪ್ಪಣಿ ತಯಾರಿಸಿರಿ.

Source: Census of India 2011 (Provisional).
website: http//censusindia.gov.in

## ಜನಸಂಖ್ಯಾ ಶಾಸ್ತ್ರದ ಸಾಮಾಜಿಕ ಪ್ರಾಧಾನ್ಯ

ವೈವಿಧ್ಯಮಯವಾದ ಜನಸಂಖ್ಯೆಯನ್ನು ಜನಸಂಖ್ಯಾಶಾಸ್ತ್ರವು ಅಧ್ಯಯನಕ್ಕೊಳಪಡಿಸುತ್ತದೆ. ಅಲ್ಲದೆ ಜನಸಂಖ್ಯೆಯ ಚಲನಾತ್ಮಕತೆ ಮತ್ತು ಪ್ರಗತಿಯ ಕುರಿತು ಅಧ್ಯಯನ ಮಾಡಲಾಗುತ್ತದೆ. ಸಾಮಾಜಿಕ ಸನ್ನಿವೇಶಗಳೊಂದಿಗೆ ಸಮ್ಮಿಲನವಾಗುವಾಗ ಜನಸಂಖ್ಯೆಯ ವಿಶ್ಲೇಷಣೆ ಸಾಧ್ಯವಾಗುತ್ತದೆ. ಸಾಮಾಜಿಕ ಜನಸಂಖ್ಯಾ ಶಾಸ್ತ್ರವು ಜನಸಂಖ್ಯಾ ರಚನೆ ಮತ್ತು ಬದಲಾವಣೆಯ ಅಧ್ಯಯನದೊಂದಿಗೆ ಅದು ಹೇಗೆ ಸಮಾಜಶಾಸ್ತ್ರದ ಘಟಕಗಳೊಂದಿಗೆ (ಪ್ರದೇಶ, ಧರ್ಮ, ಜಾತಿ, ಲಿಂಗ ಮೊದಲಾದವು) ಸಂವಹನ ನಡೆಸುತ್ತದೆ ಎಂಬುದನ್ನು ವಿಶ್ಲೇಷಿಸುತ್ತದೆ. ಒಂದು ಪ್ರದೇಶದ ಜನಸಂಖ್ಯಾ ಘಟಕಗಳು ಆ ಪ್ರದೇಶದ ವಿವಿಧ ಸಾಮಾಜಿಕ ಘಟಕಗಳೊಂದಿಗೆ ಹೇಗೆ ಸಂಬಂಧಹೊಂದಿವೆ ಎಂಬುದನ್ನು ಸಾಮಾಜಿಕ ಜನಸಂಖ್ಯಾಶಾಸ್ತ್ರವು ವಿಶ್ಲೇಷಣೆ ಮಾಡುತ್ತದೆ. ಹೀಗೆ ಜನಸಂಖ್ಯಾ ಅಧ್ಯಯನವು ಒಂದು ಸಾಮಾಜೀಕರಣ ಪ್ರಕ್ರಿಯೆಯಾಗಿದೆ.

ಸಾಮಾಜಿಕ ಘಟಕಗಳು :

- ಸಂಸ್ಕೃತಿ
- ಕಟ್ಟಳೆಗಳು
- ಧರ್ಮ
- ಸಾಮಾಜಿಕ ನಿಯಂತ್ರಣ
- ಆರ್ಥಿಕ
- ಸಮುದಾಯ ಇತ್ಯಾದಿ

ಜನಸಂಖ್ಯಾ ಘಟಕಗಳು :

- ಜನಸಂಖ್ಯಾ ಗಾತ್ರ
- ಪ್ರಾಯ ಮತ್ತು ಲಿಂಗ ಸಮಾನತೆ
- ಜನಸಂಖ್ಯಾ ಬದಲಾವಣೆ
- ಆಂತರಿಕ ವಲಸೆ
- ಅಂತಾರಾಷ್ಟ್ರೀಯ ವಲಸೆ
- ರೋಗಾವಸ್ಥೆ ಇತ್ಯಾದಿ

ನ್ಯಾಶನಲ್ ಸ್ಟಾಟಿಸ್ಟಿಕಲ್ ಆಫೀಸ್ (NSO), ನೀತಿ ಆಯೋಗ (National Institution for Transforming India), ಇಂಟರ್ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಫಾರ್ ಪೋಪ್ಯುಲೇಶನ್ ಸಯನ್ಸ್ (NIPS), ನ್ಯಾಶನಲ್ ಫ್ಯಾಮಿಲಿ ಹೆಲ್ತ್ ಸರ್ವೇ (NFHS) ಮೊದಲಾದವುಗಳು ಭಾರತದಲ್ಲಿ ಜನಸಂಖ್ಯಾ ಅಧ್ಯಯನ ನಡೆಸುವ ಪ್ರಧಾನ ಸಂಸ್ಥೆಗಳಾಗಿವೆ.

ಜನಸಂಖ್ಯಾ ಶಾಸ್ತ್ರದ ಪ್ರಧಾನ ಸೂಚಕಗಳನ್ನು ಪರಿಚಯಿಸೋಣ.




## ವಲಸೆ

ಕೆಳಗಿನ ಕವಿತೆಯನ್ನು ಗಮನಿಸಿರಿ.

> "ജനിച്ചനാടുവിട്ടകലെയാസ്സാമിൽ
> പണിക്കുപോകുന്ന പരിഷകൾ നമ്മൾ
> കുതിച്ചു തീവണ്ടി കിതച്ചു പായുന്നു
> തിരയടിക്കും താഴ്‌വാരവും പാടവും"
>
> ആസ്സാം പണിക്കാർ (വൈലോപ്പിള്ളി ശ്രീധരമേനോൻ)

ಎರಡನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಹುಟ್ಟೂರಾದ ಕೇರಳವನ್ನು ತೊರೆದು ಅಸ್ಸಾಮಿಗೆ ಉದ್ಯೋಗವನ್ನರಸಿ ಹೋದ ಜನರ ಕುರಿತು ವೈಲೋಪಿಳ್ಳಿ ತಮ್ಮ ಕವಿತೆಯಲ್ಲಿ ಉಲ್ಲೇಖಿಸಿದ್ದಾರೆ.

1941 ರ ಕಾಲಘಟ್ಟದಲ್ಲಿ ಉದ್ಯೋಗವನ್ನರಸಿ ಕೇರಳದಿಂದ ಜನರು ಅಸ್ಸಾಮಿಗೆ ಹೋಗಿದ್ದರೆಂದು ಅರ್ಥವಾಯಿತಲ್ಲವೇ. ಆದರೆ ಈಗ ಅಸ್ಸಾಂ ಮತ್ತು ಇತರ ರಾಜ್ಯಗಳಿಂದ ಜನರು ಕೇರಳಕ್ಕೆ ಬರುತ್ತಿದ್ದಾರೆ.



ಹೊರ ರಾಜ್ಯಗಳ ಕಾರ್ಮಿಕರನ್ನು 'ಅತಿಥಿ ಕಾರ್ಮಿಕರು' ಎಂದು ಕರೆದ ಕೇರಳ, ಚಪ್ಪಾಳೆ ತಟ್ಟಿದ ಜಗತ್ತು

ಕೇರಳದಲ್ಲಿ ಹೊಸ ಒಂದು ಪದ ಪ್ರಯೋಗದಿಂದ ಇತರ ರಾಜ್ಯಗಳಿಂದ ಬಂದ ವಲಸೆ ಕಾರ್ಮಿಕರನ್ನು ಉಲ್ಲೇಖಿಸಲಾಗುತ್ತದೆ. 'ಅತಿಥಿ ಕಾರ್ಮಿಕರು'.

ಕೊಟ್ಟಿರುವ ಪತ್ರಿಕಾ ವಾರ್ತೆಯನ್ನು ಗಮನಿಸಿದಿರಲ್ಲವೇ. ಅತಿಥಿ ಕಾರ್ಮಿಕರು ಎಂಬ ಪ್ರಯೋಗವನ್ನು ಎಲ್ಲಿಯಾದರೂ ಕೇಳಿರುವಿರಾ?

ಅತಿಥಿ ಕಾರ್ಮಿಕರು ಇಂದು ಕೇರಳೀಯ ಸಮಾಜದ ಭಾಗವಾಗಿದ್ದಾರೆ. ನಗರ – ಗ್ರಾಮ ವ್ಯತ್ಯಾಸವಿಲ್ಲದೆ ಎಲ್ಲಾ ವಲಯಗಳಲ್ಲೂ ಇಂದು ಅತಿಥಿ ಕಾರ್ಮಿಕರನ್ನು ಕಾಣಬಹುದು. ಅವರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕೆಲಸವನ್ನರಸಿ ಹೋಗಲು ಕಾರಣವೇನಾಗಿರಬಹುದು?

ಹೆಚ್ಚಿನ ಮಾಹಿತಿಗಳನ್ನು ಸೇರಿಸಿರಿ.

- ಉತ್ತಮ ಆದಾಯ
- ಉನ್ನತ ಸಾಮಾಜಿಕ ಪದವಿ
- 
- 

### ಕೇರಳದ ವಲಸೆಯ ಇತಿಹಾಸ

ಮಲಯಾಳ ಭಾಷೆಯನ್ನು ಮಾತನಾಡುವ ಜನರಲ್ಲಿ ಒಗ್ಗಟ್ಟಿನ ರಾಷ್ಟ್ರಪ್ರಜ್ಞೆ, ಭಾಷೆ, ಭೌಗೋಳಿಕತೆ ಇತ್ಯಾದಿಗಳ ಆಧಾರದಲ್ಲಿ ಕೇರಳೀಯರೆಂಬ ಐಕ್ಯ ಮನೋಭಾವ ಉದಯಿಸುವುದಕ್ಕಿಂತ ಮೊದಲೇ ಇಲ್ಲಿಂದ ವಲಸೆ ಮತ್ತು ಪ್ರವಾಸಗಳನ್ನು ಉದ್ದೇಶವಾಗಿರಿಸಿಕೊಂಡು ಹಲವಾರು ವಿಧದ ಪ್ರಯಾಣಗಳು ನಡೆದಿವೆ. ಕೇರಳದಿಂದ ಬ್ರಿಟಿಷ್ ವಸಾಹತುಗಳಿಗೆ ಸಾಗಿಸಲಾದ ಕೇರಳೀಯರನ್ನು ಬ್ರಿಟಿಷ್ ವಸಾಹತುಗಳಲ್ಲಿ ಬಲವಂತದಿಂದ ಜೀತದಾಳುಗಳಾಗಿ ದುಡಿಸುತ್ತಿದ್ದರು. 20ನೇ ಶತಮಾನದ ಪೂರ್ವಾರ್ಧದಲ್ಲಿ ಮಧ್ಯ ಕೇರಳ ಮತ್ತು ದಕ್ಷಿಣ ಕೇರಳದಿಂದ ಮಲಬಾರ್ ಪ್ರದೇಶಕ್ಕೆ ವಿರಳವಾಗಿ ಮತ್ತು ಸಂಘಟಿತವಾಗಿ ವಲಸೆಗಳು ನಡೆದಿವೆ. ಈ ಕಾಲಾವಧಿಯಲ್ಲಿ ಮಲಯಾಳಿಗಳು ಕೆಲಸವನ್ನರಸಿ ಭಾರತದ ದೊಡ್ಡ ನಗರಗಳಾದ ಮುಂಬೈ(ಬಾಂಬೆ), ಚೆನ್ನೈ(ಮದ್ರಾಸು), ಕೊಲ್ಕತ್ತಾ (ಕಲ್ಕತ್ತಾ), ದೆಹಲಿ ಮೊದಲಾದೆಡೆಗೆ ವ್ಯಾಪಕವಾಗಿ ತೆರಳಿದ್ದು ಜನಸಂಖ್ಯಾ ಚಲನಾತ್ಮಕತೆಗೆ ಉದಾಹರಣೆಯಾಗಿದೆ. ನಂತರದಲ್ಲಿ ಕೊಲ್ಲಿ ರಾಷ್ಟ್ರಗಳಿಗೆ ವ್ಯಾಪಕ ವಲಸೆಯು ಕೇರಳದಿಂದ ನಡೆಯಿತು. ಕೇರಳೀಯರು ಪ್ರಪಂಚದಲ್ಲಿ ಅಭಿವೃದ್ಧಿಯ ವಿಚಾರದಲ್ಲಿ ಮುಂಚೂಣಿಯಲ್ಲಿರುವ ದೇಶಗಳಿಗೆ ಉದ್ಯೋಗ ಮತ್ತು ಸ್ಥಿರವಾಸಕ್ಕಾಗಿ ಹೋಗಿದ್ದಾರೆ. ಕೇರಳದಿಂದ ಮಲಯಾಳಿಗಳ ಹೆಚ್ಚಿನ ವಲಸೆಗಳೂ ಶಿಕ್ಷಣ ಮತ್ತು ಶಿಕ್ಷಣಾಧಾರಿತ ಉದ್ಯೋಗಗಳಿಗಾಗಿ ನಡೆಯುತ್ತದೆ. ಪ್ರಸ್ತುತ ಹೆಚ್ಚಿನ ಜನರು ಕೆನಡಾ, ಯು.ಕೆ., ಯು.ಎಸ್.ಎ., ನ್ಯೂಜಿಲ್ಯಾಂಡ್ ಮೊದಲಾದ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಮೇಲೆ ನೀಡಲಾದ ಕಾರಣಗಳಿಂದ ವಲಸೆ ಎಂದರೇನೆಂದು ಅರ್ಥೈಸಿಕೊಳ್ಳಬಹುದು.

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಜನರು ತಮ್ಮ ವಾಸಸ್ಥಳವನ್ನು ಬದಲಾಯಿಸುವುದನ್ನು ವಲಸೆ ಎನ್ನುತ್ತಾರೆ. ಎರಡು ರೀತಿಯ ವಲಸೆಗಳಿವೆ.

### ಆಂತರಿಕ ವಲಸೆ

ರಾಷ್ಟ್ರದ ಒಳಗೆ ನಡೆಯುವ ವಲಸೆಯನ್ನು ಆಂತರಿಕ ವಲಸೆ ಎನ್ನುತ್ತಾರೆ. ಉದ್ಯೋಗವನ್ನರಸಿ ಕೇರಳದಿಂದ ಇತರ ರಾಜ್ಯಗಳಿಗೂ, ಇತರ ರಾಜ್ಯಗಳಿಂದ ಕೇರಳಕ್ಕೂ ಜನರು ಸಂಚರಿಸುವುದು ಆಂತರಿಕ ವಲಸೆಗೆ ಉದಾಹರಣೆಯಾಗಿದೆ.

### ಅಂತಾರಾಷ್ಟ್ರೀಯ ವಲಸೆ

ದೇಶದ ಗಡಿಯನ್ನು ದಾಟಿ ಹೋಗುವ ವಲಸೆಯನ್ನು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ವಲಸೆ ಎನ್ನುತ್ತಾರೆ. ಭಾರತದಿಂದ ಗಲ್ಫ್ ದೇಶಗಳಿಗೆ ಮತ್ತು ಯುರೋಪಿನ ದೇಶಗಳಿಗೆ ಜನರು ಸಂಚರಿಸುವುದು ಅಂತಾರಾಷ್ಟ್ರೀಯ ವಲಸೆಗೆ ಉದಾಹರಣೆಯಾಗಿದೆ.

ವಲಸೆಯು ಒಂದು ಪ್ರದೇಶದ ಜನಸಂಖ್ಯಾ ರಚನೆಯಲ್ಲಿ ಬದಲಾವಣೆಯನ್ನುಂಟುಮಾಡುತ್ತದೆ.



ವಿವಿಧ ರೀತಿಯ ವಲಸೆಗಳನ್ನು ಕೆಳಗೆ ನೀಡಲಾಗಿದೆ. ಅವು ಯಾವ ರೀತಿಯ ವಲಸೆಗಳಾಗಿವೆ ಎಂಬುದನ್ನು ಗುರುತಿಸಿ, ಹೆಚ್ಚಿನ ಉದಾಹರಣೆಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ವಿದೇಶದಲ್ಲಿ ಕೆಲಸ ಮಾಡುತ್ತಿರುವ ಮಲಯಾಳಿಗಳು.
- ಕೇರಳದ ನಿರ್ಮಾಣ ವಲಯದಲ್ಲಿ ದುಡಿಯುತ್ತಿರುವ ಉತ್ತರ ಭಾರತದ ಕಾರ್ಮಿಕರು.
- ಅಧ್ಯಯನಕ್ಕಾಗಿ ವಿದೇಶಗಳಿಗೆ ಹೋಗುವ ವಿದ್ಯಾರ್ಥಿಗಳು.

| ಆಂತರಿಕ ವಲಸೆ | ಅಂತಾರಾಷ್ಟ್ರೀಯ ವಲಸೆ |
|---|---|
| • | • |

## ಜನನ ಪ್ರಮಾಣ ಮತ್ತು ಮರಣ ಪ್ರಮಾಣ

ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳು ಒಂದು ಪ್ರದೇಶದ ಜನಸಂಖ್ಯಾ ಬೆಳವಣಿಗೆಯನ್ನು ನಿರ್ಧರಿಸುವ ಪ್ರಧಾನ ಘಟಕಗಳಾಗಿವೆ.

ST-421-12-SOC. SCI.-I (K)-9-VOL-1

ಜನಸಂಖ್ಯೆಯಲ್ಲಿ ಪ್ರತಿ ಸಾವಿರ ಜನರಿಗೆ ಎಷ್ಟು ಮಕ್ಕಳು ಸಜೀವವಾಗಿ ಜನಿಸುತ್ತಾರೆ ಎಂಬುದು ಜನನ ಪ್ರಮಾಣವಾಗಿದೆ.

ಒಂದು ನಿಶ್ಚಿತ ಪ್ರದೇಶದಲ್ಲಿ ನಿಶ್ಚಿತ ಸಮಯದಲ್ಲಿ ಜನಸಂಖ್ಯೆಯ ಪ್ರತಿ ಸಾವಿರ ಜನರಲ್ಲಿ ಎಷ್ಟು ಜನರು ಮರಣ ಹೊಂದುತ್ತಾರೆ ಎಂಬುದು ಮರಣ ಪ್ರಮಾಣವಾಗಿದೆ.

ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳೊಳಗಿನ ವ್ಯತ್ಯಾಸದ ಆಧಾರದಲ್ಲಿ ಜನಸಂಖ್ಯಾ ಹೆಚ್ಚಳದ ಪ್ರಮಾಣವನ್ನು ಲೆಕ್ಕ ಹಾಕಲಾಗುತ್ತದೆ. ಜನನ ಪ್ರಮಾಣ ಕಡಿಮೆಯಾಗುವಾಗ ಮತ್ತು ಮರಣ ಪ್ರಮಾಣ ಹೆಚ್ಚಾಗುವಾಗ ಜನಸಂಖ್ಯಾ ಹೆಚ್ಚಳದ ಪ್ರಮಾಣವು ಕಡಿಮೆಯಾಗುತ್ತದೆ. ಮರಣ ಪ್ರಮಾಣಕ್ಕಿಂತ ಜನನ ಪ್ರಮಾಣವು ಹೆಚ್ಚಾಗುವಾಗ ಜನಸಂಖ್ಯಾ ಹೆಚ್ಚಳವುಂಟಾಗುತ್ತದೆ.

### ಶಿಶುಮರಣ ಪ್ರಮಾಣ

ಒಂದು ವರ್ಷದಲ್ಲಿ ಸಜೀವವಾಗಿ ಜನಿಸುವ ಸಾವಿರ ಮಕ್ಕಳಲ್ಲಿ ಒಂದು ವರ್ಷ ಪ್ರಾಯದೊಳಗೆ ಮರಣ ಹೊಂದುವ ಮಕ್ಕಳ ಸಂಖ್ಯೆಯನ್ನು ಶಿಶುಮರಣ ಪ್ರಮಾಣ (Infant Mortality) ಎನ್ನುತ್ತಾರೆ.

### ಮಾತೃಮರಣ ಪ್ರಮಾಣ

ಒಂದು ವರ್ಷ ನಡೆಯುವ ಸಾವಿರ ಹೆರಿಗೆಗಳಲ್ಲಿ, ಹೆರಿಗೆಯ ಸಂದರ್ಭದಲ್ಲಿ ಮರಣವನ್ನಪ್ಪುವ ಸ್ತ್ರೀಯರ ಸಂಖ್ಯೆಯನ್ನು ಮಾತೃಮರಣ ಪ್ರಮಾಣ (Maternal mortality rate) ಎನ್ನುತ್ತಾರೆ.

ಒಂದು ದೇಶದ ಹೆಚ್ಚಿನ ಶಿಶುಮರಣ ಪ್ರಮಾಣ ಮತ್ತು ಮಾತೃಮರಣ ಪ್ರಮಾಣವು ಆ ದೇಶದ ಬಡತನ ಮತ್ತು ಹಿಂದುಳಿಯುವಿಕೆಯ ಸೂಚಕಗಳಾಗಿವೆ.

**ಜನನ – ಮರಣ ಪ್ರಮಾಣ 1901-2001**




| ವರ್ಷ | ಜನನ ಪ್ರಮಾಣ | ಮರಣ ಪ್ರಮಾಣ |
|---|---|---|
| 1901 | 49.2 | 42.6 |
| 1911 | 48.1 | 47.2 |
| 1921 | 46.4 | 36.3 |
| 1931 | 45.2 | 31.2 |
| 1941 | 39.9 | 27.4 |
| 1951 | 41.7 | 22.8 |
| 1961 | 41.2 | 19 |
| 1971 | 37.1 | 14.8 |
| 1981 | 33.9 | 12.5 |
| 1991 | 29.5 | 9.8 |
| 2001 | 26 | 9 |

ಮೇಲಿನ ಪಟ್ಟಿ ಮತ್ತು ಗ್ರಾಫನ್ನು ನಿರೀಕ್ಷಿಸಿ ಭಾರತದ ಜನಸಂಖ್ಯೆಯಲ್ಲಿ ಜನನ ಪ್ರಮಾಣ ಮತ್ತು ಮರಣ ಪ್ರಮಾಣದ ಒಲವುಗಳನ್ನು ಕಂಡುಹಿಡಿಯಿರಿ. 2011 ರ ಜನಗಣತಿ ಪ್ರಕಾರ ಭಾರತದ ಜನನ ಪ್ರಮಾಣ ಮತ್ತು ಮರಣ ಪ್ರಮಾಣಗಳನ್ನು ಕಂಡುಹಿಡಿಯಿರಿ.

*Source: SRS Bulletin, Registrar General of India, 2016, National Commission on Population, Government of India.*
*website: http://populationcommission.nic.in/facts1.htm#*

ಜನನ – ಮರಣ ಪ್ರಮಾಣದ ಅಂಕಿ ಅಂಶಗಳ ನಿಖರತೆಯು ಇವುಗಳಿಗೆ ಸಂಬಂಧಿಸಿದ ಏಜೆನ್ಸಿಗಳಿಗೆ ಲಭಿಸುವ ಮಾಹಿತಿಗಳ ಮೇಲೆ ಅವಲಂಬಿತವಾಗಿದೆ. ಭಾರತವೂ ಸೇರಿದಂತೆ ಹೆಚ್ಚಿನ ದೇಶಗಳಲ್ಲಿ ಜನನ – ಮರಣಗಳನ್ನು ಆಯಾ ಸಮಯಕ್ಕೆ ಸರಿಯಾಗಿ ನೋಂದಾವಣೆ ಮಾಡಬೇಕೆಂದು ನಿಯಮವು ನಿರ್ದೇಶಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಜನನ – ಮರಣಗಳನ್ನು ಎಲ್ಲಿ ನೋಂದಾಯಿಸಬೇಕು?

ನಗರ/ಪಟ್ಟಣಗಳಲ್ಲಿ ಜನನ – ಮರಣಗಳನ್ನು ಎಲ್ಲಿ ನೋಂದಾಯಿಸಬೇಕು?

ಸಾಂಕ್ರಾಮಿಕ ರೋಗಗಳು, ಬರಗಾಲ, ಹವಾಗುಣ ಬದಲಾವಣೆ ಮೊದಲಾದವುಗಳು ಮರಣ ಪ್ರಮಾಣದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.
2011 ರ ಜನಗಣತಿಯ ಆಧಾರದಲ್ಲಿ ಭಾರತದ ಮತ್ತು ಕೇರಳದ ಜನನ – ಮರಣ ಪ್ರಮಾಣಗಳನ್ನು ಕಂಡುಹಿಡಿದು ನೋಟ್ ಪುಸ್ತಕದಲ್ಲಿ ದಾಖಲಿಸಿರಿ.

## ಜನಸಾಂದ್ರತೆ

ಜನಸಾಂದ್ರತೆಯು ಒಂದು ಪ್ರದೇಶದ ಸಾಮಾಜಿಕ – ಆರ್ಥಿಕ ಘಟಕಗಳನ್ನು ಪ್ರತಿನಿಧೀಕರಿಸುತ್ತದೆ.

ಒಂದು ಪ್ರದೇಶದಲ್ಲಿ ಒಂದು ನಿಶ್ಚಿತ ಸಮಯದಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಯೇ ಆ ಪ್ರದೇಶದ ಜನಸಂಖ್ಯೆ. ಆದರೆ ಒಂದು ಚದರ ಕಿಲೋ ಮೀಟರ್ ಪ್ರದೇಶದಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಜನಸಾಂದ್ರತೆ (Density of Population) ಎನ್ನುತ್ತಾರೆ.

2011 ರ ಜನಗಣತಿ ವರದಿಯನ್ನು ವಿಶ್ಲೇಷಿಸಿ ಜನಸಂಖ್ಯೆ ಮತ್ತು ಜನಸಾಂದ್ರತೆ ಹೆಚ್ಚಿರುವ ಮತ್ತು ಕಡಿಮೆಯಿರುವ ರಾಜ್ಯಗಳನ್ನು ಗುರುತಿಸಿ ಚಾರ್ಟ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

ಭಾರತದ ಜನಸಾಂದ್ರತೆಯಲ್ಲಿ ಗಮನಾರ್ಹವಾದ ಪ್ರಾದೇಶಿಕ ವ್ಯತ್ಯಾಸಗಳಿವೆ. 2011 ರ ಜನಗಣತಿ ಪ್ರಕಾರ ದೆಹಲಿಯು ಜನಸಾಂದ್ರತೆಯಲ್ಲಿ ಅಗ್ರಸ್ಥಾನದಲ್ಲಿದ್ದರೆ ಅರುಣಾಚಲ ಪ್ರದೇಶವು ಕೊನೆಯ ಸ್ಥಾನದಲ್ಲಿದೆ.

ಜನಸಾಂದ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಕಂಡು ಬರುವ ಸಾಮಾಜಿಕ ಸಮಸ್ಯೆಗಳು ಯಾವುವು? ಪಟ್ಟಿಯನ್ನು ಪೂರ್ತಿಗೊಳಿಸಿರಿ.

- ವಿಶಾಲವಾದ ಸ್ಥಳದ ಕೊರತೆ
- ಮಲಿನೀಕರಣ
- ನೀರಿನ ಸಂಗ್ರಹದ ಕೊರತೆ
- ಜನದಟ್ಟಣೆ
- 
- 



ಭಾರತದ ಕೆಲವು ರಾಜ್ಯಗಳಲ್ಲಿ ಜನಸಂಖ್ಯೆ ಅತ್ಯಂತ ಹೆಚ್ಚು ಮತ್ತು ಇನ್ನು ಕೆಲವು ರಾಜ್ಯಗಳಲ್ಲಿ ಜನಸಂಖ್ಯೆ ಅತ್ಯಂತ ಕಡಿಮೆಯಿರಲು ಕಾರಣಗಳೇನಾಗಿರಬಹುದು?

- ಹವಾಮಾನ
- ಭೂಪ್ರಕೃತಿ
- ಜಲಲಭ್ಯತೆ
- ಮಣ್ಣಿನ ವಿಧಗಳು
-
-

- **ಸ್ತ್ರೀ-ಪುರುಷ ಅನುಪಾತ ಮತ್ತು ಶಿಶುಲಿಂಗಾನುಪಾತ**

ಸ್ತ್ರೀ-ಪುರುಷ ಅನುಪಾತವು ಜನಸಂಖ್ಯಾ ಬೆಳವಣಿಗೆಯ ದರ ಮತ್ತು ಅದರ ಪರಿಣಾಮದ ಮೇಲೆ ಪ್ರಭಾವ ಬೀರುವ ಘಟಕವಾಗಿದೆ. ಜನಸಂಖ್ಯೆಯ ಸ್ತ್ರೀ-ಪುರುಷಾನುಪಾತವು ಜನನ ಪ್ರಮಾಣ, ಮರಣ ಪ್ರಮಾಣ, ವಲಸೆ ಮೊದಲಾದವುಗಳ ಮೇಲೆ ಪರಿಣಾಮ ಬೀರುತ್ತದೆ.

ಒಂದು ನಿಶ್ಚಿತ ಸಮಯದಲ್ಲಿ ಒಂದು ನಿಶ್ಚಿತ ಪ್ರದೇಶದಲ್ಲಿನ ಸಾವಿರ ಪುರುಷರಿಗೆ ಆನುಪಾತಿಕವಾಗಿ ಎಷ್ಟು ಸ್ತ್ರೀಯರಿದ್ದಾರೆ ಎಂಬ ಲೆಕ್ಕಾಚಾರವನ್ನು ಸ್ತ್ರೀ-ಪುರುಷ ಅನುಪಾತ (Sex Ratio) ಎನ್ನುತ್ತಾರೆ.

0-6 ವರ್ಷದೊಳಗಿನ ಸಾವಿರ ಗಂಡುಮಕ್ಕಳಿಗೆ ಆನುಪಾತಿಕವಾಗಿ ಎಷ್ಟು ಹೆಣ್ಣು ಮಕ್ಕಳಿದ್ದಾರೆ ಎಂಬ ಲೆಕ್ಕಾಚಾರವನ್ನು ಶಿಶುಲಿಂಗಾನುಪಾತ ಎನ್ನುತ್ತಾರೆ.

**ಭಾರತದಲ್ಲಿ ಇಳಿಕೆಯಾಗುತ್ತಿರುವ ಸ್ತ್ರೀ-ಪುರುಷ ಅನುಪಾತ ಮತ್ತು ಶಿಶುಲಿಂಗಾನುಪಾತ - 1961-2011**

| ವರ್ಷ | ಸ್ತ್ರೀ-ಪುರುಷ ಅನುಪಾತ | ಶಿಶುಲಿಂಗಾನುಪಾತ |
|---|---|---|
| 1961 | 941 | 960 |
| 1971 | 930 | 964 |
| 1981 | 934 | 962 |
| 1991 | 927 | 945 |
| 2001 | 933 | 927 |
| 2011 | 940 | 914 |

*Source: *Census of India 2011 (Provisional) Government of India*

ಪಟ್ಟಿಯನ್ನು ನಿರೀಕ್ಷಿಸಿ ಭಾರತದ ಸ್ತ್ರೀ-ಪುರುಷ ಅನುಪಾತ ಮತ್ತು ಶಿಶುಲಿಂಗಾನುಪಾತದ ಒಲವುಗಳ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಿರಿ. ಕೇರಳದ ಸ್ತ್ರೀ-ಪುರುಷಾನುಪಾತ ಮತ್ತು ಶಿಶುಲಿಂಗಾನುಪಾತಗಳನ್ನು ಪರಸ್ಪರ ಹೋಲಿಸಿರಿ.

ಸ್ತ್ರೀ-ಪುರುಷಾನುಪಾತಕ್ಕೆ ಸ್ತ್ರೀ ಮತ್ತು ಪುರುಷ ಸಮತೋಲನಾವಸ್ಥೆಯಲ್ಲಿ ಪ್ರಧಾನ ಪಾತ್ರವಿದೆ. ಒಂದು ಪ್ರದೇಶದ ಜನಸಂಖ್ಯಾ ಬೆಳವಣಿಗೆಯನ್ನು ಅಂದಾಜಿಸಲು ಮತ್ತು ಜನಸಂಖ್ಯೆಯ ಗಾತ್ರವನ್ನು ಲೆಕ್ಕ ಹಾಕಲು ಸ್ತ್ರೀ-ಪುರುಷ ಅನುಪಾತವನ್ನು ಉಪಯೋಗಿಸಲಾಗುತ್ತದೆ.

2011ರ ಜನಗಣತಿಯ ಪ್ರಕಾರ ಭಾರತದ ಮತ್ತು ಕೇರಳದ ಸ್ತ್ರೀ-ಪುರುಷಾನುಪಾತ ಎಷ್ಟು?

ಸ್ತ್ರೀ-ಪುರುಷ ಅನುಪಾತವು ಕಡಿಮೆಯಾಗುವುದರಿಂದ ಉಂಟಾಗುವ ಸಾಮಾಜಿಕ ಸಮಸ್ಯೆಗಳು ಯಾವುವು?

ಭಾರತದಲ್ಲಿ ಸ್ತ್ರೀ-ಪುರುಷಾನುಪಾತವನ್ನು ಹೆಚ್ಚಿಸಲು ಕೆಲವು ಸುಧಾರಣೆಗಳನ್ನು ನೀತಿ ಆಯೋಗವು ಮುಂದಿಟ್ಟಿದೆ. ಈ ಕೆಳಕಂಡ ಕ್ಷೇತ್ರಗಳತ್ತ ಗಮನ ಹರಿಸುವಂತೆ ಸರಕಾರಕ್ಕೆ ಆಯೋಗವು ಶಿಫಾರಸು ಮಾಡಿದೆ.

- ಹೆಣ್ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಹೆಣ್ಮಕ್ಕಳಿಗೆ ಉತ್ತಮ ಆರೋಗ್ಯ ಸಂರಕ್ಷಣೆ ಮತ್ತು ಶಿಕ್ಷಣವನ್ನು ಒದಗಿಸುವುದು.
- ಮಹಿಳೆಯರ ಮತ್ತು ಹೆಣ್ಮಕ್ಕಳ ಸಬಲೀಕರಣ.

## ಜೀವಿತಾವಧಿ

ಪ್ರತಿಯೊಂದು ದೇಶವೂ ಅಲ್ಲಿನ ಜನರ ಆರೋಗ್ಯ ಸುಧಾರಣೆಗೆ ಮತ್ತು ಮರಣ ಪ್ರಮಾಣವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತವೆ. ಜೀವಿತಾವಧಿಯು ಒಂದು ಪ್ರದೇಶದ ಜನಸಂಖ್ಯಾ ಬೆಳವಣಿಗೆಯನ್ನು ನಿರ್ಧರಿಸುವ ಒಂದು ಪ್ರಮುಖ ಘಟಕವಾಗಿದೆ.

ಒಬ್ಬ ವ್ಯಕ್ತಿ ಸರಾಸರಿ ಎಷ್ಟು ವರ್ಷ ಜೀವಿಸಿರುತ್ತಾನೆ ಎಂಬುದನ್ನು ಜೀವಿತಾವಧಿ ಎನ್ನುತ್ತಾರೆ. ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಪ್ರತಿಯೊಂದು ಪ್ರಾಯ ವಿಭಾಗದ ಮರಣ ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಜೀವಿತಾವಧಿಯನ್ನು ಗಣನೆ ಮಾಡಲಾಗುತ್ತದೆ.

ಕೆಳಗೆ ನೀಡಿರುವ ಪಟ್ಟಿಯನ್ನು ಗಮನಿಸಿರಿ.

| ರಾಜ್ಯ/ಕೇಂದ್ರಾಡಳಿತ ಪ್ರದೇಶ | ಜೀವಿತಾವಧಿ (ಪುರುಷರು) | ಜೀವಿತಾವಧಿ (ಸ್ತ್ರೀಯರು) |
|---|---|---|
| ಕೇರಳ | 72.3 | 78.0 |
| ಮಹಾರಾಷ್ಟ್ರ | 71.6 | 74.0 |
| ಪಂಜಾಬ್ | 71.1 | 74.7 |
| ಉತ್ತರಪ್ರದೇಶ | 65.0 | 66.2 |
| ಛತ್ತೀಸ್ ಘಡ್ | 63.7 | 66.9 |
| ಭಾರತ | 68.4 | 71.1 |

ಆಧಾರ : NSO, 2022

2022 ರಲ್ಲಿ ಪ್ರಕಟಿಸಲ್ಪಟ್ಟ ನ್ಯಾಶನಲ್ ಸ್ಟಾಟಿಸ್ಟಿಕಲ್ ಆಫೀಸ್ (NSO) ನ 'ವುಮನ್ ಆಂಡ್ ಮೆನ್ ಇನ್ ಇಂಡಿಯಾ' ವರದಿಯ ಪ್ರಕಾರ 2015-19 ರಲ್ಲಿ ಭಾರತದ ಸ್ತ್ರೀ-ಪುರುಷ ಜೀವಿತಾವಧಿ ಕ್ರಮವಾಗಿ 71.1 ಮತ್ತು 68.4 ಆಗಿದೆ. ಅದೇ ಸಂದರ್ಭದಲ್ಲಿ ಕೇರಳದ ಸ್ತ್ರೀ-ಪುರುಷ ಜೀವಿತಾವಧಿ 78.0 ಮತ್ತು 72.3 ಆಗಿದೆ..

ಕೇರಳದಲ್ಲಿ ಜೀವಿತಾವಧಿ ಹೆಚ್ಚಾಗಲು ಅನೇಕ ಅಂಶಗಳು ಕಾರಣವಾಗಿವೆ.

- ಹೆಚ್ಚಿನ ಸಾಕ್ಷರತೆ ಮತ್ತು ಉನ್ನತ ಶಿಕ್ಷಣ
- ವಿಕೇಂದ್ರೀಕೃತ ಸಾರ್ವಜನಿಕ ಆರೋಗ್ಯನೀತಿ
- ಶುಚಿತ್ವ
- ಆಹಾರ ಲಭ್ಯತೆ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ

**14567**
ಹಿರಿಯ ನಾಗರಿಕರಿಗಾಗಿರುವ ಸಹಾಯವಾಣಿ ಸಂಖ್ಯೆ

ಹಿರಿಯ ನಾಗರಿಕರ ಸಾಮಾಜಿಕ ಕ್ಷೇಮ ಮತ್ತು ಸುರಕ್ಷತೆಗಾಗಿ ಸರಕಾರ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಕೇರಳದಲ್ಲಿ 60 ವಯಸ್ಸು ದಾಟಿದವರ ಸಂಖ್ಯೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರ ಕ್ಷೇಮ ಮತ್ತು ಸುರಕ್ಷತೆಯನ್ನು ಖಾತರಿಗೊಳಿಸಲು ರಾಜ್ಯ ಸರಕಾರವು 2013 ರಲ್ಲಿ '**ರಾಜ್ಯ ವಯೋಜನ ನೀತಿ**' ಯನ್ನು ರೂಪಿಸಿದೆ.

ಹಿರಿಯ ನಾಗರಿಕರ ಸಮಸ್ಯೆಗಳ ಪರಿಹಾರಕ್ಕಾಗಿ 'ಹಗಲುಮನೆ' (ಪಗಲ್ ವೀಡ್), ವಯೋರಕ್ಷಾ ಯೋಜನೆ, ವಯೋಮಿತ್ರಂ ಯೋಜನೆ, ಅಮೃತಂ ಯೋಜನೆ ಮೊದಲಾದವುಗಳನ್ನು ಸರಕಾರ ಜಾರಿಗೊಳಿಸಿದೆ. ಇವುಗಳ ಬಗ್ಗೆ ಲಘು ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.



ವಿಶ್ವ ಜನಸಂಖ್ಯಾ ದಿನವನ್ನು ಯಾವಾಗ ಆಚರಿಸುತ್ತೇವೆ? ವಿಶ್ವ ಜನಸಂಖ್ಯಾ ದಿನದ ಸಂದೇಶವನ್ನೊಳಗೊಂಡ ಘೋಷಣಾ ಫಲಕವನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ಜನಸಂಖ್ಯಾ ಪ್ರಾಯ ರಚನೆ

ಜನಸಂಖ್ಯಾ ಪ್ರಾಯ ರಚನೆಯು ಜನಸಂಖ್ಯಾ ಕ್ರಮೀಕರಣದ ಒಂದು ಪ್ರಧಾನ ಸೂಚಕವಾಗಿದೆ.

ತುಲನಾತ್ಮಕವಾಗಿ ಜನಸಂಖ್ಯೆಯಲ್ಲಿನ ವಿವಿಧ ವಯೋಮಾನದ ವ್ಯಕ್ತಿಗಳ ಅನುಪಾತವನ್ನು ಜನಸಂಖ್ಯಾ ಪ್ರಾಯ ರಚನೆ (Age structure of population) ಎನ್ನುವರು.

ಪ್ರಗತಿ, ಸರಾಸರಿ ಜೀವಿತಾವಧಿ ಮೊದಲಾದವುಗಳಲ್ಲಿನ ಬದಲಾವಣೆಗಳು ಪ್ರಾಯ ರಚನೆಯನ್ನು ಬಾಧಿಸುತ್ತವೆ. ಜನಸಂಖ್ಯೆಯನ್ನು ವಿವಿಧ ಪ್ರಾಯದ ಗುಂಪುಗಳಾಗಿ ವಿಂಗಡಿಸಿ ಒಟ್ಟು ಜನಸಂಖ್ಯೆಯಲ್ಲಿ ಪ್ರತಿಯೊಂದು ಗುಂಪು ಎಷ್ಟೆಂಬುದನ್ನು ಆನುಪಾತಿಕವಾಗಿ ವಿಶ್ಲೇಷಿಸುವುದೇ ಜನಸಂಖ್ಯಾ ಪ್ರಾಯ ರಚನೆಯಾಗಿದೆ.

| ಪ್ರಾಯ ವಿಭಾಗ | ಪ್ರಾಯ |
|---|---|
| 0-14 | ಮಕ್ಕಳು |
| 15-59 | ಯುವ ಜನರು |
| 60 ಕ್ಕಿಂತ ಮೇಲ್ಪಟ್ಟವರು | ವಯಸ್ಕರು |

*Source: Technical Group on Population Projections (1996 and 2006) of the National Commission on Population. http://populationcommission.nic.in/facts1.htm*

ಜನನ ಪ್ರಮಾಣ ಮತ್ತು ಮರಣ ಪ್ರಮಾಣವು ಒಂದು ಪ್ರದೇಶದ ಜನಸಂಖ್ಯಾ ಪ್ರಾಯರಚನೆಯ ಮೇಲೆ ಪ್ರಭಾವ ಬೀರುತ್ತವೆ. ಸರಿಯಾದ ಆರೋಗ್ಯ ಸಂರಕ್ಷಣಾ ವ್ಯವಸ್ಥೆಗಳ ಅಭಾವ, ರೋಗಗಳು ಮತ್ತು ಇತರ ಕೆಲವು ಕಾರಣಗಳು ನಮ್ಮ ದೇಶದಲ್ಲಿ ಹಿಂದೆ ಜೀವಿತಾವಧಿ ಕಡಿಮೆಯಾಗಲು ಕಾರಣವಾಯಿತು. ಅಲ್ಲದೆ ಶಿಶು-ಮಾತೃಮರಣ ಪ್ರಮಾಣಗಳ ಹೆಚ್ಚಳವೂ ಜನಸಂಖ್ಯಾ ಪ್ರಾಯರಚನೆಯ ಮೇಲೆ ಪ್ರಭಾವ ಬೀರಿತು. ಆದರೆ ದೇಶದ ಅಭಿವೃದ್ಧಿಯೊಂದಿಗೆ, ಜೀವನಮಟ್ಟ ಮತ್ತು ಜೀವಿತಾವಧಿಯೂ ಹೆಚ್ಚಾಯಿತು. ತುಲನಾತ್ಮಕವಾಗಿ ವಯಸ್ಕ ವಿಭಾಗದ ಪ್ರಾಯ ರಚನೆಯ ಅನುಪಾತವು ಕಿರಿಯರ ಪ್ರಾಯ ವಿಭಾಗಕ್ಕಿಂತ ಹೆಚ್ಚಾಯಿತು. ಈ ರೀತಿಯ ಪ್ರಾಯ ರಚನೆಯನ್ನು 'ವೃದ್ಧಾಪ್ಯ ಜನತೆ' (*Ageing Population*) ಎನ್ನುತ್ತಾರೆ.

2011ರ ಜನಗಣತಿಯ ಪ್ರಕಾರ ಭಾರತದ ವಿವಿಧ ಪ್ರಾಯವಿಭಾಗದ ಅಂಕಿಅಂಶಗಳನ್ನು ಕೆಳಗೆ ನೀಡಲಾಗಿದೆ.



| ಪ್ರಾಯ ವಿಭಾಗ | ಶೇಕಡಾಮಾನ |
|---|---|
| 0 – 14 ವಯಸ್ಸು | 29 |
| 15 – 59 | 63 |
| 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಪ್ರಾಯದವರು | 8 |

*Source: Based on data from the Technical Group on Population Projections (1996 and 2006) of the National Commission on Population.*

*Webpage for 1996 Report: http://populationcommission.nic.in/facts1.htm*

- ಅತೀ ಹೆಚ್ಚು ಜನಸಂಖ್ಯೆ ಯಾವ ಪ್ರಾಯ ವಿಭಾಗದಲ್ಲಿದೆ?
- ಕಡಿಮೆ ಜನಸಂಖ್ಯೆ ಯಾವ ಪ್ರಾಯ ವಿಭಾಗದಲ್ಲಿದೆ?

ಭಾರತದ ಜನಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ಯುವಜನರನ್ನೂ, ಕಡಿಮೆ ಪ್ರಮಾಣದಲ್ಲಿ ವಯಸ್ಕರನ್ನೂ ಹೊಂದಿದೆಯೆಂದು ಮೇಲಿನ ಪಟ್ಟಿ ಸೂಚಿಸುತ್ತದೆ. ಉದ್ಯೋಗ ವಲಯದಲ್ಲಿ ಹೆಚ್ಚಿನ ಕೊಡುಗೆ ನೀಡಲು ಮತ್ತು ಆ ಮೂಲಕ ಆರ್ಥಿಕ ಅಭಿವೃದ್ಧಿಯನ್ನುಂಟುಮಾಡಲು ಯುವಜನತೆಗೆ ಸಾಧ್ಯವಿದೆ. ಆದುದರಿಂದ ಯುವಜನತೆಗೆ ವಿದ್ಯಾಭ್ಯಾಸ ಮತ್ತು ಆರೋಗ್ಯ ಸಂರಕ್ಷಣೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾದುದು ಅನಿವಾರ್ಯವಾಗಿದೆ. ಅಂತೆಯೇ ವಯಸ್ಕರಿಗೆ ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ಸಂರಕ್ಷಣಾ ವ್ಯವಸ್ಥೆ ನೀಡುವತ್ತ ಗಮನಹರಿಸಬೇಕಾಗಿದೆ.



2011 ರ ಜನಗಣತಿ ಪ್ರಕಾರ ಭಾರತದ ಮತ್ತು ಕೇರಳದ ಜನಸಂಖ್ಯಾ ಪ್ರಾಯ ರಚನೆಯನ್ನು ಕಂಡುಹಿಡಿದು ವೃದ್ಧಾಪ್ಯ ಜನತೆಯು ದೇಶ ಮತ್ತು ರಾಜ್ಯದ ಅಭಿವೃದ್ಧಿಯಲ್ಲಿ ಹೇಗೆ ಪ್ರಭಾವ ಬೀರುತ್ತಾರೆ ಎಂಬುದರ ಕುರಿತು ತರಗತಿಯಲ್ಲಿ ಚರ್ಚೆ ನಡೆಸಿರಿ.

## ಆಶ್ರಿತಾನುಪಾತ

ಒಂದು ದೇಶದ ದುಡಿಯುವ ವರ್ಗವು 15 ರಿಂದ 64 ವಯಸ್ಸಿನವರೆಗಿನ ಪ್ರಾಯದವರಾಗಿದ್ದಾರೆ (ಸಕ್ರಿಯ ಪ್ರಾಯ ರಚನೆ). 15 ವರ್ಷಕ್ಕಿಂತ ಕಡಿಮೆ ಮತ್ತು 64 ವರ್ಷಕ್ಕಿಂತ ಮೇಲ್ಪಟ್ಟವರು ಆಶ್ರಿತ ವಿಭಾಗದಲ್ಲಿ ಒಳಗೊಳ್ಳುತ್ತಾರೆ.

ಜನಸಂಖ್ಯೆಯಲ್ಲಿನ ಆಶ್ರಿತ ವಿಭಾಗ ಮತ್ತು ದುಡಿಯುವ ವಿಭಾಗವನ್ನು ಪರಸ್ಪರ ಹೋಲಿಸುವ ಮಾನದಂಡವನ್ನು ಆಶ್ರಿತಾನುಪಾತ ಎನ್ನುತ್ತಾರೆ.

ಆಶ್ರಿತಾನುಪಾತವು ಒಂದು ದೇಶದ ಆರ್ಥಿಕ ದಕ್ಷತೆಯ ಮೇಲೆ ಒಂದು ಹಂತದವರೆಗೆ ಪ್ರಭಾವ ಬೀರುತ್ತದೆ. ಆಶ್ರಿತಾನುಪಾತವನ್ನು ತಿಳಿದುಕೊಳ್ಳುವ ಮೂಲಕ ಸರಕಾರಗಳಿಗೆ ಆರೋಗ್ಯ ವ್ಯವಸ್ಥೆ ಮತ್ತು ವಿದ್ಯಾಭ್ಯಾಸ ವಲಯಗಳ ಕುರಿತು ಸ್ಪಷ್ಟವಾಗಿ ಮೌಲ್ಯಮಾಪನ ಮಾಡಲು ಹಾಗೂ ಅದರೊಂದಿಗೆ ಅಗತ್ಯವಾದ ಚಟುವಟಿಕೆಗಳನ್ನು ಆಯೋಜಿಸಲೂ ಸಾಧ್ಯವಾಗುತ್ತದೆ.

ಕ್ಷೇಮ ಮತ್ತು ಕಾಳಜಿಯ ಅಗತ್ಯವಿರುವ ಜನರ ಸಂಖ್ಯೆಯನ್ನು ತಿಳಿದುಕೊಳ್ಳಲು ಮತ್ತು ಅವರಿಗೆ ಬೇಕಾದ ಯೋಜನೆಗಳನ್ನು ರೂಪಿಸಲು ಆಶ್ರಿತಾನುಪಾತವು ಸಹಾಯಕವಾಗುತ್ತದೆ.

ಆಶ್ರಿತಾನುಪಾತ ಹೆಚ್ಚುವಾಗ ವೃದ್ಧರ ಸಂಖ್ಯೆಯೂ ಹೆಚ್ಚುತ್ತದೆ ಎಂಬುದು ದೇಶವು ಎದುರಿಸುತ್ತಿರುವ ಸಮಸ್ಯೆಗಳಲ್ಲೊಂದಾಗಿದೆ. ಇದರಿಂದ ಕೆಲಸ ಮಾಡುವ ಸಾಮರ್ಥ್ಯವುಳ್ಳವರು (15-64 ರ ಮಧ್ಯೆ ಪ್ರಾಯದವರು) ಕೆಲಸ ಮಾಡಲು ಸಾಮರ್ಥ್ಯವಿಲ್ಲದ ದೊಡ್ಡ ವಿಭಾಗವನ್ನು ಸಲಹಬೇಕಾದ ಅನಿವಾರ್ಯತೆಯುಂಟಾಗುತ್ತದೆ. ಅಶ್ರಿತಾನುಪಾತವು ಕಡಿಮೆಯಾಗುವುದು ದೇಶದ ಆರ್ಥಿಕ ಪ್ರಗತಿಗೆ ಸಹಾಯಕವಾಗುತ್ತದೆ. ಅಂದರೆ ಸಕ್ರಿಯಪ್ರಾಯ ರಚನೆಯಲ್ಲಿರುವ ಉದ್ಯೋಗದಲ್ಲಿ ಪಾಲ್ಗೊಳ್ಳುವವರ ಪ್ರಮಾಣವು ಉದ್ಯೋಗದಲ್ಲಿ ಪಾಲ್ಗೊಳ್ಳದವರ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಇದನ್ನು ಜನಸಂಖ್ಯಾ ಲಾಭಾಂಶ ಅಥವಾ ಜನಸಂಖ್ಯಾಪರಸಾಧನೆ (Demographic Dividend) ಎನ್ನುತ್ತಾರೆ. ಉದ್ಯೋಗದಲ್ಲಿ ಪಾಲ್ಗೊಳ್ಳಲು ಸಾಮರ್ಥ್ಯವುಳ್ಳವರು ಕಾಲಕ್ರಮೇಣ ಕೆಲಸ ಮಾಡಲು ಸಾಮರ್ಥ್ಯವಿಲ್ಲದ ವಿಭಾಗವಾಗಿ ಬದಲಾಗುವುದರಿಂದ ಇದು ಸ್ಥಿರವಲ್ಲ.

**ಜನಸಂಖ್ಯಾ ಲಾಭಾಂಶದ ಒಳಿತುಗಳು**

- ದೇಶದ ಸಾಮಾಜಿಕ – ಆರ್ಥಿಕ ಅಭಿವೃದ್ಧಿ ಹೆಚ್ಚಾಗುತ್ತದೆ.
- ದೇಶದ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುತ್ತದೆ.
- ದೇಶಕ್ಕೆ ಉನ್ನತ ಮಾನವ ಸಂಪನ್ಮೂಲ ಲಭಿಸುತ್ತದೆ.

ಜನಸಂಖ್ಯಾ ಲಾಭಾಂಶದ ಎಲ್ಲಾ ಒಳಿತುಗಳು ಲಭಿಸಲು ಯುವ ಜನರಿಗೆ ಉತ್ತಮ ಉದ್ಯೋಗಾವಕಾಶಗಳು ಲಭಿಸಬೇಕಾದುದು ಅತ್ಯಗತ್ಯವಾಗಿದೆ. ಇದಕ್ಕಾಗಿ ಅನೇಕ ನವಉದ್ಯಮಶೀಲ ಸಂಸ್ಥೆಗಳು ಇಂದು ಅಸ್ತಿತ್ವದಲ್ಲಿವೆ.

KERALA STARTUP MISSION™

ಕೇರಳ ಸ್ಟಾರ್ಟಪ್ ಮಿಶನ್ ಉದ್ಯಮಶೀಲತೆ ಅಭಿವೃದ್ಧಿ ಮತ್ತು ಚಟುವಟಿಕೆಗಳಿಗಾಗಿರುವ ಕೇರಳ ಸರಕಾರದ ನೋಡೆಲ್ ಏಜೆನ್ಸಿಯಾಗಿದೆ. ತಂತ್ರಜ್ಞಾನ ಆಧಾರಿತ ವಾಣಿಜ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ 2006 ರಲ್ಲಿ ತಿರುವನಂತಪುರವನ್ನು ಕೇಂದ್ರವನ್ನಾಗಿಸಿ ಇದರ ಕಾರ್ಯಚಟುವಟಿಕೆಗಳು ಆರಂಭ ಗೊಂಡಿತು.

ST-421-13-SOC. SCI.-I (K)-9-VOL-1

ಭಾರತಕ್ಕೆ ಜನಸಂಖ್ಯಾ ಲಾಭಾಂಶದ ಪ್ರಯೋಜನಗಳನ್ನು ಪಡೆಯಲು ಅಗತ್ಯವಾದ ವಿಷಯಗಳ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಭಾರತದ ಬಹುಪಾಲು ಜನಸಂಖ್ಯೆಯು ಯುವಜನರನ್ನು ಒಳಗೊಂಡಿದೆ. ದೇಶದ ಸುಸ್ಥಿರ ಅಭಿವೃದ್ಧಿಗೆ ಮಾನವ ಸಂಪನ್ಮೂಲದ ಸಾಮರ್ಥ್ಯವು ಪ್ರಧಾನವಾಗಿದೆ. ಈ ಪಾಠಭಾಗದಲ್ಲಿ ನಾವು ಜನಸಂಖ್ಯೆಯ ಒಲವುಗಳಾದ ಜನನ-ಮರಣ ಪ್ರಮಾಣ, ವಲಸೆ, ಪ್ರಾಯರಚನೆ, ಸ್ತ್ರೀ-ಪುರುಷ ಅನುಪಾತ, ಆಶ್ರಿತಾನುಪಾತ, ಜೀವಿತಾವಧಿ ಮೊದಲಾದವುಗಳ ಬಗ್ಗೆ ಚರ್ಚಿಸಿದೆವು. ಜನಸಂಖ್ಯಾ ಲಾಭಾಂಶದಲ್ಲಿ ಯುವಜನರ ಪ್ರಯೋಜನವನ್ನು ಪಡೆಯುವುದರೊಂದಿಗೆ ಆಶ್ರಿತ ವಿಭಾಗದ ಸಂರಕ್ಷಣೆಯನ್ನೂ ಪರಿಗಣಿಸಬೇಕಾಗಿದೆ.

## ರಾಷ್ಟ್ರೀಯ ಜನಸಂಖ್ಯಾ ನೀತಿ

ಭಾರತದ ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಲು ಬೇಕಾದ ಆಲೋಚನೆಗಳು ಸ್ವಾತಂತ್ರ್ಯಪೂರ್ವದಲ್ಲೇ ರಾಷ್ಟ್ರೀಯ ಚಳುವಳಿಗಳ ಭಾಗವಾಗಿ ಪ್ರಾರಂಭಿಸಲಾಗಿತ್ತು. ಸ್ವಾತಂತ್ರ್ಯಾನಂತರ ಸರಕಾರದ ಮುಂದಾಳುತ್ವದಲ್ಲಿ ಕುಟುಂಬ ಕಲ್ಯಾಣ ಯೋಜನೆ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೂಲಕ, ಈ ಯೋಜನೆಯನ್ನು ಪ್ರಾರಂಭಿಸಿದ ಮೊದಲ ಅಭಿವೃದ್ಧಿಶೀಲ ರಾಷ್ಟ್ರವಾಗಿ ಭಾರತ ಬದಲಾಯಿತು. 1976ರಲ್ಲಿ ಭಾರತದ ಮೊತ್ತಮೊದಲ ರಾಷ್ಟ್ರೀಯ ಜನಸಂಖ್ಯಾ ನೀತಿಯು ಜಾರಿಗೆ ಬಂತು. ಆನಂತರ ಡಾ. ಎಂ. ಎಸ್. ಸ್ವಾಮಿನಾಥನ್ ಅವರ ನೇತೃತ್ವದಲ್ಲಿ ದೀರ್ಘಕಾಲೀನ ಸಾಧನೆಗಳನ್ನು ಉದ್ದೇಶವಾಗಿರಿಸಿ ಹೊಸ ಜನಸಂಖ್ಯಾ ನೀತಿಯ ಕರಡು ರೂಪಿಸಲಾಯಿತು. ಇದರ ಆಧಾರದಲ್ಲಿ 2000 ದಲ್ಲಿ ಪ್ರಸ್ತುತ ರಾಷ್ಟ್ರೀಯ ಜನಸಂಖ್ಯಾ ನೀತಿ ಜಾರಿಗೆ ಬಂತು. 2045 ರ ಹೊತ್ತಿಗೆ ಸುಸ್ಥಿರ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಪ್ರಗತಿ ಮತ್ತು ಪರಿಸರ ಸಂರಕ್ಷಣೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಜನಸಂಖ್ಯೆಯನ್ನು ಕ್ರಮೀಕರಿಸಬೇಕೆಂಬುದು ರಾಷ್ಟ್ರೀಯ ಜನಸಂಖ್ಯಾ ನೀತಿ - 2000 ದ ದೀರ್ಘಾವಧಿಯ ಉದ್ದೇಶವಾಗಿದೆ.

ಆಧಾರ: National Population Policy 2000 Published by Govt. of India.

ಪ್ರತಿಯೊಬ್ಬ ವ್ಯಕ್ತಿಯ ಸಂಪೂರ್ಣ ಜ್ಞಾನ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳುವ ಮೂಲಕ ವೈಯುಕ್ತಿಕ, ಸಾಮಾಜಿಕ ಮತ್ತು ಆರ್ಥಿಕ ಯೋಗಕ್ಷೇಮವನ್ನು ಖಾತರಿಪಡಿಸಲು ದೇಶದ ಮಾನವ ಸಂಪನ್ಮೂಲ ಸಾಮರ್ಥ್ಯಕ್ಕೆ ಸಾಧ್ಯವಿದೆ. ಭಾರತೀಯರು ಲಭ್ಯವಿರುವ ಸಂಪನ್ಮೂಲಗಳು ಮತ್ತು ಪರಿಸರವನ್ನು ಈಗಿನ ಪೀಳಿಗೆಯ ಅಗತ್ಯಗಳಿಗೆ ಉಪಯೋಗಿಸುವುದರೊಂದಿಗೆ, ಭವಿಷ್ಯದ ಪೀಳಿಗೆಗೆ ಉಪಯುಕ್ತವಾಗುವಂತೆ ಬಳಸಿದರೆ ಮಾತ್ರವೇ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದು.

## ಮುಂದುವರಿದ ಚಟುವಟಿಕೆಗಳು

- www.censusindia.gov.in ಎಂಬ ವೆಬ್‌ಸೈಟ್ ಸಂದರ್ಶಿಸಿ ಜನಸಂಖ್ಯೆಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿರಿ.
- ಅಂತಾರಾಷ್ಟ್ರೀಯ ವಲಸೆಯಿಂದಾಗಿ ಮಾನವ ಸಂಪನ್ಮೂಲದ ಕೊರತೆಯುಂಟಾಗುತ್ತಿರುವ ಕೇರಳದ ಪ್ರದೇಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕೊಲಾಶ್ ತಯಾರಿಸಿರಿ.
- ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್ ಸಂದರ್ಶಿಸಿ ಭಾರತದಿಂದಿರುವ ವಲಸೆಯ ಅಂಕಿ ಅಂಶಗಳನ್ನು ಸಂಗ್ರಹಿಸಿ ಚಾರ್ಟು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.
- NSO ವೆಬ್ ಸೈಟ್ ನಿಂದ (https://mospi.gov.in) ಭಾರತದ ಇತರ ರಾಜ್ಯಗಳ ಸ್ತ್ರೀ-ಪುರುಷಾನುಪಾತವನ್ನು ಕಂಡುಹಿಡಿಯಿರಿ. ವಿವಿಧ ರಾಜ್ಯಗಳಲ್ಲಿ ಸ್ತ್ರೀ-ಪುರುಷ ಅನುಪಾತದಲ್ಲಿ ವ್ಯತ್ಯಾಸವಿರಲು ಕಾರಣಗಳೇನು? ತರಗತಿಯಲ್ಲಿ ಚರ್ಚಿಸಿ ವಿಷಯವನ್ನು ಸಮರ್ಥಿಸಿರಿ.

  ಚರ್ಚಾ ಸೂಚಕಗಳು:

  - ಹೆಣ್ಣು ಭ್ರೂಣ ಹತ್ಯೆ
  - ಗಂಡು ಮಕ್ಕಳ ಬಗೆಗಿನ ಆದ್ಯತಾ ಮನೋಭಾವ
  - ಅಸಮರ್ಪಕ ಆರೋಗ್ಯ ಸಂರಕ್ಷಣಾ ವ್ಯವಸ್ಥೆ

- ಕೇರಳದಲ್ಲಿ ಸ್ತ್ರೀ-ಪುರುಷ ಅನುಪಾತವನ್ನು ಸುಧಾರಿಸಲು ಮತ್ತು ಮಹಿಳೆಯರ ಮತ್ತು ಮಕ್ಕಳ ಉನ್ನತಿಗಾಗಿ ಸರಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ.

  - ಸಹಾಯ ಹಸ್ತಂ
  - ಪ್ರತ್ಯಾಶಾ
  - ವಿವಕೇರಳ

  ಈ ಯೋಜನೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಲಘು ಟಿಪ್ಪಣಿ ತಯಾರಿಸಿರಿ.

- ಕೇರಳದ ಜನಸಂಖ್ಯಾ ಬೆಳವಣಿಗೆಯ ಬಗ್ಗೆ ಒಂದು ವಿಚಾರಗೋಷ್ಠಿ ಆಯೋಜಿಸಿ ಕೆಳಗೆ ನೀಡಿರುವ ಆಶಯಗಳನ್ನು ಪರಿಗಣಿಸಿ ವಿಚಾರಗೋಷ್ಠಿ ಪ್ರಬಂಧವನ್ನು ಸಿದ್ಧಪಡಿಸಿರಿ.

  - ಕೇರಳದಲ್ಲಿ ಜನಸಂಖ್ಯೆ ಹೆಚ್ಚಿರುವ ಮತ್ತು ಕಡಿಮೆಯಿರುವ ಜಿಲ್ಲೆ.
  - ಕೇರಳದಲ್ಲಿ ಜನಸಾಂದ್ರತೆ - ಹೆಚ್ಚಿರುವ ಮತ್ತು ಕಡಿಮೆಯಿರುವ ಜಿಲ್ಲೆ.
  - ವಲಸೆ-ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ
  - ಜನನ-ಮರಣ ಪ್ರಮಾಣ
  - ಜೀವಿತಾವಧಿ
  - ಪ್ರಾಯರಚನೆ

- ಜನಸಂಖ್ಯಾ ಲಾಭಾಂಶ
-
-

- ಜನಸಂಖ್ಯಾ ಶಾಸ್ತ್ರದ ಸಾಮಾಜಿಕ ವಿಶೇಷತೆಗಳ ಕುರಿತು ಟಿಪ್ಪಣಿ ತಯಾರಿಸಿರಿ.
- ಮಿನಿಸ್ಟ್ರಿ ಓಫ್ ಎಕ್ಸ್‌ಟರ್ನಲ್ ಅಫೆಯೇರ್ಸ್ ವೆಬ್‌ಸೈಟನ್ನು ಸಂದರ್ಶಿಸಿ ಭಾರತದಿಂದ ಇತರ ದೇಶಗಳಿಗೆ ವಲಸೆ ಹೋಗುವವರ ಅಂಕಿಅಂಶಗಳನ್ನು ಕಂಡುಹಿಡಿದು ಚಾರ್ಟಿನಲ್ಲಿ ಬರೆದು ಪ್ರದರ್ಶಿಸಿರಿ.

# ಟಿಪ್ಪಣಿಗಳು

# ಟಿಪ್ಪಣಿಗಳು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in